ಜನಶಕ್ತಿ


ದುಡಿವ ಜನರ ಪ್ರಾಣಮಿತ್ರ
ಸಂಪುಟ 3 ಸಂಚಿಕೆ 28
ಜುಲೈ 12, 2009
ಕನ್ನಡ ವಾರಪತ್ರಿಕೆ
5/-




ಈ ಬಜೆಟ್ ಯಾರಿಗಾಗಿ ?




ವಿದ್ಯುತ್ ಕೊರತೆ - ದರ ಏರಿಕೆ
ಅರಾಜಕ ನೀತಿಯ ಫಲ



ಜ್ಯೋತಿಷ್ಯ - ಯೋಗ :
ಶಿಕ್ಷಣಕ್ಕೆ ತಗಲುತ್ತಿರುವ
ಕೇಸರಿ ರೋಗ



ತೆರೆದುಕೊಳ್ಳುತ್ತಿರುವ
ಆರ್ಥಿಕ ಬಿಕ್ಕಟ್ಟಿನ ಭೀಕರ ಮುಖ



ಕರಾವಳಿಯ ರೈತ ಚಳುವಳಿಯ ಒಬ್ಬ ನೆಚ್ಚಿನ ಸಂಗಾತಿ ನಮ್ಮಿಂದ ದೂರವಾಗಿದ್ದಾರೆ. ನಮ್ಮನ್ನಗಲಿದ್ದಾರೆ

ದಕ್ಷಿಣ ಕನ್ನಡ ಜಿಲ್ಲೆ ರೈತ ನಾಯಕ ಕಾಂ. ರಾಮಚಂದ್ರ ಉಚ್ಚಿಲ್ ಇನ್ನಿಲ್ಲ

ಕೆ.ಆರ್.ಶ್ರೀಯಾನ್

ಸುಮಾರು ನಾಲ್ಕುವರೆ ದಶಕಗಳಿಗೂ ಮಿಕ್ಕಿದ ಕಾಲಾವಧಿಯಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಭೂಮಾಲಕರ ದಬ್ಬಾಳಿಕೆಗೊಳಗಾಗಿದ್ದ ಸಹಸ್ರಾರು ರೈತರನ್ನು ಸಂಘಟಿಸಿ ಅವರ ಹೋರಾಟಗಳಿಗೆ ಮುಂಚೂಣಿಯಲ್ಲಿದ್ದು ನೇತೃತ್ವ ನೀಡಿದ್ದ ರೈತಮುಖಂಡರೂ, ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಸದಸ್ಯರೂ ಆಗಿದ್ದ ಕಾ.ರಾಮಚಂದ್ರ ಉಚ್ಚಿಲರು (68) ದಿನಾಂಕ : 21.06.2009 ರಂದು ಹೃದಯಾಘಾತದಿಂದ ನಿಧನರಾದರು. ಇವರ ನಿಧನದಿಂದ ದಕ್ಷಿಣಕನ್ನಡ ಜಿಲ್ಲೆಯ ರೈತ ಚಳುವಳಿಗೆ ಹಾಗೂ ಸಿಪಿಐ(ಎಂ) ಪಕ್ಷಕ್ಕೆ ಗಂಭೀರವಾದ ನಷ್ಟವಾಗಿದೆ.

ಬಡ ಕುಟುಂಬದಲ್ಲಿ ಜನಿಸಿದ ಕಾ.ಉಚ್ಚಿಲರು ಸೋಮೇಶ್ವರ ಗ್ರಾಮದ ಉಚ್ಚಿಲ ಪ್ರದೇಶದಲ್ಲಿ ವಾಸಿಸುತ್ತಿದ್ದರು. ಕುಟುಂಬದ ಪೋಷಣೆಗಾಗಿ ಮರದ ಕೆಲಸದ ಕಾರ್ಮಿಕನಾಗಿ ಸಣ್ಣ ಪ್ರಾಯದಲ್ಲೇ ದುಡಿಮೆಗೆ ಸೇರಿದ್ದರು. ವಿದ್ಯಾಭ್ಯಾಸ ಮಾಡಲು ಬಡತನದ ದೆಸೆಯಿಂದ ಮನೆಯಲ್ಲಿ ಪ್ರೋತ್ಸಾಹವಿರಲಿಲ್ಲ. ಆದ್ದರಿಂದ ಚಿಕ್ಕಂದಿನಿಂದಲೇ ಕೆಲಸ ಮಾಡಬೇಕಾಗಿ ಬಂತು.

ಬಾಲ್ಯದಲ್ಲೇ ಕಮ್ಯೂನಿಸ್ಟ್ ಚಳುವಳಿಯ ಸೆಳೆತ

ಚಿಕ್ಕಂದಿನಿಂದಲೇ ಕಮ್ಯೂನಿಸ್ಟ್ ಪಕ್ಷಕ್ಕೆ ಆಕರ್ಷಿತರಾದರು. ತನ್ನ ವಾಸಸ್ಥಳದಲ್ಲಿ ಸುತ್ತಮುತ್ತಲ ಪ್ರದೇಶಗಳಲ್ಲಿರುವ ಕಾರ್ಮಿಕರ ಮಧ್ಯೆ, ರೈತರ ಮಧ್ಯೆ ಸಂಪರ್ಕ ಬೆಳೆಸಿ ಅವರೊಂದಿಗೆ ಬೆರೆತರು.

ಮಂಗಳೂರಿನಲ್ಲಿ ಸಂಘಟಿತರಾಗಿದ್ದ ಹಂಚಿನ ಕಾರ್ಮಿಕರು ಅನೇಕರು ಅವರು ವಾಸಿಸುತ್ತಿದ್ದ ಪ್ರದೇಶದಲ್ಲಿ ಆಸುಪಾಸಿನ ಗ್ರಾಮಗಳಲ್ಲಿ ವಾಸಿಸುತ್ತಿದ್ದರು. ಅವರು ಕಾರ್ಖಾನೆಗಳಲ್ಲಿ ನಡೆಸುತ್ತಿದ್ದ ಹೋರಾಟಗಳ ಬಗ್ಗೆ ತಿಳಿದುಕೊಳ್ಳಲು ಚಿಕ್ಕ ಪ್ರಾಯದಲ್ಲೇ ಕಾಂ. ಉಚ್ಚಿಲರು ಹೆಚ್ಚು ಉತ್ಸುಕತೆ ತೋರಿಸುತ್ತಿದ್ದರು ಮತ್ತು ಅವರೊಂದಿಗೆ ಚರ್ಚೆ ಮಾಡುತ್ತಿದ್ದರು.

ಕಾಂ.ರಾಮಚಂದ್ರ ಉಚ್ಚಿಲರು ವಾಸಿಸುತ್ತಿದ್ದ ಪ್ರದೇಶದ ಸುತ್ತಲಿನ ಗ್ರಾಮಗಳಲ್ಲಿ ಕಮ್ಯೂನಿಸ್ಟ್ ಪಕ್ಷದ ಚಟುವಟಿಕೆಗಳು ನಡೆಯುತ್ತಿದ್ದವು. ಹಂಚಿನ ಕಾರ್ಖಾನೆಗಳ ಅನೇಕ ಕಾರ್ಮಿಕರು ತಮ್ಮ ಗ್ರಾಮಗಳಲ್ಲಿ ಪಾರ್ಟಿ ಶಾಖೆಗಳಲಿದ್ದು ಅಲ್ಲಿ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದ್ದರು. ಅಂದಿನ ದಿನಗಳಲ್ಲಿ 1948 ರ ಬಳಿಕ ಈ ಪ್ರದೇಶದಲ್ಲಿ ರೈತಸಂಘದ ಚಟುವಟಿಕೆಗಳೂ ಬೆಳೆದುಬರುತ್ತಿದ್ದವು.

ಎ.ಕೃಷ್ಣಶೆಟ್ಟರು ಈ ಪ್ರದೇಶದವರೇ ಆಗಿದ್ದು ಕಮ್ಯೂನಿಸ್ಟ್ ಪಕ್ಷದ ಮುಖಂಡರಾಗಿದ್ದರು. ಕೋಟೆಕಾರು ಮತ್ತು ಸುತ್ತಲಿನ ಗ್ರಾಮಗಳಲ್ಲಿ ಚಾಲಗೇಣಿ ವಕ್ಕಲುಗಳಿಗೆ ಭೂಮಾಲಕರಿಂದ ಆಗುತ್ತಿದ್ದ ಕಿರುಕುಳ, ದೌರ್ಜನ್ಯಗಳ ವಿರುದ್ಧವಾಗಿ ರೈತರು ನಡೆಸುತ್ತಿದ್ದ ಪ್ರತಿಭಟನೆಗಳಿಗೆ ತಾನೊಬ್ಬ ಭೂಮಾಲಕ ಕುಟುಂಬದಲ್ಲಿ ಜನಿಸಿದವರಾಗಿದ್ದರೂ ರೈತರಿಗೆ ಸಹಾಯ ಮಾಡುತ್ತಿದ್ದರು. ಕೋಟೆಕಾರ್ ಸರ್ಕಲ್‌ನಲ್ಲಿ ರೈತ ಸಂಘದ ಚಟುವಟಿಕೆಗಳಿಗೆ ಕೃಷ್ಣಶೆಟ್ಟರು ಮಾರ್ಗದರ್ಶನ ನೀಡುತ್ತಿದ್ದರು. ಆಗಲೇ ಎಂ.ಎಚ್.ಕೃಷ್ಣಪ್ಪ ನವರು ಮಂಗಳೂರು ತಾಲ್ಲೂಕು ರೈತ ಸಂಘದ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಕೃಷ್ಣಶೆಟ್ಟರು ಈ ಪ್ರದೇಶದ ಪಕ್ಷದ ಮುಖ್ಯ ಕಾರ್ಯಕರ್ತರಾಗಿದ್ದ ಯು.ಜನಾರ್ಧನ ನಾಯಕ್‌ರನ್ನು ಸದಾ ತನ್ನೊಂದಿಗೆ ಸೇರಿಸಿಕೊಂಡು ಪಕ್ಷದ ಹಾಗೂ ರೈತಸಂಘದ ಚಟುವಟಿಕೆಗಳನ್ನು



ವಿದ್ಯುತ್ ಖಾಸಗೀಕರಣ ನೀತಿ, ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವ ಧೋರಣೆ ವಿರುದ್ಧ ನಡೆದ ಆಂದೋಲನದ ಮುಂಚೂಣಿಯಲ್ಲಿ ಕಾಂ. ಉಚ್ಚಿಲ್

ನಡೆಸುತ್ತಿದ್ದರು. ಇವರಿಂದ ಆಕರ್ಷಿತರಾದ ಕಾಂ.ರಾಮಚಂದ್ರ ಉಚ್ಚಿಲರೂ 1955 ರ ಬಳಿಕ ಇವರೊಂದಿಗೆ ಸಂಪರ್ಕವಿರಿಸಿ ತಾನೂ ಕಾರ್ಯಕ್ರಮಗಳಲ್ಲಿ ಭಾಗವಹಿಸತೊಡಗಿದರು. ಗ್ರಾಮಗಳಿಗೆ ಇವರೊಂದಿಗೆ ಭೇಟಿ ಕೊಟ್ಟು ರೈತರನ್ನು ಸಂಘಟಿಸುವ ಕೆಲಸದಲ್ಲಿ ಹೆಚ್ಚು ಮುತುವರ್ಜಿವಹಿಸಿ ಕೆಲಸ ಮಾಡಲು ಆರಂಭಿಸಿದರು.

ರೈತ ಆಂದೋಲನದಲ್ಲಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಮಿಕ ಚಳುವಳಿ ಬೆಳೆದುಬರುತ್ತಿತ್ತು. ಅದೇ ರೀತಿ ಜಿಲ್ಲೆಯಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ರೈತ ಚಳುವಳಿಯೂ ಬೆಳೆದುಬರುತ್ತಿತ್ತು. ರೈತರ ಹೋರಾಟಗಳಿಗೆ ಸಂಘಟಿತ ಕಾರ್ಮಿಕರು ಬೆಂಬಲ ನೀಡುತ್ತಿದ್ದರು. ತಾವು ಉಳುಮೆ ಮಾಡುತ್ತಿದ್ದ ಭೂಮಿಯಲ್ಲಿ ಶಾಶ್ವತ ಭದ್ರತೆಯಿಲ್ಲದೆ ಚಾಲಗೇಣಿ ವಕ್ಕಲುಗಳಾಗಿ ಸಹಸ್ರಾರು ಸಂಖ್ಯೆಯಲ್ಲಿ ರೈತರು ಉಳುಮೆ ಮಾಡುತ್ತಿದ್ದರು. ಭೂಮಾಲಕರು ರೈತರಿಂದ ವಿಪರೀತ ಗೇಣಿ ವಸೂಲಿ ಮಾಡುತ್ತಿದ್ದರು. ಗೇಣಿ ಕೊಡದಿದ್ದರೆ ಬಲಾತ್ಕಾರವಾಗಿ ವಕ್ಕಲೆಬ್ಬಿಸುತ್ತಿದ್ದರು. ಹೀಗ ಸದಾ ದಬ್ಬಾಳಿಕೆಯಡಿಯಲ್ಲಿ ರೈತರು ಬದುಕಬೇಕಾಗಿತ್ತು. ಇದರಿಂದಾಗಿ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಸಂಘರ್ಷದ ವಾತಾವರಣ ನಿರ್ಮಾಣವಾಗುತ್ತಿತ್ತು. ಈ ಪರಿಸ್ಥಿತಿಯಲ್ಲಿ ಸಹಸ್ರಾರು ಚಾಲಗೇಣಿ ವಕ್ಕಲುಗಳ ರಕ್ಷಣೆಗೆ ರೈತ ಸಂಘಟನೆಯ ಅವಶ್ಯಕತೆಯಿತ್ತು. ಈ ಹಿನ್ನೆಲೆಯಲ್ಲಿ ಎಂ.ಎಚ್. ಕೃಷ್ಣಪ್ಪ, ಎ.ಕೃಷ್ಣಶೆಟ್ಟಿಯವರ ನೇತೃತ್ವದಲ್ಲಿ ದ.ಕ. ಜಿಲ್ಲಾ ರೈತಸಂಘ ಸ್ಥಾಪನೆಯಾಯಿತು. 1954ರಲ್ಲಿ ದಕ್ಷಿಣಕನ್ನಡ ಜಿಲ್ಲಾ ಪ್ರಥಮ ರೈತ ಸಮ್ಮೇಳನ ನಡೆಯಿತು. ಕೃಷ್ಣಶೆಟ್ಟರು ಅಧ್ಯಕ್ಷರಾಗಿಯೂ, ಎಂ.ಎಚ್.ಕೃಷ್ಣಪ್ಪ ಕಾರ್ಯದರ್ಶಿಯಾಗಿಯೂ ಆಯ್ಕೆಯಾದರು. ಬಿ.ಕೊರಗಪ್ಪ ರೈಯವರೂ ರೈತ ಸಂಘದಲ್ಲಿ ಕೆಲಸ ಮಾಡುತ್ತಿದ್ದರು. ಕೋಟೆಕಾರ್ ಸರ್ಕಲ್‌ನಲ್ಲಿ ರೈತ ಸಂಘದ ನಾಯಕರಾಗಿ ಕೊರಗಪ್ಪ ರೈಯವರು ಹೆಚ್ಚು ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದರು. ಗ್ರಾಮಾಂತರ ಪ್ರದೇಶಗಳಲ್ಲಿ ರೈತ ಚಳುವಳಿ, ಪ್ರತಿಭಟನೆಗಳು ಎದ್ದುಬರುತ್ತಿದ್ದವು.

ರೈತರು ಸಹಸ್ರಾರು ಸಂಖ್ಯೆಯಲ್ಲಿ ರೈತ ಸಂಘಕ್ಕೆ ಸೇರಿದರು. ಚಳುವಳಿಗೆ ತೀವ್ರತೆ ಬಂತು. ದಕ್ಷಿಣ ಕನ್ನಡ ಜಿಲ್ಲಾ ರೈತ ಸಂಘವು ಈ ನಿಟ್ಟಿನಲ್ಲಿ ವಿಶಾಲ ಪ್ರಚಾರ ಆರಂಭಿಸಿತು. ವಕ್ಕಲೆಬ್ಬಿಸುವುದಕ್ಕಿದಿರಾಗಿ, ವಿಪರೀತ ಗೇಣಿ ವಿಧಿಸುವುದಕ್ಕಿದಿರಾಗಿ ಪ್ರತಿಭಟನೆಗಳು ಆರಂಭವಾದವು. ಈ ಹಿನ್ನೆಲೆಯಲ್ಲಿ ಯು.ಜನಾರ್ಧನ ನಾಯಕ್‌ರೊಂದಿಗೆ ರಾಮಚಂದ್ರ ಉಚ್ಚಿಲರೂ ರೈತಸಂಘದಲ್ಲಿ ಪೂರ್ಣವಾಗಿ ತನ್ನನ್ನು ತೊಡಗಿಸಿಕೊಂಡರು.

ಬೆಂಗಳೂರಿಗೆ ಕಾಲ್ನಡಿಗೆ ಜಾಥಾ

'ಉಳುವವನೇ ಹೊಲದೊಡೆಯ' ಎಂಬ ರೈತ ಸಂಘದ ಘೋಷಣೆಯಡಿಯಲ್ಲಿ ಜಿಲ್ಲೆಯಲ್ಲಿ ರೈತ ಸಂಘವು ಹೆಚ್ಚು ಆಕರ್ಷಣೆ ಪಡೆಯಿತು. ಜಿಲ್ಲೆಯ ರೈತರ ತೀವ್ರ ಹೋರಾಟಗಳ ಫಲವಾಗಿ 1956 ರಲ್ಲಿ ಅಂದಿನ ಮದರಾಸು ಸರಕಾರವು 'ನ್ಯಾಯ ಗೇಣಿ ಕಾಯಿದೆ' ಜಾರಿಗೆ ತಂದಿತು. ರೈತ ಸಂಘದ ಮೂಲಕ ನ್ಯಾಯ ಗೇಣಿ ಕೋರ್ಟ್‌ಗಳಲ್ಲಿ ಅರ್ಜಿ ಸಲ್ಲಿಸಿದ ಸಹಸ್ರಾರು ರೈತರಿಗೆ ಅರ್ಧಕ್ಕರ್ಧ ಗೇಣಿ ಕಡಿಮೆಯಾಯಿತು. ನ್ಯಾಯಗೇಣಿ ಕೋರ್ಟ್‌ಗಳ ರೈತ ಸಂಘದ ಮುಖಂಡರುಗಳೇ ರೈತರ ಪರ ವಾದಿಸಿದರು. ಜಿಲ್ಲೆಯ ರೈತರ ಹೋರಾಟಗಳಿಗೆ ಸಿಕ್ಕಿದ ಪ್ರಥಮ ವಿಜಯವಿದು. ಆದರೆ ರೈತರು ಉಳುವ ಭೂಮಿಯ ಶಾಶ್ವಯ ಒಡೆತನದ ಹಕ್ಕಿಗಾಗಿ ಭೂಸುಧಾರಣಾ ಕಾಯಿದೆ ಜ್ಯಾರಿಗಾಗಿ ಸರಕಾರವನ್ನು ಒತ್ತಾಯಿಸುವ ಚಳುವಳಿಗಳು ಮುಂದುವರಿದವು. 1966 ರಲ್ಲಿ ಜಿಲ್ಲೆಯಿಂದ ಬೆಂಗಳೂರಿಗೆ ಸರಕಾರವನ್ನು ಒತ್ತಾಯಿಸಲು ಕಾಲ್ನಡಿಗೆ ಜಾಥಾವನ್ನು ಸಂಘಟಿಸಲಾಯಿತು. ಈ ಕಾರ್ಯಕ್ರಮ ಜಿಲ್ಲೆಯ ರೈತಾಪಿ ಜನತೆಯ ಮಧ್ಯೆ ತುಂಬಾ ಪರಿಣಾಮ ಬೀರಿದೆ. ರೈತಸಂಘದ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಹಲವಾರು ಮುಖಂಡರೂ, ಕಾರ್ಯಕರ್ತರೂ ದುಡಿದಿದ್ದಾರೆ. ಮಂಗಳೂರು ತಾಲ್ಲೂಕಿನಾದ್ಯಂತ ರೈತ ಚಳುವಳಿ ಕಟ್ಟುವುದರಲ್ಲಿ ಬಿ.ಕೊರಗಪ್ಪ ರೈ, ಯು.ಜನಾರ್ಧನ ನಾಯಕ್ ಮತ್ತು ರಾಮಚಂದ್ರ ಉಚ್ಚಿಲರ ಪಾತ್ರ ಪ್ರಮುಖವಾದುದು. 1973 ರಲ್ಲಿ ಭೂಸುಧಾರಣಾ ಕಾಯಿದೆ ಜಾರಿಗೆ ಬಂತು. ಇದರಿಂದಾಗಿ ಟ್ರಿಬ್ಯೂನಲ್‌ಗೆ ಅರ್ಜಿ ಸಲ್ಲಿಸಿದ ಸಹಸ್ರಾರು ರೈ[illegible] ತಮ್ಮ ಸ್ವಾಧೀನವಿದ್ದ ಭೂಮಿಯ ಒಡೆತನದ ಹಕ್ಕನ್ನು ಪಡೆಯುವಂತಾಯಿತು. ಇದು ರೈತರ ಚಳುವಳಿಗೆ ಸಿಕ್ಕಿದ ಇನ್ನೊಂದು ವಿಜಯವಾಗಿದೆ.

ರೈತರ ಸ್ವಾದೀನವಿರುವ ಭೂಮಿಯ ಒಡೆತನದ ಹಕ್ಕು ಸಿಕ್ಕಿದರೂ ರೈತರ ಮಧ್ಯೆ ಬೇರೆ ಬೇರೆ ಸಮಸ್ಯೆಗಳು ಉದ್ಭವವಾಗಿವೆ. ದಕ್ಷಿಣ ಕನ್ನಡ ಜಿಲ್ಲಾ ರೈತ ಸಂಘದ ಮುಖಂಡರಾಗಿ ಈ ಸಮಸ್ಯೆಗಳನ್ನೆತ್ತಿ ಹಲವಾರು ಹೋರಾಟಗಳನ್ನು ಕಾಂ.ರಾಮಚಂದ್ರ ಉಚ್ಚಿಲರು ಸಂಘಟಿಸಿದ್ದಾರೆ. ಮುಖ್ಯವಾಗಿ ಗ್ರಾಮಾಂತರ ಪ್ರದೇಶದ ಬಡವರ ನಿವೇಶನದ ಪ್ರಶ್ನೆ, ಸರಕಾರೀ ಭೂಮಿಯನ್ನು ಅತಿಕ್ರಮಿಸಿ ಮನೆಕಟ್ಟಿ ಕೃಷಿ ಮಾಡಿ ಬದುಕುತ್ತಿದ್ದ ಹಲವಾರು ಬಡವರಿಗೆ ಅದರ ಹಕ್ಕು ಪತ್ರದ ಪ್ರಶ್ನೆ, ರೈತರು ಬೆಳೆಸಿದ ಬೆಳೆಗಳಿಗೆ ಬೆಂಬಲ ಬೆಲೆಯ ಪ್ರಶ್ನೆ ಈ ಎಲ್ಲಾ ಸಮಸ್ಯೆಗಳನ್ನೆತ್ತಿ ಜಿಲ್ಲೆಯಲ್ಲಿ ಸರಕಾರದ ನೀತಿಗಿದಿರಾಗಿ ಅನೇಕ ಹೋರಾಟಗಳನ್ನು ರೈತಸಂಘದ ಮೂಲಕ ಕಾಂ. ಉಚ್ಚಿಲರು ಸಂಘಟಿಸಿದ್ದಾರೆ. ಮಂಗಳೂ[illegible] ತಾಲೂಕಿನ ಅನೇಕ ಭಾಗಗಳಲ್ಲಿ ಮನೆಯಿಲ್ಲದ

ಪುಟ 6 ಕ

ಕಳೆದ ಸಂಚಿಕೆಯ ಪುಟ 5 ರಲ್ಲಿ ಪ್ರಕಟಗೊಂಡಿದ್ದ ಸಂಗಾತಿ ಕಾಂ. ರಾಮಚಂದ್ರ ಉಚ್ಚಿಲ್‌ರ ಕುರಿತ ಬರಹವು ತಾಂತ್ರಿಕ ದೋಷದಿಂದಾಗಿ ಸರಿಯಾಗಿ ಮುದ್ರಣಗೊಂಡಿಲ್ಲ. ಹೀಗಾಗಿ ಬರಹವನ್ನು ಪುನರ್ ಮುದ್ರಿಸಲಾಗಿದೆ. ದೋಷಪೂರಿತ ಮುದ್ರಣಕ್ಕಾಗಿ ವಿಷಾದಿಸುತ್ತೇವೆ.

\- ಸಂ.

ವಿದ್ಯುತ್ ಕೊರತೆ ಮತ್ತು ದರ ಏರಿಕೆ ಅರಾಜಕ ವಿದ್ಯುತ್ ನೀತಿಯ ಫಲವೇ ಹೊರತು ಅನಿವಾರ್ಯವೇನಲ್ಲ

ಚುನಾವಣೆಗಳು ಮುಗಿದಿವೆ. ಈಗ ಬಿಜೆಪಿ ರಾಜ್ಯ ಸರ್ಕಾರದಿಂದ ಜನರಿಗೆ ವಿದ್ಯುತ್ ದರ ಏರಿಕೆಯ ಆಘಾತ ಬಂದೆರಗಿದೆ. ಸರ್ಕಾರ ಹೇಳುವಂತೆ ಪ್ರಕೃತಿಯಲ್ಲ ಅದಕ್ಕೆ ಹೊಣೆ. ಖಾಸಗಿ ಕಂಪನಿಗಳಿಗೆ ದುರ್ಲಾಭಕ್ಕೆ ಅವಕಾಶ ನೀಡುವ ನೀತಿಯೇ ಬೆಲೆ ಏರಿಕೆಯ ಮೂಲ ಕಾರಣ.

ಜಿ.ಎನ್.ನಾಗರಾಜ್

ಇತ್ತೀಚಿನ ಒಂದೆರಡು ವಾರಗಳಿಂದ ರಾಜ್ಯದ ಜನತೆ ಒಂದೆಡೆ ಅನಿಯಮಿತ ಲೋಡ್‌ಶೆಡ್ಡಿಂಗ್ ಅಥವಾ ವಿದ್ಯುತ್ ಕಡಿತಕ್ಕೆ ತುತ್ತಾಗಿದೆ. ಮತ್ತೊಂದೆಡೆ ರಾಜ್ಯದ ವಿದ್ಯುತ್ ಮಂತ್ರಿ ಮತ್ತು ಮುಖ್ಯಮಂತ್ರಿಗಳು ವಿದ್ಯುತ್ ದರ ಏರಿಕೆಯ ಬಗ್ಗೆ ನೀಡುತ್ತಿದ್ದ ಸೂಚನೆಗಳು ವಿದ್ಯುತ್ ನಿಯಂತ್ರಣ ಆಯೋಗದ ಮುಂದೆ ವಿದ್ಯುತ್ ಕಂಪನಿಗಳು ದರ ಏರಿಕೆ ಅರ್ಜಿಯನ್ನು ಸಲ್ಲಿಸುವ ಮೂಲಕ ಕಾರ್ಯಗತವಾಗಿದೆ. ಹೀಗಾಗಿ ಕರ್ನಾಟಕದ ಜನತೆ ಒಂದೆಡೆ ದೀರ್ಘಕಾಲಗಳ ವಿದ್ಯುತ್ ಕಡಿತ ಮತ್ತು ದರ ಏರಿಕೆಯ ತೊಂದರೆಗೆ [illegible]ಕಿ ಕೊಳ್ಳಬೇಕಾಗಿದೆ.

ಇವೆರಡಕ್ಕೂ ಮಳೆಯ ಕೊರತೆಯನ್ನು ದೂರಲಾಗುತ್ತಿದೆ. ಆದ್ದರಿಂದ ಇದು ಅನಿವಾರ್ಯ ಎಂದು ಸಮರ್ಥಿಸಿ ಕೊಳ್ಳಲಾಗುತ್ತಿದೆ.



ಮುಂಗಾರು ಕೊರತೆಯಾಗಿರುವುದರಿಂದ ಅದರಲ್ಲಿಯೂ ವಿದ್ಯುತ್ ಜಲಾಶಯಗಳಿಗೆ ನೀರನ್ನು ಒದಗಿಸುವ ಮಲೆನಾಡು, ಕರಾವಳಿ ಪ್ರದೇಶಗಳಲ್ಲಿ ಉಳಿದ ಪ್ರದೇಶಗಳಿಗಿಂತ ಹೆಚ್ಚು ಕೊರತೆಯಾಗಿರುವುದರಿಂದ ರಾಜ್ಯದ ಪ್ರಮುಖ ಜಲ ವಿದ್ಯುತ್ ಕೇಂದ್ರಗಳಾದ ಶರಾವತಿ, ಕಾಳಿ ಜಲಾಶಯ ಗಳು ಬರಿದಾಗುತ್ತಿವೆ. ಹೀಗಾಗಿ ಅಲ್ಲಿ ವಿದ್ಯುತ್ ತಯಾರಿಕೆ ತೀವ್ರ ಕಡಿತವಾಗಿದೆ. ಮುಂದಿನ ಕೆಲವು ದಿನಗಳಲ್ಲಿ ಸಂಪೂರ್ಣ ಸ್ಥಗಿತವಾಗುವ ಪರಿಸ್ಥಿತಿಯಿದೆ. ಅದರಿಂದಾಗಿ ಈಗ ಸದ್ಯಕ್ಕೆ ಅನಿಯಮಿತ ಲೋಡ್‌ಶೆಡ್ಡಿಂಗ್‌ಗೆ ಗುರಿ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಘೋಷಿತ ವಿದ್ಯುತ್ ಕಡಿತ ಅಂದರೆ ಇಷ್ಟು ಘಂಟೆಯಿಂದ ಇಷ್ಟು ಗಂಟೆಯವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ ಎಂದು ಮೊದಲೇ ಘೋಷಿಸುವುದು ಮಾಡಲಾಗುತ್ತದೆ ಎಂದು ಸರ್ಕಾರ ಸೂಚನೆ ನೀಡಿದೆ.

ಜಲವಿದ್ಯುತ್ ಕೊರತೆಯಾಗುವುದರಿಂದ ಹೆಚ್ಚಿನದಾದ ಶಾಖೋತ್ಪನ್ನ ಕೊಳ್ಳಬೇಕಾಗುತ್ತದೆ. ಆದ್ದರಿಂದ ದರ ಏರಿಕೆ ಅನಿವಾರ್ಯ ಎಂದು ಸರ್ಕಾರದ, ವಿದ್ಯುತ್ ಕಂಪನಿಗಳ ವಿವಿಧ ಅಧಿಕಾರಿಗಳು ತಮ್ಮ ದರ ಏರಿಕೆ ಪ್ರಸ್ತಾವನೆಗೆ ಸಮರ್ಥನೆ ನೀಡಿದ್ದಾರೆ.

'ಜನಶಕ್ತಿ' ಪತ್ರಿಕೆ ಮೂರು ವಾರಗಳ ಮೊದಲೇ ವಿದ್ಯುತ್ ದರ ಏರಿಕೆಯ ಬಗ್ಗೆ ಪ್ರಸ್ತಾಪ ಮಾಡಿತ್ತು. ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ವಿದ್ಯುತ್ ಕಡಿತ ಮಾಡಿದರೆ ಜನರು ತಮ್ಮ ವಿರುದ್ಧ ತಿರುಗಿಬಿದ್ದಾರೆಂಬ ಭಯಕ್ಕೆ ದುಬಾರಿಯಾದ ಖಾಸಗಿ ವಿದ್ಯುತ್‌ನ್ನು ಕೊಳ್ಳಲಾಯಿತು. ಇದು ಒಂದು ಕಡೆಗೆ ಆ ಖಾಸಗಿ ಕಂಪನಿಗಳಿಗೆ ದುರ್ಲಾಭ ಮತ್ತು ಆ ನಡುವೆ ಯಾರ್ಯಾರ ಜೋಬಿಗೆ ಎಷ್ಟು ಕಮಿಷನ್ ಸೇರಿದೆಯೋ ಬಲ್ಲವರೇ ಬಲ್ಲರು! ಇಂದು ಆ ಎಲ್ಲ ದುರ್ನೀತಿಯ ಫಲವನ್ನು ಮಳೆಯ ತಲೆಗೆ ಕಟ್ಟಲಾಗುತ್ತಿದೆ.

ವಿದ್ಯುತ್ ಕಡಿತ ಹಾಗೂ ದರ ಏರಿಕೆಯನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ಮಳೆಯ ಕೊರತೆಯನ್ನು ಹಿಂದಿನ 'ಜನಶಕ್ತಿ' ವಿವರಿಸಿದಂತೆ ಒಂದಕ್ಕೆರಡು ಮಾಡಿ ಜನರನ್ನು ಗಾಬರಿಪಡಿಸುವ ಹುನ್ನಾರವೂ ನಡೆಯುತ್ತಿದೆ. ಈಗ ಸದ್ಯಕ್ಕೆ ಮಲೆನಾಡಿನಲ್ಲಿ ಮಳೆಯ ಕೊರತೆ ಇರುವಂತೆಯೇ, ಮುಂದಿನ ವಾರಗಳಲ್ಲಿ ಈ ಕೊರತೆ ತುಂಬುವಂತೆ ಮಳೆಯಾಗಲಿದೆ ಎಂಬ ಹವಾಮಾನ ತಜ್ಞರ ಸೂಚನೆಗಳನ್ನು ಉಪೇಕ್ಷಿಸಲಾಗುತ್ತಿದೆ.

ಮಳೆಯ ಕೊರತೆ ತೀವ್ರವಾಗುತ್ತದೆ ಎಂದರೂ ಕೂಡ ವಿದ್ಯುತ್ ಕೊರತೆಗೆ ಮತ್ತು ದರ ಏರಿಕೆಗೆ ಅದು ನೆಪವಾಗಬೇಕಾಗಿಲ್ಲ, ನಮ್ಮ ದೇಶದಲ್ಲಿ ಮಳೆ ಕೆಲವು ವರ್ಷಗಳಲ್ಲಿ ಹೆಚ್ಚಾಗಿ ಮತ್ತೆ ಕೆಲವು ವರ್ಷಗಳಲ್ಲಿ ಕೊರತೆಯಾಗುವುದು ಸಾವಿರಾರು ವರ್ಷಗಳ ಅನುಭವ. ವೈಜ್ಞಾನಿಕವಾಗಿ ಮಳೆಯ ಬಗ್ಗೆ ಇತರ ಹವಾಮಾನ ಸೂಚಕಗಳ ಬಗ್ಗೆ ಅಂಕಿಅಂಶಗಳನ್ನು ಸಂಗ್ರಹಿಸಲಾರಂಭಿಸಿಯೇ ನೂರು ವರ್ಷಗಳಿಗಿಂತ ಹೆಚ್ಚಾಗಿದೆ. ಇದಕ್ಕೆ ಸಂಬಂಧಿಸಿದ ಅಂಕಿಅಂಶಗಳನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿದರೆ ಎಷ್ಟು ವರ್ಷಗಳಲ್ಲಿ ಹೆಚ್ಚು ಮಳೆ, ಎಷ್ಟು ವರ್ಷಗಳಲ್ಲಿ ಕೊರತೆ ಮಳೆ ಬೀಳುತ್ತದೆಂಬ ಅಂಶ ಬೆಳಕಿಗೆ ಬರುತ್ತದೆ. ಅದಕ್ಕೆ ತಕ್ಕಂತೆ ವಿದ್ಯುತ್ ಉತ್ಪಾದನೆಯನ್ನು ಮಳೆ ಹೆಚ್ಚಾದ ವರ್ಷಗಳಲ್ಲಿ ಯಾವ ಮೂಲದಿಂದ ಮಳೆ ಕಡಿಮೆಯಾದ ವರ್ಷಗಳಲ್ಲಿ ಯಾವ ಮೂಲಗಳಿಂದ ಪಡೆಯಬೇಕು ಎನ್ನುವ ಬಗ್ಗೆ ಕರಾರುವಾಕ್ಕಾದ ವೈಜ್ಞಾನಿಕ ಯೋಜನೆ ಮಾಡಬೇಕಾಗಿತ್ತು.

ಹೀಗೆ ಮಳೆ ಕೊರತೆಯ ವರ್ಷಗಳಲ್ಲಿಯೂ ವಿದ್ಯುತ್ ಕೊರತೆ ಉಂಟಾಗದಂತೆ ನಿರ್ವಹಿಸುವುದು ಅಧಿಕಾರಿಗಳು, ಮಂತ್ರಿವರ್ಯರುಗಳು ಹೇಳುವಂತೆ ಅಸಾಧ್ಯದ ಮಾತೇನಲ್ಲ. ಹೀಗಾಗಿ ಸಾವಿರಾರು ವರ್ಷಗಳಲ್ಲಿ ನಮ್ಮ ದೇಶದ ಜನತೆ ಮಾಡುತ್ತಿದ್ದಂತೆ

ಪುಟ 6 ಕ್ಕೆ

ಖಾಸಗಿಯವರ ದುರ್ಲಾಭ ಗಳಿಕೆಯೇ ಮೂಲ ಕಾರಣ

ಸರ್ಕಾರದ ನೀತಿಗಳಲ್ಲಿ ವ್ಯಂಗ್ಯವೆಂದರೆ ಖಾಸಗಿ ಬಂಡವಾಳಶಾಹಿಗಳಿಗೆ ರಿಯಾಯಿತಿ ನೀಡಿ ಕೊಬ್ಬಿಸಿ ಸರ್ಕಾರ ವಿದ್ಯುತ್ ವಲಯದಲ್ಲಿ ಹಣ ಹೂಡಲಾಗದೆ ವಿದ್ಯುತ್ ಕೊರತೆಯನ್ನು ಸೃಷ್ಟಿಸುವುದು ಮತ್ತೊಂದೆಡೆ ಹೀಗೆ ಕೊಬ್ಬಿದ ಬೃಹತ್ ಖಾಸಗಿ ಬಂಡವಾಳಶಾಹಿಗಳಿಗೆ ವಿದ್ಯುತ್ ಖಾಸಗೀಕರಣದ ಹೆಸರಿನಲ್ಲಿ ವಿದ್ಯುತ್‌ನ್ನು ತಯಾರಿಸಿ ಅದನ್ನು ದುಬಾರಿ ಬೆಲೆಗೆ ಒಂದು ಯೂನಿಟ್‌ಗೆ 6 ರಿಂದ 10 ರೂ.ಗೆ ಸಾರ್ವಜಕರಿಗೆ ಮಾರಿ ಮತ್ತಷ್ಟು ದುರ್ಲಾಭ ಗಳಿಸಲು ವಿದ್ಯುತ್ ಕೊರತೆಯನ್ನೇ ನೆಪವಾಗಿಸಿಕೊಳ್ಳುವುದು.

ಇಂತಹ ನೀತಿಗಳ ಫಲವಾಗಿ ರಿಲೈಯನ್ಸ್, ಟಾಟಾ, ನಾಗಾರ್ಜುನ, ಜಿಂಡಾಲ್ ಮೊದಲಾದ ಅನೇಕ ಬೃಹತ್ ವಿದ್ಯುತ್ ಕಂಪನಿಗಳು ಅಸ್ತಿತ್ವಕ್ಕೆ ಬಂದಿವೆ. ಸರ್ಕಾರಿ ವಿದ್ಯುತ್ ನಿಗಮಗಳ ಮೂಲಕವೇ ಸಾರ್ವಜನಿಕರನ್ನು ಲೂಟಿ ಮಾಡುತ್ತಿವೆ. ರಾಜ್ಯದಲ್ಲಿನ ವಿದ್ಯುತ್ ದರ ಏರಿಕೆಗೆ ಇದೇ ಪ್ರಧಾನ ಕಾರಣ.

ಲೋಡ್ ಶೆಡ್ಡಿಂಗ್ ಎಂದರೆ

ವಿದ್ಯುತ್ ಕಡಿತದ ಪರಿಸ್ಥಿತಿ ಬಂದಾಗೆಲ್ಲಾ ಲೋಡ್ ಶೆಡ್ಡಿಂಗ್ ಎಂಬ ಮಾತನ್ನು ಪದೇ ಪದೇ ಕೇಳುತ್ತೇವೆ. ಪವರ್‌ಕಟ್ ಮತ್ತು ಈ ಲೋಡ್ ಶೆಡ್ಡಿಂಗ್‌ಗಳ ನಡುವಣ ಸಂಬಂಧವೇನು? ಲೋಡ್‌ಶೆಡ್ಡಿಂಗ್ ಎಂದರೇನು ಎಂಬ ಪ್ರಶ್ನೆಗಳು ಉಂಟಾಗುತ್ತಿರುತ್ತವೆ. ವಿದ್ಯುತ್ ಎಂಬುದು ಬೇರೆ ವಸ್ತುಗಳಂತೆ ಶೇಖರಿಸಿ ದಾಸ್ತಾನು ಮಾಡಬಹುದಾದ ವಸ್ತುವಲ್ಲ. ಎಲ್ಲಿ ಎಷ್ಟು ವಿದ್ಯುತ್ ಬೇಕೋ ಅಷ್ಟನ್ನೇ ಉತ್ಪಾದನೆ ಮಾಡಬೇಕು ಅಥವಾ ಎಲ್ಲಿ ಎಷ್ಟು ವಿದ್ಯುತ್ ಉತ್ಪಾದನೆಯಾಗುತ್ತದೆ. ಅಷ್ಟನ್ನು ಮಾತ್ರ ಬಳಸಬೇಕು.

ಈ ಕಾರಣಕ್ಕಾಗಿ ವಿದ್ಯುತ್ ಸಂವಹನಾಜಾಲ ಅಥವಾ ಗ್ರಿಡ್‌ಗಳಿಗೆ ಅವುಗಳ ವಿವಿಧ ವಿಭಾಗಗಳಿಗೆ ವಿದ್ಯುತ್ ಲಭ್ಯತೆಯ ಆಧಾರದ ಮೇಲೆ ಉಪಯೋಗಿಸಬಹುದಾದ ಪ್ರಮಾಣವನ್ನು ನಿರ್ದಿಷ್ಟಪಡಿಸಲಾಗುತ್ತದೆ. ಬೆಂಗಳೂರು ವಿದ್ಯುತ್ ನಿಗಮಕ್ಕೆ, ಗುಲ್ಬರ್ಗಾ, ಹುಬ್ಬಳ್ಳಿ, ಮಂಗಳೂರು ಇತ್ಯಾದಿ ನಿಗಮಗಳಿಗೆ ಇಂತಹ ಸಮಯದಲ್ಲಿ ಇಷ್ಟು ಎಂದು ಮತ್ತು ಅವುಗಳ ಒಳವಿಭಾಗಗಳಿಗೆ ಮತ್ತೆ ಇದನ್ನು ಮತ್ತೆ ವಿಭಜನೆ ಮಾಡಿ ನಿರ್ದಿಷ್ಟಗೊಳಿಸಲಾಗುತ್ತದೆ. ಇದು ಆಯಾ ಉಪವಿಭಾಗದ ಲೋಡ್.

ವಿದ್ಯುತ್‌ನ ಉಪಯೋಗದ ಪ್ರಮಾಣ ದಿನದ ಎಲ್ಲಾ ಕಾಲಕ್ಕೂ ಎಲ್ಲಾ ಋತುಗಳಲ್ಲಿಯೂ ಒಂದೇ ರೀತಿ ಇರುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದ್ದರಿಂದ ವಿದ್ಯುತ್ ಸ್ವಿಚ್‌ಗಳನ್ನು ಹಾಕಿದಂತೆ ಅಥವಾ ಆರಿಸಿದಂತೆ ವಿದ್ಯುತ್ ಉಪಯೋಗದ ಪ್ರಮಾಣ ಹೆಚ್ಚು ಕಡಿಮೆಯಾಗುತ್ತಲೇ ಇರುತ್ತದೆ. ಹೀಗೆ ಎಲ್ಲರೂ ಒಂದೇ ಬಾರಿಗೆ ವಿದ್ಯುದ್ದೀಪ, ಫ್ಯಾನ್, ಟಿ.ವಿ. ಇತ್ಯಾದಿಗಳ ಸ್ವಿಚ್‌ಗಳನ್ನು ಹಾಕಿದರೆ ದಿಡೀರ್ ವಿದ್ಯುತ್ ಬಳಕೆ ಏರುತ್ತದೆ. ವಿದ್ಯುತ್‌ನ ಲಭ್ಯತೆಗಿಂತ ವಿದ್ಯುತ್ ಬಳಕೆ ಏರಿದಾಗ ವಿದ್ಯುತ್ ಜಾಲದ ಲೋಡ್ ಏರುತ್ತದೆ. ಆಗ ವಿದ್ಯುತ್ ಬಳಕೆಗೆ ಅವಕಾಶ ಮಾಡಿಕೊಡದೆ ವಿದ್ಯುತ್‌ತಂತಿಗಳಲ್ಲಿ ಸರಬರಾಜಾಗುವ ವಿದ್ಯುತ್‌ನ್ನು ವಿದ್ಯುತ್ ನಿಯಂತ್ರಣ ತಾಣ(ಪವರ್ ಸ್ಟೇಷನ್)ಗಳಲ್ಲಿಯೇ ತೆಗೆದುಹಾಕುವುದೇ ಲೋಡ್‌ಶೆಡ್ಡಿಂಗ್ (ಲೋಡ್‌ಅನ್ನು ಕಳಚಿಕೊಳ್ಳುವುದು)

ಟ್ರಿಪ್ಪಿಂಗ್ (ವಿದ್ಯುತ್ ಕುಸಿತ)

ಹೀಗೆ ಎಚ್ಚರವಹಿಸಿ ಲೋಡ್ ಅನ್ನು ಕಳಚಿಕೊಳ್ಳದಿದ್ದರೆ ವಿದ್ಯುತ್ ಜಾಲದಿಂದ ಒಂದು ಪ್ರದೇಶ ಹೆಚ್ಚು ವಿದ್ಯುತ್ ಎಳೆಯುತ್ತದೆ. ಇದು ಮತ್ತೊಂದು ಕಡೆ ದಿಡೀರ್ ವಿದ್ಯುತ್ ಕೊರತೆಗೆ ಕಾರಣವಾಗುತ್ತದೆ. ಆಗ ವಿದ್ಯುತ್ ಜಾಲದಲ್ಲಿ 'ಟ್ರಿಪ್ಪಿಂಗ್' ಆಗುತ್ತದೆ. ಕೆಲವೊಮ್ಮೆ 5-6 ಜಿಲ್ಲೆಗಳಲ್ಲಿ ಅಥವಾ ಇಡೀ ರಾಜ್ಯದಲ್ಲಿ ಈ ರೀತಿ ಟ್ರಿಪ್ಪಿಂಗ್ ಆಗಿ ಇಡೀ ಪ್ರದೇಶ ಅಥವಾ ರಾಜ್ಯ ಕತ್ತಲಲ್ಲಿ ಮುಳುಗಿಹೋದ ಉದಾಹರಣೆಗಳು ಇವೆ. ಅದನ್ನು ಮತ್ತೆ ಸರಿಪಡಿಸಬೇಕಾದರೆ ಹಲವು ಗಂಟೆ ಅಥವಾ ದಿನಗಳು ಹಿಡಿಯುತ್ತವೆ. ವಿದ್ಯುತ್ ಅರಾಜಕತೆಯಿಂದಾಗಿ ಕೃಷಿ, ಕೈಗಾರಿಕೆ, ಗೃಹಬಳಕೆ, ಆಸ್ಪತ್ರೆಗಳಿಗೆ ದೊಡ್ಡ ನಷ್ಟ, ತೊಂದರೆಗಳು ಉದ್ಭವಿಸುತ್ತವೆ. ಅಂತಹ ಟ್ರಿಪ್ಪಿಂಗ್‌ಗೆ ಕಾರಣವಾಗುವ ವಿದ್ಯುತ್ ಜಾಲದ ಉಪವಿಭಾಗಕ್ಕೆ ಭಾರಿ ಜುಲ್ಮಾನೆ ಹೇರಲಾಗುತ್ತವೆ.

ಇದೊಂದು ಯೋಜಿತ ಸಂಚಿನ ಭಾಗ. ಆರೆಸ್ಸೆಸ್ ಮತ್ತು ಸಂಘ ಪರಿವಾರದ ದೂರಗಾಮಿ ಗುರಿಗಳಿಗೆ ಪೂರಕವಾಗಿ ಬದುಕುತ್ತಿರುವ ಅತ್ಯಂತ ಅಪಾಯಕಾರಿ ಬದಲಾವಣೆ. ಇಲ್ಲಿ ಮೌಢ್ಯವನ್ನು ಪ್ರಚುರಪಡಿಸುತ್ತಾರೆ ಎಂಬುದಷ್ಟೇ ಅಪಾಯವಲ್ಲ, ಅದನ್ನು ಮೀರಿ ಜಾತಿವಾದಿಯೂ, ಪುರುಷ ಪ್ರಧಾನವೂ ಆದ ಸಮಾನತೆ, ಅನ್ಯಾಯದಿಂದ ಕೂಡಿದ ಪುರೋಹಿತಶಾಹಿ ವ್ಯವಸ್ಥೆಯನ್ನು ಮರಳಿ ತರುವ ಸಂಚಿನ ಭಾಗವಾಗಿದೆ ರಾಜ್ಯ ಬಿಜೆಪಿ ಸರ್ಕಾರವು ತರುತ್ತಿರುವ ಶಿಕ್ಷಣ ನೀತಿಗಳು

ವೇದಕ್ಕೊಂದು ವಿ.ವಿ.ಯೂ

ಜ್ಯೋತಿಷ್ಯ-ಯೋಗ : ಶಿಕ್ಷಣಕ್ಕೆ ತಗುಲುತ್ತಿರುವ ಕೇಸರಿ ರೋಗ

ಎಚ್.ಎನ್. ನವೀನ್‌ಕುಮಾರ್

ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದ ಆರಂಭದಲ್ಲಿ ರಾಜ್ಯದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಪ್ರಸ್ತಾಪವನ್ನಿಟ್ಟಿತ್ತು. ಆದರೆ ಈಗ ಅದು 'ಸಂಸ್ಕೃತ ಮತ್ತು ವೇದ ವಿಶ್ವವಿದ್ಯಾಲಯ' ವಾಗಿ ಬರುತ್ತಿದೆ. ಈ ರೀತಿಯ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಕುರಿತು ತೀವ್ರ ವಿರೋಧ ವ್ಯಕ್ತವಾಗಿದ್ದರೂ ಅಧಿಕಾರ ಹೊಂದಿದ್ದರೆ ಏನು ಬೇಕಾದರೂ ಮಾಡಬಹುದೆನ್ನುವಂತೆ ಆರ್‌ಆರ್‌ಎಸ್‌ನ ನಿಯಂತ್ರಣದ ಬಿಜೆಪಿ ಸರ್ಕಾರ ವರ್ತಿಸುತ್ತಿದೆ.


ಸ್ಥಾಪನೆಯ ಹಿಂದಿನ ಉದ್ದೇಶವೇನು: ಸಂಸ್ಕೃತವನ್ನು 'ಅಧ್ಯಯನ' ಮಾಡಿ ಸಂಶೋಧನೆಗೊಳಪಡಿಸುವುದು, ವೇದ ಮತ್ತು ಉಪನಿಷತ್ತುಗಳನ್ನು ಕಲಿಸುವುದು, ವಾಸ್ತು, ಸಂಸ್ಕೃತದಲ್ಲಿ ಪದವಿಗಳನ್ನು ನೀಡಿ 'ಪಂಡಿತ'ರನ್ನು ತಯಾರಿಸುವುದು. ಆ ಮೂಲಕ ಪುರೋಹಿತಶಾಹಿಯ ವಂಚಕ ಸುಲಿಗೆಕೋರ ವಿಚಾರಗಳನ್ನು ಮೌಲ್ಯಗಳನ್ನು ಪ್ರಚುರಪಡಿಸುವುದು ಇದರ ಉದ್ದೇಶ, ಇದಕ್ಕಾಗಿ ಕೋಟ್ಯಾಂತರ ರೂ. ಸರ್ಕಾರಿ ಹಣವನ್ನು ವ್ಯಯಿಸಿ ಪ್ರತ್ಯೇಕ ವಿ.ವಿ.ಗಳನ್ನು ಸ್ಥಾಪಿಸಲು ಮುಂದಾಗಿದ್ದಾರೆ.

ಹಾಗಾದರೆ ದೇಶ ಮತ್ತು ರಾಜ್ಯದಲ್ಲಿ ಸಂಸ್ಕೃತವನ್ನು ಅಧ್ಯಯನ ಮಾಡಲು ಬೇರೆ ವ್ಯವಸ್ಥೆಗಳಿಲ್ಲವೆ? ಖಂಡಿತವಾಗಿಯೂ ಇವೆ. ಭಾರತದಲ್ಲಿ 12 ಸಂಸ್ಕೃತ ವಿ.ವಿ. 23 ಆದರ್ಶ ವಿ.ವಿ.ಗಳಿವೆ. ಇದಲ್ಲದೇಎಲ್ಲ ವಿ.ವಿ.ಗಳಲ್ಲೂ ಸಂಸ್ಕೃತ ಅಧ್ಯಯನ ವಿಭಾಗಗಳಿವೆ. ಜೊತೆಗೆ ರಾಜ್ಯದ ಮೇಲುಕೋಟೆಯಲ್ಲಿ ಸಂಸ್ಕೃತ ಉನ್ನತ ಅಧ್ಯಯನ ಸಂಶೋಧನಾ ಕೇಂದ್ರ ಮೈಸೂರು ಅರಸರು ಸ್ಥಾಪಿಸಿದ ಸಂಸ್ಕೃತ ಪಾಠಶಾಲೆ, ಜೊತೆಗೆ ಬಹುತೇಕ ಎಲ್ಲ ವರ್ಗಗಳಲ್ಲೂ ಪೈಪೋಟಿಯಲ್ಲಿ ಸಂಸ್ಕೃತವನ್ನು 'ಅಧ್ಯಯನ' ಮಾಡಲಾಗುತ್ತದೆ. ರಾಜ್ಯದಲ್ಲಿ ಸಂಸ್ಕೃತ ಅಧ್ಯಯನ, ತೀವ್ರತರವಾದ ಬೇಡಿಕೆ ಇದ್ದರೆ ಈಗಾಗಲೇ ವಿ.ವಿ.ಗಳಲ್ಲಿರುವ ಕೇಂದ್ರಗಳನ್ನು ಮತ್ತೊಂದಷ್ಟು ಬಲಪಡಿಸಿ ಅದನ್ನೊಂದು ಭಾಷೆಯಾಗಿ ಕಲಿಸಬಹುದಿತ್ತು.

ಆದರೆ ಇದನ್ನು ಭಾಷೆಯಾಗಿ ಆಸಕ್ತರಿಗೆ ಕಲಿಸುವ ಬದಲಾಗಿ ಸಂಸ್ಕೃತ-ವೇದ ವಿ.ವಿ.ಗಳ ಮೂಲಕ ತಮ್ಮ ಮನು ಸಂಸ್ಕೃತಿಯನ್ನು, ಪೌರೋಹಿತಶಾಹಿಯನ್ನು ಹೇರುವ ಸಂಚು ಇದರ ಹಿಂದಿದೆ ಮತ್ತು ಆಡುಭಾಷಿಯಲ್ಲದ ಜನಸಾಮಾನ್ಯರ ಭಾಷೆಯಲ್ಲದ ಸಂಸ್ಕೃತದ ಮೂಲಕ ತಮ್ಮ ಹಿಂದುತ್ವದ ವಿಚಾರಗಳನ್ನು ಅಧಿಕೃತ ಶಿಕ್ಷಣದ ಭಾಗವನ್ನಾಗಿಸುವ ಹುನ್ನಾರ ಇದರ ಹಿಂದೆ ಸ್ಪಷ್ಟವಾಗಿ ಗೋಚರಿಸುತ್ತದೆ.

ಸಂಸ್ಕೃತ ಪದವಿಯನ್ನು ಪಡೆದವರಿಗೆ ಯಾವ ಉದ್ಯೋಗಗಳ ಸೃಷ್ಟಿಯಾಗುತ್ತವೆ. ಇಲ್ಲಿ ವೇದ ಉಪನಿಷತ್ತುಗಳನ್ನು ಕಲಿತವರು ಅದನ್ನು ಅರ್ಥೈಸುವ ವಿಧಾನ ಹೇಗಿರುತ್ತದೆ ಎಂದು ನೆನಸಿಕೊಂಡರೆ ವಿದ್ಯಾರ್ಥಿಗಳನ್ನು ಮತ್ತು ಸಮಾಜವನ್ನು ಒಂದು ಸಾವಿರ ವರ್ಷ ಹಿಂದಕ್ಕೆ ತೆಗೆದುಕೊಂಡು ಹೋಗುವುದು ಇದು ಎಂಬುದು ಗೋಚರವಾಗುತ್ತದೆ. ರಾಜ್ಯದ ವಿಚಾರವಾದಿಗಳಾದ ಡಾ: ಕೆ.ಎಸ್.ಭಗವಾನ್‌ರವರು ಸಂಸ್ಕೃತ ಮತ್ತು ವೇದಗಳಿಗೆ ಸಂಬಂಧಿಸಿದ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ದಾಖಲಿಸಿದ್ದಾರೆ. "ಸಂಸ್ಕೃತದ ಬಹುಪಾಲು ವಾಙ್ಮಯಗಳು ಮೇಲುಕೀಲುಗಳ ಜಾತಿಯ ದುರ್ಗಂಧದಿಂದ ತುಂಬಿ ಹೋಗಿವೆ. ಸಂಸ್ಕೃತದಲ್ಲಿರುವ ಸುಮಾರು 131 ಸ್ಮೃತಿ ಗ್ರಂಥಗಳು ಶೂದ್ರರನ್ನು ಗುಲಾಮನ್ನಾಗಿ ಇಡುವ, ಅವರನ್ನು ಕೊಲ್ಲುವ ತತ್ವ ಹೊಂದಿವೆ. ವೇದಗಳಲ್ಲಿ ಅನೈತಿಕ ಸಂಬಂಧ, ಮೌಢ್ಯ, ಕಂದಾಚಾರಗಳು ತಾಂಡವವಾಡುತ್ತಿವೆ. ಋಗ್ವೇದದ ಮೂರನೇಯ ಮಂಡಲದ ಮಂಡೂಕ ಸೂಕ್ತದಲ್ಲಿ ವೈದಿಕರನ್ನು ಕಪ್ಪೆಗಳಂತೆ ವಟಗುಡುತ್ತಿವೆ ಎಂದು ಗೇಲಿ ಮಾಡಲಾಗಿದೆ. ವೇದಗಳು ಕೀಳು ಎಂದು ಉಪನಿಷತ್ತುಗಳು (ಮಂಡೂಕೋಪನಿಷಿತ್ 1.2-5) ಹಳಿದಿವೆ. ಬ್ರಾಹ್ಮಣ ತತ್ವಶಾಸ್ತ್ರ ಸಾಹಿತ್ಯವೆಲ್ಲಾ ಚಾತುರ್ವರ್ಣದಿಂದ ಹೊಲಸಾಗಿದೆ. ಮನುಷ್ಯರು ಸಹ ಮಾನವರೊಂದಿಗೆ ಪ್ರೀತಿ ವಿಶ್ವಾಸ, ಸ್ನೇಹ, ಸೌಹಾರ್ದಗಳಿಂದ ಬದುಕಬೇಕೆಂಬ ವಿಚಾರವಂತಿಕೆ ಇಲ್ಲಿ ಸಿಗದು. ಈ ರೀತಿಯ ಕೊಳಕು ವಿಚಾರಗಳನ್ನು ಓದಲು ಒಂದು ವಿಶ್ವವಿದ್ಯಾಲಯವನ್ನು ಕಟ್ಟಬೇಕೇ?" ಇದು ಭಗವಾನ್ ಸ್ಪಷ್ಟನುಡಿ. ಇವರ ಜೊತೆಗೆ ರಾಷ್ಟ್ರಕವಿ ಡಾ. ಜಿ.ಎಸ್.ಶಿವರುದ್ರಪ್ಪ ಹಿರಿಯ ಕವಿಗಳಾದ ಚನ್ನವೀರ ಕಣವಿಯವರು ಸೇರಿದಂತೆ ಹಲವಾರು ಜನ ಶಿಕ್ಷಣ ತಜ್ಞರು, ಚಿಂತಕರು ಸಂಸ್ಕೃತ-ವೇದ ವಿ.ವಿ. ಸ್ಥಾಪನೆಗೆ ಸ್ಪಷ್ಟವಾ[ಗಿ] ವಿರೋಧವನ್ನು ವ್ಯಕ್ತಪಡಿಸಿದ್ದಾರೆ.

ಈ ಮೇಲಿನ ಎಲ್ಲಾ ಅಂಶಗಳಿಂ[ದ] ಸ್ಪಷ್ಟವಾಗುವುದೇನೆಂದರೆ ಸಂಸ್ಕೃತ-ವೇ[ದ] ವಿ.ವಿ.ಯನ್ನು ಸ್ಥಾಪಿಸುವುದರ ಹಿಂದೆ ರ[ಾಜ್ಯ] ಸರ್ಕಾರಕ್ಕೆ ಒಂದು ಸ್ಪಷ್ಟ ಉದ್ದೇಶವಿದ್ದು, ಈ ಉದ್ದೇ[ಶ] ಕೋಮುವಾದಿ ರಾಜಕೀಯ ಚಿಂತನೆಗಳಿಂ[ದ] ಪ್ರೇರಿತವಾಗಿದೆ ಮತ್ತು ಅದು ತಮ್ಮ ಹಿಂದುತ್ವ[ದ] ಸಿದ್ಧಾಂತಕ್ಕೆ ಪೂರಕವಾಗಿದೆಯೇ ಹೊರತು ಸಮಾಜ[ದ] ಬೆಳವಣಿಗೆಗೆ ಅನುಕೂಲವಾಗುವ ಅಥವ[ಾ] ಜನಸಾಮಾನ್ಯರಿಗೆ ಅನುಕೂಲವಾಗುವ ಯಾ[ವ] ಅಂಶಗಳು ಇದರಲ್ಲಿ ಕಾಣುತ್ತಿಲ್ಲ. ಆದ್ದರಿಂದ ವಿಜ್ಞಾ[ನ] - ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿರುವ ಈ ಸಂದರ್ಭದಲ್ಲಿ ನಮ್ಮನ್ನು ಮುಂದಕ್ಕೆ ಕೊಂಡೊಯ್ಯು[ವ] ಬದಲಾಗಿ ಸಾಕಷ್ಟು ಹಿಂದಕ್ಕೆ ಮೌಢ್ಯ, ಅಂಧಕಾರ[ಕ್ಕೆ] ಕೊಂಡೊಯ್ಯುವ ಮತ್ತು ವರ್ಣಾಶ್ರಮ ವ್ಯವಸ್ಥೆಯ ಅಮಾನುಷ ಜಾತಿ ಪದ್ಧತಿಯನ್ನು, ಸ್ತ್ರೀಯರನ[್ನು] ಎರಡನೇ ದರ್ಜೆಯ ಪ್ರಜೆಗಳಾಗಿ ಕಾಣುವ ಈ ವಿಚಾರಗಳನ್ನು ಕಲಿಸಲು ಸ್ಥಾಪನೆಯಾಗುತ್ತಿರುವ ಈ ಸಂಸ್ಕೃತ ವೇದ ವಿಶ್ವವಿದ್ಯಾಲಯದ ಅವಶ್ಯಕ[ತೆ] ಖಂಡಿತವಾಗಿಯೂ ಇಲ್ಲ.



ಜ್ಯೋತಿಷ್ಯ ಮತ್ತು ಯೋಗ ನೈತಿಕ ಶಿಕ್ಷಣ ಬೋಧನೆಗೆ 'ಚಿಂತನೆ'

ಇತ್ತೀಚಿಗೆ ಸಭೆ ಸೇರಿದ್ದ ಅಂತರ ವಿಶ್ವವಿದ್ಯಾಲಯ ಮಂಡಳಿ(ಐಯುಬಿ)ಯು ಕೆಲವು ತೀರ್ಮಾನಗಳನ್ನು ತೆಗೆದುಕೊಂಡಿದೆ. ಅದರಲ್ಲಿ ಪ್ರಮುಖವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲೂ ಜ್ಯೋತಿಷ್ಯಶಾಸ್ತ್ರ ವಿಭಾಗಗಳನ್ನು ತೆರೆಯುವುದು ಮತ್ತು ಯೋಗ-ನೈತಿಕ ಶಿಕ್ಷಣಕ್ಕಾಗಿ ರವಿಶಂಕರ್ ಗುರೂಜಿಯ ಆರ್ಟ್ ಆಫ್ ಲೀವಿಂಗ್ ನಿಂದ ತರಬೇತಿ ನೀಡುವುದು. ಈ ತೀರ್ಮಾನಗಳೂ ಕೂಡ ಅತ್ಯಂತ ಅವೈಜ್ಞಾನಿಕವಾಗಿವೆ. ಅಪಾಯಕಾರಿಯಾಗಿವೆ. ಈ ಹಿಂದೆ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಮಾನವ ಸಂಪನ್ಮೂಲ ಸಚಿವರಾಗಿದ್ದ ಡಾ:ಮುರಳಿ ಮನೋಹರ ಜೋಶಿಯವರು ಇದೇ ರೀತಿಯ ಪ್ರಯತ್ನಗಳಿಗೆ ಕೈಹಾಕಿ ಗಿಳಿಶಾಸ್ತ್ರ, ಹಸ್ತ ಸಾಮುದ್ರಿಕಾ ಶಾಸ್ತ್ರಗಳನ್ನು ವಿ.ವಿ.ಗಳಲ್ಲಿ ಕಲಿಸಲು ಮುಂದಾಗಿದ್ದರು. ದೇಶದಾದ್ಯಂತ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ವಾಪಸ್ ಪಡೆಯಲಾಯಿತು. ಇದರ ಜೊತೆ ಯೋಗದ ಹೆಸರಿನಲ್ಲಿ ಆಧ್ಯಾತ್ಮದ ಹೆಸರಿನ ಮೌಢ್ಯವನ್ನು ಪ್ರಗತಿವಿರೋಧಿ ವಿಚಾರಗಳನ್ನು ವಿಜೃಂಭಿಸುವ ಮತ್ತು ಆರ್ಟ್ ಆಫ್ ಲೀವಿಂಗ್‌ನ ರವಿಶಂಕರ್ ಗುರೂಜಿಯವರಿಂದ ತರಬೇತಿ ಪಡೆದವರು ಯಾವ ರೀತಿಯ ಬೆಳವಣಿಗೆ ಹೊಂದುತ್ತಾರೆ ಎಂಬುದರ ಬಗ್ಗೆ ಗಂಭೀರವಾಗಿ ಚಿಂತಿಸುವ ಅವಶ್ಯಕತೆ ಇದೆ.

ಶಾಲಾ ಪಠ್ಯಪುಸ್ತಕಗಳನ್ನು ಬದಲಾಯಿಸುವ ಚಿಂತನೆ

ಗುಣಮಟ್ಟದ ಶಿಕ್ಷಣ ಕೊಡುವ ಹೆಸರಿನಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ಶಾಲಾ ಪಠ್ಯ ಪುಸ್ತಕಗಳನ್ನು ಬದಲಾಯಿಸುವ ಚಿಂತನೆಯನ್ನು ರಾಜ್ಯ ಸರ್ಕಾರ ಹೊಂದಿದೆ. ಇದರ ಮೂಲ ಉದ್ದೇಶ ಭವಿಷ್ಯದಲ್ಲಿ ಪಠ್ಯಪುಸ್ತಕಗಳ ಮೂಲಕ ತಮ್ಮ ವಿಚಾರಗಳನ್ನು ತುಂಬಿ ಇಡೀ ಶಿಕ್ಷಣ ವ್ಯವಸ್ಥೆಯನ್ನು ಕೇಸರೀಕರಣಗೊಳಿಸುವುದು. ಇದಕ್ಕೆ ಪೂರಕವಾಗಿ ಈಗಾಗಲೇ 9ನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿದ್ದ ಲೇಖಕಿ ಗೀತಾ ನಾಗಭೂಷಣರವರ 'ಅವ್ವ' ಪಾಠವನ್ನು ತೆಗೆದು ಹಾಕಲಾಗಿದೆ. ಈ ರೀತಿ ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡುವ ಮತ್ತು ಪ್ರಗತಿಪರ ಜಾತ್ಯಾತೀತ ಸಂವಿಧಾ[ನದ] ಆಶಯಗಳನ್ನು ಬಿಂಬಿಸುವ ಪಾಠ, ಪದ್ಯಗಳನ್ನು ವ್ಯವಸ್ಥಿತವಾಗಿ ತೆಗೆಯುವ ಹುನ್ನಾರ ಇದ[ರಲ್ಲಿ] ಅಡಗಿದೆ.


ಚಿಡ್ಡಿಗಳ ಅಣತಿ

ಚಿಡ್ಡಿಗಳ ಅಣತಿಯನು ಕೇಳದೇ ಇಲ್ಲಿ
ಕಡ್ಡಿಯೂ ಹೊರಳದೈ ನೀನೇನು ಬಲ್ಲಿ!
ಹೀಗಾಗಿ ಬಡ ಜನರ ಹೆಣಗಳನು ದಾಟಿ
ಮಠ ಗುಡಿಗೆ ಹರಿಯುತಿದೆ ಹಣ ಕೋಟಿ ಕೋಟಿ

ಹಣದ ಕೊರತೆ

ಮಠ ಗುಡಿಗೆ ಕೊಡುವುದಕೆ ಹಣಕೊರತೆ ನೋಡಿ
ತರಬೇಕು ಒಂದಾಗಿ ಕೇಂದ್ರವನು ಬೇಡಿ
ಈ ಕೊರತೆ ತುಂಬುವುದು ಪ್ರಾಮುಖ್ಯ ಗೊತ್ತೆ
ಆಮೇಲೆ ನೋಡೋಣ ಹಸಿದವರ ಹೊಟ್ಟೆ

-ವಿಡಂಬಾ



ವಿಕಾಸ ಸಂಕಲ್ಪ ಉತ್ಸವದಿಂದ ಕರಾವಳಿಗೆ ದಕ್ಕಿದ್ದೇನು ?

ಮೊನ್ನೆ ಮುಖ್ಯಮಂತ್ರಿ ಮಂಗಳೂರಿನ ಬಂದರು, ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. 'ವಿಕಾಸ ಸಂಕಲ್ಪ' ಎಂದು ಕರೆಯಲಾದ ಉತ್ಸವದಲ್ಲಿ ಕರಾವಳಿ ಅಭಿವೃದ್ಧಿ ಬಗ್ಗೆ ಅವರಿಂದ ನಮ್ಮ ಜನ ಏನೇನೋ ಪ್ರಕಟಣೆಗಳನ್ನು ನಿರೀಕ್ಷಿಸಿದ್ದರು. (ಅವರು ಬೆಂಗಳೂರಿನಿಂದ ಬಂದಿದ್ದು ಸರಕಾರಿ ಯೋಜನೆಗಳ ಫಲಾನುಭವಿಗಳಿಗೆ ಚೆಕ್ ವಿತರಿಸಲು ಎಂಬುದು ಬೇರೆ ಮಾತು.)

ಕರಾವಳಿಯ ಅಭಿವೃದ್ಧಿಯ ನಕಾಶೆಯನ್ನೇನೂ ಅವರು ಅನಾವರಣಗೊಳಿಸಲಿಲ್ಲ. ಹೋಗಲಿ, ಕರಾವಳಿ ಅಭಿವೃದ್ಧಿಗೆಂದು ಸರಕಾರ ರಚಿಸಿದ ಪ್ರಾಧಿಕಾರ ತುಕ್ಕು ಹಿಡಿದು ಕೂತಿರುವ ಹಿನ್ನೆಲೆಯಲ್ಲಿ ಅದಕ್ಕೊಂದಿಷ್ಟು ಕಾರ್ಯಕ್ರಮ ಜಾರಿಗೊಳಿಸುವ ಜವಾಬ್ದಾರಿ ನಿಯುಕ್ತಿಗೊಳಿಸುವ ಪ್ರಕಟಣೆಯನ್ನೂ ನೀಡಲಿಲ್ಲ; ಕರಾವಳಿಯ ಅಭಿವೃದ್ಧಿಗೆ ಬೆನ್ನುಲುಬಾಗಿರುವ ಇಲ್ಲಿನ ಹೈವೇ ಬಗ್ಗೆಯೂ ಏನೂ ಹೇಳಲಿಲ್ಲ.

'ಅಭಿವೃದ್ಧಿ, ಅಭಿವೃದ್ಧಿ, ಅಭಿವೃದ್ಧಿ' ಎಂಬ ಮಂತ್ರ ಪಠಿಸುವ ಮುಖ್ಯಮಂತ್ರಿ ಮಂಗಳೂರಿನಿಂದ ತೆರಳಿದ ಮೇಲೆ ಅವರ ವಿಕಾಸ ಸಂಕಲ್ಪ ಉತ್ಸವದಿಂದ ಕರಾವಳಿಗೆ ದಕ್ಕಿದ್ದೇನು ಎಂದು ಜನ ಪ್ರಶ್ನಿಸಿದರೆ ಉತ್ತರವೇ ಕಾಣುವುದಿಲ್ಲ. ಅವರ ಗಮನವೆಲ್ಲಾ ಬೆಂಗಳೂರು ಮತ್ತು ಶಿವಮೊಗ್ಗದ ಅಭಿವೃದ್ಧಿ ಕಡೆಯೇ ಕೇಂದ್ರಿಕೃತವಾಗಿದ್ದರೂ ಸಂಘ ಪರಿವಾರ ನೆಲೆಯಾಗಿರುವ ಮಂಗಳೂರಿನ ಮತ್ತು ದಕ್ಷಿಣ ಕನ್ನಡದ ಅಭಿವೃದ್ಧಿಗೆ ಪಕ್ಷದ ಸ್ವಾರ್ಥದ ದೃಷ್ಟಿಯಿಂದಲಾದರೂ ಏನಾದರೂ ಚೂರು, ಪಾರಾದರೂ ಕೊಡುಗೆ ನೀಡಬಹುದೆಂಬ ಪೇಲವ ನಿರೀಕ್ಷೆ ಸಿಎಂ ಭೇಟಿಯ ನಂತರ ಹುಸಿಯಾಗಿದೆ.

ಇಲ್ಲಿನ ಹೆದ್ದಾರಿ ದುರವಸ್ಥೆ ಬಗ್ಗೆ ಅವರು ಕೊಂಚವಾದರೂ ಗಮನ ನೀಡಬೇಕಿತ್ತು. ಬಿ ಸಿ ರೋಡಿನಿಂದ ಸುರತ್ಕಲ್‌ವರೆಗಿನ ಹೆದ್ದಾರಿ ಚತುಷ್ಪಥ ಕಾಮಗಾರಿ ಆರಂಭವಾಗಿ ಎಷ್ಟು ವರ್ಷವಾಯಿತು ಮತ್ತು ಅದು ಮುಗಿಯುವುದೆಂದು/ ಬೆಂಗಳೂರು, ಮಂಗಳೂರು ಚತುಷ್ಪಥ ಕೆಲಸ ರಾಜಧಾನಿ ಕಡೆಯಿಂದ ಸ್ವಲ್ಪ ಅಲ್ಲಲ್ಲಿ ನಡೆಯುತ್ತಿದ್ದರೂ ಅದು ಮಂಗಳೂರಿಗೆ ಕನೆಕ್ಟ್ ಆಗುವ ಸೂಚನೆಯಾ ಇಲ್ಲ. ಈ ಕಡೆಯಿಂದ ಆ ಕಾಮಗಾರಿ ಚಿಹ್ನೆಯೂ ಕಾಣುವುದಿಲ್ಲ. ಮಂಗಳೂರು ಬೆಂಗಳೂರು ಹಗಲು ರೈಲು ಕುರಿತ ಜನಾಗ್ರಹಕ್ಕೆ ರಾಜ್ಯ ಸರಕಾರದ ಸ್ಪಂದನವೇನು?



ಕರಾವಳಿಯ ಹನ್ನೊಂದು ಪಟ್ಟಣಗಳಿಗೆ ಕುಡಿಯುವ ನೀರು, ಒಳಚರಂಡಿ, ರಸ್ತೆ ಒದಗಿಸುವ ಎಡಿಬಿ ಪ್ರಾಯೋಜಿತ ಮುನ್ನೂರು ಕೋಟಿ ರೂಪಾಯಿ ಕಾರ್ಯಕ್ರಮಗಳ ಪಾಡೇನು? ಕರಾವಳಿಯಲ್ಲಿ ಕುಸಿದಿರುವ ಲಾ ಎಂಡ್ ಆರ್ಡರ್ ಬಿಗಿಗೊಳಿಸುವ ನಿಟ್ಟಿನಲ್ಲಿ ಸರಕಾರ ಏನು ಮಾಡಹೊರಟಿದೆ? ಪದ್ಮಪ್ರಿಯಾ ನಾಪತ್ತೆ ಮತ್ತು ಕೊಲೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕೆಂಬ ಜನರ ಒಕ್ಕೊರಲ ಒತ್ತಾಯಕ್ಕೆ ಸರಕಾರದ ಸ್ಪಂದನವೇನು? ಮಂಗಳೂರು ನಗರದಿಂದ ಬಜಪೆ ವಿಮಾನ ನಿಲ್ದಾಣ ರಸ್ತೆಯನ್ನು ಹೆದ್ದಾರಿ ಮಾಡುವ ಕಾಮಗಾರಿಗೆ ಕೇಂದ್ರ ಕೊಟ್ಟ 18 ಕೋಟಿ ರೂಪಾಯಿ ಏನಾಯ್ತು? ಈ ಕೆಲಸ ಸದ್ಯಕ್ಕೆ ಮುಗಿಯುವುದೆ? ಕರಾವಳಿಗೆ ಹಾರುಬೂದಿ ವಿದ್ಯುತ್ ಸ್ಥಾವರಗಳು ಬೇಡ, ಪರಿಸರನಾಶೀ ಉದ್ಯಮಗಳು ಬೇಡ ಎಂಬ ಜನರ ಒತ್ತಾಯವನ್ನು ಸರಕಾರ ಕಿವಿ ಮೇಲೆ ಹಾಕಿಕೊಂಡಿದೆಯೇ? ಸೆಝ್ ವಿರೋಧೀ ಆಂದೋಲನಕ್ಕೆ ಸರಕಾರ ಜನಪರವಾಗಿ ಪ್ರತಿಕ್ರಿಯಿಸುವುದೇ? ಕರಾವಳಿಯ ಬೀಚ್‌ನಲ್ಲಿ ಉದ್ಯಮಗಳು ಸಿ ಆರ್ ಝಡ್ ನಿಯಮಾವಳಿ ಉಲ್ಲಂಘಿಸುತ್ತಿವೆ ಎಂಬ ಪುಕಾರಿಗೆ ಸರಕಾರ ಏನು ಹೇಳುತ್ತವೆ ಮತ್ತು ಮಾಡುತ್ತದೆ? ಇಲ್ಲಿನ ಶಾಶ್ವತ ಸಮಸ್ಯೆ ಕಡಲ್ಕೊರೆತಕ್ಕೆ ಪರಿಹಾರ ಕಾಣಿಸುವುದೇ?

ಇವೆಲ್ಲಾ ಪ್ರಶ್ನೆಗಳನ್ನು ಕರಾವಳಿಯ ಅಭಿವೃದ್ಧಿಯ ನೀಲನಕಾಶೆ ಅಡ್ರೆಸ್ ಮಾಡಲೇಬೇಕು. ಆದರೆ ಇವೆಲ್ಲಾ ನಮ್ಮ ಆಡಳಿತಗಾರರ ಮನಸ್ಸಿಗೆ ಹೋಗಿದೆಯೇ?

'ವಿಕಾಸ ಸಂಕಲ್ಪ' ಎಂಬ ಡಾಂಭಿಕ ಹೆಸರೇನೋ ಇಟ್ಟುಕೊಂಡು ಒಂದಿಷ್ಟು ಮಂತ್ರಿಗಳು, ಅಧಿಕಾರಿಗಳು ಮತ್ತು ಫಲಾನುಭವಿಗಳನ್ನು ಒಂದೆಡೆ ಸೇರಿಸಿ ಕಾರ್ಯಕ್ರಮ ಜರುಗಿಸಿದ್ದು ಒಂದು ಪಬ್ಲಿಸಿಟಿ ಈವೆಂಟ್ ಮಾತ್ರ. ಈ ಕಾರ್ಯಕ್ರಮ ನಡೆಸುವುದಕ್ಕೆ ಮುನ್ನ ಮುಖ್ಯಮಂತ್ರಿ ಇಲ್ಲಿನ ಜನಪ್ರತಿನಿಧಿಗಳು ಮತ್ತು ಜನಾಭಿಪ್ರಾಯ ರೂಪಿಸುವವರನ್ನು ಬೆಂಗಳೂರಿಗೆ ಕರೆಸಿಕೊಂಡು ಮೀಟಿಂಗ್ ಮಾಡಿ ಇಲ್ಲಿನ ಪ್ರಚಲಿತ ಸಮಸ್ಯೆಗಳನ್ನು ಗುರುತಿಸಿಕೊಂಡು ಅವಕ್ಕೆ ಉತ್ತರ ಹೇಳುವ ಪರಿಶ್ರಮವಾದರೂ ಮಾಡಿದ್ದರೆ 'ವಿಕಾಸ ಉತ್ಸವ'ಕ್ಕೆ ಕೊಂಚವಾದರೂ ಅರ್ಥವಿರುತ್ತಿತ್ತು. ಉತ್ಸವದ ಹೆಸರಿನಲ್ಲಿ ಮೀಡಿಯಾದಲ್ಲಿ ಒಂದಿಷ್ಟು ಜಾಹೀರಾತು ಹಾಕಿಸಿದರೆ ಆಕಾಶವನ್ನು ಭೂಮಿ ಮೇಲೆ ತಂದ ಭ್ರಮೆ ಸೃಷ್ಟಿಸಬಹುದು ಎಂಬುದು ಆಡಳಿತಗಾರರ ಭ್ರಮೆ.

('ಕರಾವಳಿ ಅಲೆ' ಸಂಪಾದಕೀಯ ಜೂನ್ 19, 2009)

ಮೀನು ದುಬಾರಿಯಾದರೆ ಬದುಕುವುದೆಂತು ?

ಕರಾವಳಿ ಜಿಲ್ಲೆಗಳಲ್ಲಿ ಐದಾರು ವರ್ಷಗಳಿಂದ ಮೀನಿನ ಅಭಾವ, ಕ್ಷಾಮ ಶುರುವಾಗಿದೆ. ಹಿಂದೆ ಸಿಗುತ್ತಿದ್ದ ಗುಣಮಟ್ಟದ ಜಾತಿಯ ಮೀನಿಗೆ ಈಗ ಬರಗಾಲ. ಯಾವ್ಯಾವುದೋ ನಾವು ಜನ್ಮದಲ್ಲಿಯೂ ತಿನ್ನದ ಮೀನುಗಳು ಈಗ ಮಾರ್ಕೆಟಿಗೆ ಬರುತ್ತಲಿವೆ. ಹಾಗಾದರೆ ಅಷ್ಟೊಂದು ಪ್ರಮಾಣದಲ್ಲಿ ಬರುವ ಅಂಜಲ್, ಮಾಂಜಿ, ಸಿಗಡಿ ಎಲ್ಲಾ ಏನಾದವು? ಒಂದು ವೇಳೆ ಆಗೊಮ್ಮೆ ಈಗೊಮ್ಮೆ ಸಿಕ್ಕಿದರೂ ಅಬ್ಬಬ್ಬಾ! ಅದರ ಬೆಲೆ ಏನು? ಇಷ್ಟರತನಕ ಮಾರ್ಕೆಟ್ಟಿನಲ್ಲಿ ಸಾಕಷ್ಟು ಮೀನು ಬರುವುದಿಲ್ಲ. ಬಂದರೂ ಭೂತಾಯಿ, ಬಂಗುಡೆ, ಮದ್ಮಲ್ ಮುರು, ಮೀನುಗಳೇ ತಿಂದು ತಿಂದು ಈಗ ಅದನ್ನು ನೋಡುವಾಗ ವಾಕರಿಕೆ ಬರುತ್ತಿದೆ. ಈಗ ಮಳೆಗಾಲ ಶುರುವಾದ ಕಾರಣ ಎರಡು ತಿಂಗಳು ಕರಾವಳಿ ಆಳ ಸಮುದ್ರ ಮೀನುಗಾರಿಕೆಗೆ ನಿಷೇಧವಿದೆ. ಇಂದ ಮೀನು ಮಾರ್ಕೆಟ್ಟಿಗೆ ಹೋಗುವುದು ಯಾಕೆಂದು ಅನಿಸುತ್ತಿದೆ. ಯಾಕೆಂದರೆ ಮೀನು [illegible]ಷ್ಟೂ ಸಹ ದುಬಾರಿಯಾಗಲಿದೆ. 50 ರೂಪಾಯಿಗೆ ಮೂರ್ನಾಲ್ಕು ಬಂಗುಡೆ ಇದ್ದದ್ದು, ಇನ್ನು 100 ರೂಪಾಯಿಗೆ ನಾಲ್ಕೈದು ಸಿಕ್ಕಿದರೂ ಆಯಿತು. ಅತ್ತ ಕೋಳಿ, ಮಟನ್ ಮೊಟ್ಟೆಯ ಬೆಲೆ ಸಹ ಏರುತಲಿದೆ. ಮೀನು ಸಿಗದಿದ್ದರೆ, ಮೀನು ದುಬಾರಿಯಾದರೆ, ಪರ್ಯಾಯವಾಗಿ ಮಾಂಸ ಮೊಟ್ಟೆ ತಿನ್ನಬೇಕಾಗುತ್ತದೆ. ತರಕಾರಿ ತೆಗೆದುಕೊಳ್ಳೋಣ ಎಂದರೆ ಸುಖವಿದೆಯೋ? ಅದು ಸಹ ದುಬಾರಿಯಾಗಿದೆ. ಜನಸಾಮಾನ್ಯರಿಗೆ ಏನನ್ನು ಕೊಂಡುಕೊಳ್ಳುವುದು ಏನನ್ನು ತಿನ್ನುವುದು ಎಂಬ ಚಿಂತೆ ಆವರಿಸಿದೆ. ಮೀನುಪ್ರಿಯರ ಗೋಳು ಯಾರಲ್ಲಿ ಹೇಳುವುದು? ಹೀಗಿರುವಾಗ ಮೀನುಗಾರರ ಪರಿಸ್ಥಿತಿ ಏನು ಎಂಬ ಪ್ರಶ್ನೆ ಉದ್ಭವಿಸುವುದು ಸಹಜವಲ್ಲವೇ? ಇದಕ್ಕೆ ಸರಕಾರ ಏನು ಕ್ರಮ ಕೈಗೊಳ್ಳಲಿದೆ?

ಜೆಎಫ್ ಡಿ'ಸೋಜಾ ಅತ್ತಾವರ

('ಕರಾವಳಿ ಅಲೆ' ಸ್ಪಂದನ ಅಂಕಣದಲ್ಲಿ [illegible]ಓದುಗರೊಬ್ಬರ ಪತ್ರ, ಜೂನ್ 20, 2009)

2008-09 ರ ಆರ್ಥಿಕ ಸಮೀಕ್ಷೆ

ದೇಶಕ್ಕೆ ಹಾನಿಕಾರಕವಾದ ಧೋರಣೆಯ ದಿಕ್ಕಿನ ಸೂಚಕ : ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡನೆ

ಜುಲೈ 2ರಂದು ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿಯವರು ಸಂಸತ್ತಿನಲ್ಲಿ ಮಂಡಿಸಿದ ಈ ವರ್ಷದ ಆರ್ಥಿಕ ಸಮೀಕ್ಷೆ ಯುಪಿಎ ಸರಕಾರ ದೇಶದ ಹಿತಾಸಕ್ತಿಗಳಿಗೆ ಹಾನಿಕಾರಕವಾದ ಒಂದು ಧೋರಣೆಯ ದಿಕ್ಕನ್ನು ಹಿಡಿದಿದೆ ಎಂಬುದನ್ನು ಸೂಚಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಟೀಕಿಸಿದೆ. ಈಗ ಜಗತ್ತಿನಲ್ಲೆಲ್ಲಾ ಹೆಸರುಗೆಡಿಸಿಕೊಂಡಿರುವ ನವ-ಉದಾರವಾದದ ಅಜೆಂಡಾಕ್ಕೆ ಮತ್ತೆ ಜೀವ ಕೊಡಲು ಯುಪಿಎ ಪ್ರಯತ್ನಿಸಿದರೆ ಅದಕ್ಕೆ ಬಲವಾದ ಪ್ರತಿರೋಧ ಬರುತ್ತದೆ ಎಂದು ಅದು ಎಚ್ಚರಿಸಿದೆ.

ಜಾಗತಿಕ ಆರ್ಥಿಕ ಬಿಕ್ಕಟ್ಟು ಪ್ರತಿಕೂಲ ಪರಿಣಾಮ ಬೀರಿದೆ ಎಂಬುದು ಈ ಸಮೀಕ್ಷೆಯಿಂದ ಕಂಡು ಬರುತ್ತದೆ. ಒಟ್ಟಾರೆ ಬೆಳವಣಿಗೆ ದರ 2008-09ರಲ್ಲಿ 6.7ಶೇ. ಕ್ಕೆ ಇಳಿದಿದೆ ಎಂದು ಸರಕಾರ ಒಪ್ಪಿಕೊಂಡಿದೆ. ಕೃಷಿ ಬೆಳವಣಿಗೆ ದರದಲ್ಲಿ 3.3 ಶೇ.ದಷ್ಟು ಇಳಿಕೆ ಮತ್ತು ಸರಕು ಉತ್ಪನ್ನಗಳ ಬೆಳವಣಿಗೆ ದರದಲ್ಲಿ 5.8ಶೇ. ಇಳಿಕೆ ಅಪಾಯಕಾರಿ ಸೂಚನೆಗಳು. ತಲಾ ಬಳಕೆ 2007-08ರಲ್ಲಿ 6.9ಶೇ. ಇದ್ದದ್ದು 2008-09ರಲ್ಲಿ ಕೇವಲ 1.4ಶೇ.ಕ್ಕೆ ಇಳಿದಿದೆ. ಅಂದರೆ ಜನಗಳ ಕೊಳ್ಳುವ ಸಾಮರ್ಥ್ಯ ದೊಡ್ಡ ಪ್ರಮಾಣದಲ್ಲಿ ಕುಂಠಿತಗೊಂಡಿದೆ ಎಂದರ್ಥ.

ಆದರೆ ಈ ಕಾಯಿಲೆಗೆ ಯುಪಿಎ ಸರಕಾರ ಸೂಚಿಸುವ ಔಷಧಿಯಾದರೂ ಏನು?

ಪಾಠ ಕಲಿತಿಲ್ಲ

ಜಗತ್ತಿನಲ್ಲಿ ಎಲ್ಲೆಡೆ ಹಣಕಾಸು ವಲಯದ ಮೇಲೆ ವಿವಿಧ ಸ್ವರೂಪಗಳಲ್ಲಿ ನಿಯಂತ್ರಣಗಳನ್ನು ಮತ್ತೆ ತರುತ್ತಿರುವಾಗ ಈ ಆರ್ಥಿಕ ಸಮೀಕ್ಷೆ "ಆರ್ಥಿಕ ಸುಧಾರಣೆಗಳತ್ತ ಮರಳುವ" ಹೆಸರಿನಲ್ಲಿ ಆರ್ಥಿಕದ ಪ್ರಮುಖ ವಲಯಗಳನ್ನು ವಿದೇಶಿ ನೇರ ಹೂಡಿಕೆ(ಎಫ್‌ಡಿಐ)ಗಳಿಗೆ ತೆರೆಯಬೇಕು, ಹಣಕಾಸು ವಲಯದ ಮೇಲಿನ ನಿಯಂತ್ರಣಗಳನ್ನು ತೆಗೆಯಬೇಕು ಎಂದು ಸೂಚಿಸುತ್ತಿದೆ. ವಿಮೆ, ಬ್ಯಾಂಕಿಂಗ್, ರಕ್ಷಣಾ ವಲಯದಲ್ಲಿ ಮಾತ್ರವಲ್ಲ, ಬಹಳ ಸೂಕ್ಷ್ಮ ವಲಯವಾದ ಚಿಲ್ಲರೆ ಮಾರಾಟ ವಲಯವನ್ನೂ ವಿದೇಶಿ ಹೂಡಿಕೆಗಳಿಗೆ ತೆರೆದು ಕೋಟ್ಯಂತರ ಕುಟುಂಬಗಳ ಬದುಕಿನ ಮೇಲೆ ನೇರವಾಗಿ ಹೊಡೆತ ಹಾಕುವ ಸೂಚನೆಯಿದು. ಸಾರ್ವಜನಿಕ ವಲಯದ ಶೇರುಗಳನ್ನು ಮಾರಿ ವರ್ಷಕ್ಕೆ 25000 ಕೋಟಿ ರೂ.ಗಳನ್ನು ಸಂಗ್ರಹಿಸಬೇಕು ಎಂದೂ ಸಮೀಕ್ಷೆ ಸೂಚಿಸುತ್ತದೆ.

ಪುಟ 6 ಕ್ಕೆ

ದೇಶಕ್ಕೆ ಹಾನಿಕಾರಕವಾದ ಧೋರಣೆಯ ದಿಕ್ಕಿನ ಸೂಚಕ ......

ಪುಟ 5 ರಿಂದ

ತದ್ವಿರುದ್ಧವಾಗಿ ಈ ಸಮೀಕ್ಷೆ ಆರ್ಥಿಕದ ನಿಧಾನಗತಿಯಿಂದಾಗಿ ಅಪಾರ ಪ್ರಮಾಣದಲ್ಲಿ ಉದ್ಯೋಗ ನಷ್ಟಗಳು, ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಇಳಿಯುತ್ತಿರುವ ಆದಾಯಗಳು ಮುಂತಾದ ಬಿಕಟ್ಟಿನ ಮಾನವೀಯ ಆಯಾಮಗಳ ಬಗ್ಗೆ ಏನೂ ಹೇಳುವುದಿಲ್ಲ, ಅವುಗಳನ್ನು ಹೇಗೆ ಎದುರಿಸಬೇಕು ಎಂದು ಸೂಚಿಸುವ ಮಾತಂತೂ ಬಹಳ ದೂರವೇ ಉಳಿದಿದೆ. ಆರ್ಥಿಕ ಧೋರಣೆಗಳನ್ನು ರೂಪಿಸುವ ಮಂದಿ ಜಾಗತಿಕ ಹಣಕಾಸು ಕುಸಿತದಿಂದ ಏನೂ ಪಾಠ ಕಲಿತಿಲ್ಲ ಎಂಬುದಂತೂ ಸ್ಪಷ್ಟ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಇದು ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆಯ ಮತ್ತು ಆಹಾರ ಭದ್ರತೆಯ ಮಹತ್ವದ ಪ್ರಶ್ನೆಯನ್ನು ಅದು ಚರ್ಚಿಸುವಾಗ ಇನ್ನೂ ಸ್ಪಷ್ಟವಾಗಿ ಕಾಣುತ್ತದೆ. ಇಂತಹ ಪರಿಸ್ಥಿತಿಯಲ್ಲಿಯೂ ಅದು ಪಡಿತರ ವ್ಯವಸ್ಥೆಗೆ ನೀಡುವ ಆಹಾರ ಸಬ್ಸಿಡಿಯನ್ನು ಕಡಿತ ಮಾಡಬೇಕು, ಈಗಾಗಲೆ ವಿಫಲವಾಗಿರುವ ಆಹಾರ ಕೂಪನ್ ವ್ಯವಸ್ಥೆಯನ್ನು ಮತ್ತೆ ತರಬೇಕು ಎಂದು ಪ್ರಸ್ತಾಪವಿಟ್ಟಿದೆ. ಅಡುಗೆ ಅನಿಲದ ಮೇಲಿನ ಸಬ್ಸಿಡಿಗಳನ್ನು ಕಡಿತ ಮಾಡಬೇಕು ಎಂದೂ ಅದು ಸೂಚಿಸಿದೆ. ಇದನ್ನು ಒಂದು ಕುಟುಂಬಕ್ಕೆ 6-8 ಸಿಲಿಂಡರುಗಳಿಗೆ ಸೀಮಿತಗೊಳಿಸಬೇಕು ಎಂದು ಅದು ಹೇಳಿದ' ಅಂದರೆ ಒಂದು ಕುಟುಂಬ ಒಂದು ವರ್ಷದಲ್ಲಿ ಇದಕ್ಕಿಂತ ಹೆಚ್ಚಿನ ಸಿಲಿಂಡರುಗಳನ್ನು ಬಳಸುವಾಗ ಹೆಚ್ಚಿನ ಬೆಲೆ ತೆರಬೇಕು.

ಕಾರ್ಪೊರೇಟ್‌ಗಳಿಗೆ ಮಾತ್ರ ಉದಾರತೆ

ಜನಸಾಮಾನ್ಯರ ಪ್ರಶ್ನೆಗಳ ಬಗ್ಗೆ ಇಂತಹ ಕಠಿಣ ನಿಲುವು ತೋರಿರುವ ಸಮೀಕ್ಷೆ ದೊಡ್ಡ ಕಂಪನಿಗಳಿಗೆ ಇನ್ನಷ್ಟು ತೆರಿಗೆ ರಿಯಾಯ್ತಿಗಳನ್ನು ಸೂಚಿಸುವಲ್ಲಿ ಮಾತ್ರ ಬಹಳ ಉದಾರತೆಯನ್ನು ತೋರಿದೆ. ಕಳೆದ ಐದು ವರ್ಷಗಳಲ್ಲಿ ಅವುಗಳ ಅಪಾರ ಲಾಭಗಳ ಮೇಲೆ ವಿಧಿಸಿದ ವಿವಿಧ ತೆರಿಗೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಅದು ಸೂಚಿಸಿದೆ. ಹೀಗೆ ಅದು ಆದಾಯ ಸಂಗ್ರಹಣೆಗೆ ತೆರಿಗೆ ಸಂಗ್ರಹದ ಬದಲು ಸಾರ್ವಜನಿಕ ವಲಯದ ಆಸ್ತಿಗಳನ್ನು ಮಾರುವ ದಾರಿಯತ್ತ ಗಮನ ಕೇಂದ್ರೀಕರಿಸುವಂತಿದೆ.

ಜಗತ್ತಿನಾದ್ಯಂತ ದೇಶಗಳು ಹಣಕಾಸು ಮೂಲಭೂತವಾದದಿಂದ ದೂರ ಸರಿಯುತ್ತಿರುವಾಗ ಹಣಕಾಸು ಕೊರತೆಯನ್ನು ಸೀಮಿತಗೊಳಿಸುವ ಕಾನೂನಿನ ಒಂದು ಹೊಸ ಆವೃತ್ತಿಯನ್ನು ತಂದು ಹಣಕಾಸು ಕೊರತೆಯನ್ನು ಶೂನ್ಯಕ್ಕೆ ಇಳಿಸಬೇಕೆಂಬ ಸೂಚನೆಯೂ ಈ ಸಮೀಕ್ಷೆಯಲ್ಲಿದೆ. ಇದು ಒಂದು ತರ್ಕಹೀನ ಸೂಚನೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಟೀಕಿಸಿದೆ.

ಜನಗಳ ಮತ್ತು ದೇಶದ ಹಿತಾಸಕ್ತಿಗಳಿಗೆ ಹಾನಿಕಾರಕವಾದ ಈ ಸಮೀಕ್ಷೆಯಲ್ಲಿನ ಬಹಳಷ್ಟು ಸೂಚನೆಗಳು ಕಳೆದ ಐದು ವರ್ಷಗಳಲ್ಲಿ ಯುಪಿಎ ಸುಧಾರಣಾ ಅಜೆಂಡಾದ ಭಾಗವಾಗಿದ್ದವು. ಎಡಪಕ್ಷಗಳ ಮಧ್ಯಪ್ರವೇಶದಿಂದ ಅವನ್ನು ಸ್ವಲ್ಪ ಮಟ್ಟಿಗೆ ತಡೆಯಲು ಸಾಧ್ಯವಾಗಿತ್ತು. ಸಬ್ಸಿಡಿ ಕಡಿತಗಳು, ಹಣಕಾಸು ಉದಾರೀಕರಣ, ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳ ಮಾರಾಟ, ಖಾಸಗೀಕರಣ ಮುಂತಾದ ಈಗ ಹೆಸರುಗೆಡಿಸಿಕೊಂಡಿರುವ ನವ-ಉದಾರವಾದದ ಅಜೆಂಡಾಕ್ಕೆ ಮತ್ತೆ ಜೀವ ಕೊಡಲು ಯುಪಿಎ ಸರಕಾರ ಪ್ರಯತ್ನಿಸಿದರೆ ಅದಕ್ಕೆ ಬಲವಾದ ಪ್ರತಿರೋಧ ಒಡ್ಡಲಾಗುತ್ತದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಎಚ್ಚರಿಸಿದೆ.



ಸಂಪ್ರದಾಯರಹಿತ ಸರಳ ಮದುವೆ

ಮೇ 30, 2009 ರಂದು ಮಂಡ್ಯ ಜಿಲ್ಲೆಯ ಭಾರತಿ ನಗರದಲ್ಲಿ ಸಿ.ಪ್ರದೀಪ್ ಮತ್ತು ಜಯಲಕ್ಷ್ಮಿಯವರ ಸರಳ ವಿವಾಹ ನಡೆಯಿತು. ಸಂಪ್ರದಾಯರಹಿತವಾದ ಈ ಮದುವೆಯಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯ ಮುಖಂಡರಾದ ಪುಟ್ಟಮಾದು, 'ಜನಶಕ್ತಿ'ಯ ಪರವಾಗಿ ಆರ್.ರಾಮಕೃಷ್ಣ ಮುಂತಾದವರು ಪಾಲ್ಗೊಂಡಿದ್ದರು. ಮದುವೆಯ ಸಂಭ್ರಮದಲ್ಲಿ ಹೊಸ ಜೋಡಿಯು ಜನಶಕ್ತಿ ಪತ್ರಿಕೆಗೆ 1000 ರೂಗಳ ಕೊಡುಗೆ ನೀಡಿದೆ. ಜೋಡಿಗೆ ಜನಶಕ್ತಿಯ ಶುಭಾಶಯಗಳು.

ವಿದ್ಯುತ್ ಕೊರತೆ ಮತ್ತು ದರ ಏರಿಕೆ....

ಪುಟ 3 ರಿಂದ

'ಯಾತಕ್ಕೆ ಮಳೆ ಹೋದವೋ ಶಿವ ಶಿವ, ಲೋಕ ತಲ್ಲಣಿಸುತಾದೊ' ಎಂದು ಅಸಹಾಯಕತೆಯನ್ನು ನಟಿಸಿ ಕೈಚೆಲ್ಲಿ ಕೂಡುವುದು, ದೇವರ ಕಡೆಗೆ ಕೈತೋರಿಸುವುದು ಇಂದಿನ ವಿಜ್ಞಾನ ತಂತ್ರಜ್ಞಾನದ ಬೆಳವಣಿಗೆಯ ಹಂತದಲ್ಲಿ ಬೇಜವಾಬ್ದಾರಿಯ ಪರಮಾವಧಿ ಅಷ್ಟೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ನಿಸರ್ಗ ಪ್ರೇರಿತ ಕಾರಣಕ್ಕಾಗಿ ವಿದ್ಯುತ್ ಕಡಿತವಾದ ಪ್ರಕರಣಗಳು ಕಾಣುವುದಿಲ್ಲ. ಹಾಗೆಯೇ ವಿಶ್ವದಲ್ಲಿ ಎಲ್ಲಿಯೂ ಆಗಬೇಕಾಗಿಲ್ಲ. ನಮ್ಮ ದೇಶದಲ್ಲಿ ನೈಸರ್ಗಿಕವಾದ ವಿದ್ಯುತ್ ಉತ್ಪಾದನೆಗೆ ಜಲವಿದ್ಯುತ್ ಮೂಲಗಳು ಕಲ್ಲಿದ್ದಲು, ಗಾಳಿ, ಸೌರಮಾನಶಕ್ತಿ ಮೂಲ ಇತ್ಯಾದಿಗಳು ಯಥೇಚ್ಛವಾಗಿಯೇ ಇವೆ.

ಜಲವಿದ್ಯುತ್ ಮೂಲಗಳಿಂದ 1,50,000 ಮೆಗಾವ್ಯಾಟ್ ವಿದ್ಯುತ್ ತಯಾರಿಕೆ ಸಾಧ್ಯವಾದರೆ ಇಂದು ಕೇವಲ 30 ರಿಂದ 40 ಮೆಗಾವ್ಯಾಟ್ ವಿದ್ಯುತ್ ಮಾತ್ರ ತಯಾರಿಸಲಾಗುತ್ತಿದೆ. ಕಲ್ಲಿದ್ದಲು ಗಣಿಗಳ ಬಳಿಯೇ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಿದರೆ ಒಂದು ಕಡೆ ಅಗ್ಗವಾದ ವಿದ್ಯುತ್ ಮತ್ತೊಂದು ಕಡೆ ಪರಿಸರಕ್ಕೆ ಸೀಮಿತ ಹಾನಿಯ ಮೂಲಕ ಎರಡೂ ಕಡೆಯೂ ಲಾಭವಾಗುತ್ತದೆ. ಕಲ್ಲಿದ್ದಲು ಸಂಪತ್ತು ನಮ್ಮ ದೇಶದಲ್ಲಿ ಇನ್ನೂ ನೂರಾರು ವರ್ಷಗಳಿಗಾಗುವಷ್ಟಿದೆಯೆಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ. ಇವುಗಳ ಮೇಲೆ ಅರೆಮುಕುಟವಿಟ್ಟಂತೆ ಬಿ.ಹೆಚ್.ಇ.ಎಲ್. (ಭಾರತ್ ಹೆವಿ ಎಲೆಕ್ಟ್ರಿಕಲ್) ಎನ್.ಟಿ.ಪಿ.ಸಿ (ರಾಷ್ಟ್ರೀಯ ಶಾಖೋತ್ಪನ್ನ ವಿದ್ಯುತ್ ನಿಗಮ) ಎನ್.ಎಚ್.ಪಿ.ಸಿ (ರಾಷ್ಟ್ರೀಯ ಜಲವಿದ್ಯುತ್ ನಿಗಮ) ಎನ್‌ಪಿಸಿ (ಅಣುವಿದ್ಯುತ್ ನಿಗಮ) ಇತ್ಯಾದಿ ಸಾರ್ವಜನಿಕ ಸಂಸ್ಥೆಗಳು ರೂಪುಗೊಂಡು ದೊಡ್ಡ ಪ್ರಮಾಣದ ವಿದ್ಯುತ್‌ನ್ನು ವಿಶ್ವದ ಯಾವುದೇ ಅಭಿವೃದ್ಧಿ ಹೊಂದಿದ ದೇಶಕ್ಕೆ ಯಾವುದೇ ಖಾಸಗೀ ಕಂಪನಿಗಳ ಜೊತೆ ಸ್ಪರ್ಧಿಸಿ ಅತ್ಯಂತ ಅಗ್ಗವಾಗಿ ತಯಾರಿಸಿಕೊಡುವ ಪ್ರಸಿದ್ಧಿ ಹೊಂದಿವೆ. ಇವುಗಳಲ್ಲಿ ನುರಿತ ವಿಜ್ಞಾನಿಗಳು ತಂತ್ರಜ್ಞರು ದುಡಿಯುತ್ತಿದ್ದಾರೆ.

ಹೀಗೆ ಅತ್ಯಂತ ಅಗ್ಗದ ಜಲವಿದ್ಯುತ್ ಮೂಲಗಳನ್ನು ಬಳಸಿಕೊಂಡರೆ ದೇಶದ 'ಒಂದೆಡೆ ನೆರೆ, ಮತ್ತೊಂದೆಡೆ ಬರಗಾಲ'ವಿರುವ ಸಂದರ್ಭದಲ್ಲಿಯೂ ಜಲವಿದ್ಯುತ್ತನ್ನೇ ಒಂದಡೆಯಿಂದ ಮತ್ತೊಂದೆಡೆಗೆ ವರ್ಗಾಯಿಸಬಹುದು. ಇಡೀ ದೇಶದಲ್ಲಿಯೇ ಜಲವಿದ್ಯುತ್‌ನ ಒಟ್ಟು ಉತ್ಪಾದನೆಯಲ್ಲಿ ಕೊರತೆ ಬಿದ್ದರೆ, ಕೊರತೆ ಬಿದ್ದಷ್ಟು ಶಾಖೋತ್ಪನ್ನ ವಿದ್ಯುತ್ ಮತ್ತಿತರೆ ವಿದ್ಯುತ್ ಎಲ್ಲಾ ಕಾಲವೂ ನೀಡುವುದು ಸಾಧ್ಯ. ಅದನ್ನು ಕೂಡ ಅತ್ಯಂತ ಅಗ್ಗವಾಗಿಯೇ ನೀಡಲು ಸಾಧ್ಯ. ಹೀಗೆ ಜನತೆಗೆ, ಕೃಷಿ ಹಾಗೂ ಕೈಗಾರಿಕಾ ಉತ್ಪಾದನೆಗೆ ಅಗತ್ಯವಾದ ವಿದ್ಯುತ್‌ನ್ನು ಅವಶ್ಯವಾದಷ್ಟು ಹಾಗೂ ಅಗ್ಗವಾಗಿ ನೀಡುವಲ್ಲಿ ಮುಖ್ಯವಾಗಿ ಕೇಂದ್ರ ಸರ್ಕಾರ ಜೊತೆಗೆ ರಾಜ್ಯ ಸರ್ಕಾರಗಳು ಒಂದು ಸಮಗ್ರ ಯೋಜನೆ ಮತ್ತು ಒಂದು ರಾಷ್ಟ್ರೀಯ ವಿದ್ಯುತ್ ಜಾಲ-ದೇಶದ ಯಾವುದೇ ಮೂಲೆಯಿಂದ ಮತ್ತಾವುದೇ ಭಾಗದ ವಿದ್ಯುತ್‌ನ್ನು ಸರಾಗವಾಗಿ ಕೊಂಡೊಯ್ಯುವ ಕಂಬ, ತಂತಿಗಳ ಜಾಲವೊಂದನ್ನು ರೂಪಿಸುವುದು ಅದಕ್ಕಾಗಿ ಸರ್ಕಾರದಿಂದ ಹಣ ಹೂಡಿಕೆ ಇದೇ ಮುಖ್ಯ ಅಗತ್ಯ.

ಆದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೆಚ್ಚು ವಿದ್ಯುತ್ ಬಳಕೆಯಿಂದ ಅತಿ ಹೆಚ್ಚು ಲಾಭ ಪಡೆಯುವ ಬೃಹತ್ ಖಾಸಗಿ ಉದ್ಯಮಿಗಳ ಮೇಲೆ ತೆರಿಗೆ ಹಾಕಿ ಹಣ ಸಂಪನ್ಮೂಲ ಸಂಗ್ರಹಿಸಿ ಒಂದು ಸಮಗ್ರ ಯೋಜನೆಯಲ್ಲಿ ಹಣ ಹೂಡುವುದಕ್ಕೆ ಬದಲಾಗಿ ಈ ಬೃಹತ್ ಉದ್ಯಮಿಗಳಿಗೆ ತೆರಿಗೆ ಕಡಿತ, ವಿನಾಯಿತಿಗಳನ್ನು ನೀಡಿ, ಅವರನ್ನು ಓಲೈಸುವುದರಲ್ಲಿಯೇ ನಿರತವಾಗಿರುವುದರಿಂದ ಈ ಸಮಸ್ಯೆ ನಮ್ಮನ್ನು ಕಾಡುತ್ತಿದೆ.

ಕಾಂ. ರಾಮಚಂದ್ರ ಉಚ್ಚಿಲ್ ಇನ್ನಿಲ್ಲ

ಪುಟ 2 ರಿಂದ

ಬಡವರಿಗೆ ಸರಕಾರೀ ಭೂಮಿಯಲ್ಲಿ ಮನೆಕಟ್ಟಿ ವಾಸಿಸಲು ಸಹಸ್ರಾರು ಜನರಿಗೆ ಪ್ರೋತ್ಸಾಹ ನೀಡಿ ಈ ಮೂಲಕ ನಿವೇಶನಗಳನ್ನು ಹೊಂದಿದವರಿಗೆ ಅದರ ಹಕ್ಕುಪತ್ರಗಳನ್ನು ನೀಡುವಂತೆ ಯಶಸ್ವೀ ಹೋರಾಟಗಳನ್ನು ನಡೆಸಲಾಗಿದೆ. ಹೀಗೆ ತನ್ನ ಜೀವನದುದ್ದಕ್ಕೂ ಜನಸಾಮಾನ್ಯರ ಬಗ್ಗೆ, ಅವರ ಸಮಸ್ಯೆಗಳ ಪರಿಹಾರಕ್ಕಾಗಿ ನಡೆಸಿದ ಹೋರಾಟಗಳು ಅಸಂಖ್ಯಾತ.

ಕೋಟೆಕಾರು ಪ್ರದೇಶದ 14 ಗ್ರಾಮಗಳ ಕ್ಷೇತ್ರಕ್ಕೆ ಸಂಬಂಧಿಸಿ ಒಂದು ಸಹಕಾರೀ ಬೇಂಕ್ ಇದೆ. ಅದು ಕೋಟೆಕಾರ್ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್. ಹಲವು ವರ್ಷಗಳಲ್ಲಿ ಈ ಬ್ಯಾಂಕಿನ ನಿರ್ದೇಶಕರಾಗಿ ಮತ್ತು ಕಳೆದ 10 ವರ್ಷಗಳಿಂದ ಅದರ ಅಧ್ಯಕ್ಷರಾಗಿದ್ದು ಈ ಬ್ಯಾಂಕ್ ಜಿಲ್ಲೆಯಲ್ಲೇ ಒಂದು ಉತ್ತಮ ಆರ್ಥಿಕ ಸಂಸ್ಥೆಯಾಗಿ ... ಹೊಂದುವಂತೆ ಅವರು ಮಾಡಿದ್ದಾರೆ. ಅದೊಂದು ದೊಡ್ಡ ಸಾಧನೆ.

ಪಕ್ಷವು ನಡೆಸಿದ ಅನೇಕ ಹೋರಾಟಗಳಲ್ಲಿ ಅವರು ಮುಂಚೂಣಿ ಪಾತ್ರ ವಹಿಸಿದ್ದಾರೆ. ತಳಮಟ್ಟದ ಕಾರ್ಯಕರ್ತರಾಗಿ ಬಂದು ತನ್ನ ಕಠಿಣ ಪರಿಶ್ರಮದಿಂದ ಜನನಾಯಕರಾಗಿ ಬೆಳೆದುಬಂದ ಕಾ.ಉಚ್ಚಿಲರು 2004 ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಉಳ್ಳಾಲ ಕ್ಷೇತ್ರದಿಂದ ಪಕ್ಷದ ಉಮೇದುವಾರರಾಗಿ ಸ್ಪರ್ಧಿಸಿದ್ದಾರೆ. ಅವರು ಒಬ್ಬ ಸರಳ ಜೀವಿ. ನಿಷ್ಠಾವಂತ ಜನಸೇವಕ. ಒಳ್ಳೆಯ ಸಂಘಟಕ. ಇಂತಹ ಸ್ನೇಹಮಯಿ ಮುಖಂಡರೊಬ್ಬರನ್ನು ಕಳೆದುಕೊಂಡ ಜಿಲ್ಲೆಯ ಪಕ್ಷಕ್ಕೂ, ರೈತ ಸಂಘಟನೆಗೂ ಅಪಾರ ನಷ್ಟವಾಗಿದೆ. ಅವರು ಪತ್ನಿ, ಒಬ್ಬ ಮಗ ಮತ್ತು ಮೂವರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ. ಅವರ ನಿಧನದ ವಾರ್ತೆ ಕೇಳಿ ಅವರ ಪಾರ್ಥೀವ ಶರೀರದ ಅಂತಿಮ ದ... ಪಡೆಯಲು ವಿವಿಧ ಪಕ್ಷಗಳ ಮುಖಂಡರು, ಅಪಾರ ಸಂಖ್ಯೆಯಲ್ಲಿ ಬಂಧುಮಿತ್ರರು ಬಂದಿರುವು... ಕಂಡರೆ ನಿಜವಾಗಿಯೂ ಅವರು ಒಬ್ಬ ಜನನಾಯಕರು ಎಂಬುದನ್ನು ತೋರಿಸುತ್ತದೆ.

ಚಂದಾದಾರರಿಗೆ ಮನವಿ

ದಯವಿಟ್ಟು ಪತ್ರಿಕೆಯ ಚಂದಾ ಅವಧಿ ಮುಗಿಯುವ ಮೊದಲೇ ನವೀಕರಣ ಮಾಡಿ. ತಮಗೆ ತಲುಪುವ ಪತ್ರಿಕೆಯಲ್ಲಿ ವಿಳಾಸದ ಮೇಲೆ ಪತ್ರಿಕೆ ಕಳಿಸಲಾರಂಭಿಸಿದ ದಿನಾಂಕ - ಮುಗಿಯುವ ದಿನಾಂಕ ಎರಡನ್ನೂ ನಮೂದಿಸಲಾಗಿರುತ್ತದೆ ಗಮನಿಸಿ. ಮುಂಚಿತವಾಗಿ ನವೀಕರಿಸಿ.

ಚಂದಾ ದರ ವಿವರ

ವಾರ್ಷಿಕ	:	250.00 ರೂ.
ದ್ವೈ ವಾರ್ಷಿಕ	:	500.00 ರೂ.
ಪಂಚವಾರ್ಷಿಕ	:	1250.00 ರೂ.

ಈ ವಿಚಾರವಾಗಿ ನೀವು ಸಂಪರ್ಕಿಸಬೇಕಾದವರು

ವೀರಣ್ಣ ಕಲ್ಮನಿ : 9379268990

(ಗಮನಿಸಿ: ದೂರವಾಣಿ ಸಂಖ್ಯೆ ಬದಲಾಗಿದೆ)

- ಸಂ

ಶಿಕ್ಷಣ ಕ್ಷೇತ್ರದಲ್ಲಿ ರಾಜ್ಯಗಳನ್ನು ಮೂಲೆಗೊತ್ತುವ ಪ್ರವೃತ್ತಿ ಸಲ್ಲದು

ಹತ್ತನೇ ತರಗತಿ ಪರೀಕ್ಷೆಯನ್ನು ರದ್ದು ಮಾಡಬೇಕೇ, ಅಥವಾ ಐಚ್ಛಿಕಗೊಳಿಸಬೇಕೇ ಎಂಬುದನ್ನು ಅಥವಾ ಇನ್ನಾವುದೇ ಪ್ರಸ್ತಾವವನ್ನು ರಾಜ್ಯ ಸರಕಾರಗಳ ಮುಂದಿಡಬೇಕಾಗಿತ್ತು ಮತ್ತು ಎಲ್ಲಾ ರಾಜ್ಯಗಳ ಶಿಕ್ಷಣ ಮಂತ್ರಿಗಳು ಪ್ರತಿನಿಧಿಗಳಾಗಿರುವ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯಲ್ಲಿ ಚರ್ಚಿಸಬೇಕಾಗಿತ್ತು. ಇದರ ಏಕಪಕ್ಷೀಯ ಪ್ರಕಟಣೆ ರಾಜ್ಯಗಳ ಅಧಿಕಾರ ಕ್ಷೇತ್ರದ ಅತಿಕ್ರಮಣವಾಗುತ್ತದೆ.

ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಿ ಕಪಿಲ್ ಸಿಬಾಲ್ ತನ್ನ ಇಲಾಖೆಯ 100ದಿನಗಳ ಯೋಜನೆಯನ್ನು ಮುಂದಿಡುತ್ತ ಹಲವು ಪ್ರಮುಖ ಕ್ರಮಗಳನ್ನು ಪ್ರಕಟಿಸಿದ್ದಾರೆ. ಹತ್ತನೇ ತರಗತಿಯ ಪರೀಕ್ಷೆಯನ್ನು ರದ್ದುಗೊಳಿಸುವುದು ಅಥವಾ ಅದನ್ನು ಐಚ್ಛಿಕಗೊಳಿಸುವುದು ಮತ್ತು ವಿಶ್ವವಿದ್ಯಾಲಯಗಳಿಗೆ ಪ್ರವೇಶ ಬಯಸುವವರಿಗೆ ಏಕೈಕ ಮಂಡಳಿಯ ಮೂಲಕ ಅಖಿಲ ಭಾರತ ಹನ್ನೆರಡನೇ ತರಗತಿ ಪರೀಕ್ಷೆ ನಡೆಸುವುದು ಇಂತಹ ಎರಡು ಕ್ರಮಗಳು. ಯಶಪಾಲ ಸಮಿತಿಯು ಸಲ್ಲಿಸಿದ "ಉನ್ನತ ಶಿಕ್ಷಣದ ನವೀಕರಣ ಮತ್ತು ಪುನರುಜ್ಜೀವನ" ಎಂಬ ವರದಿಯಲ್ಲಿನ ಶಿಫಾರಸುಗಳ ಅನುಷ್ಠಾನದ ಕುರಿತು ಕೂಡಾ ಮಂತ್ರಿಗಳು ಕೆಲವು ಟಿಪ್ಪಣಿಗಳನ್ನು ಮಾಡಿದ್ದಾರೆ.

ಶಾಲಾ ಶಿಕ್ಷಣ ಪ್ರಥಮತಃ ರಾಜ್ಯಗಳಿಗೆ ಸೇರಿದ್ದು. ತುರ್ತು ಪರಿಸ್ಥಿತಿಯ ಸಮಯದಲ್ಲಿ ಶಿಕ್ಷಣವನ್ನು ಸಮವರ್ತಿ ಪಟ್ಟಿಯಲ್ಲಿ ಸೇರಿಸಲಾಯಿತು. ಅಂದಿನಿಂದ ಹಲವು ಕ್ರಮಗಳನ್ನು ಕೇಂದ್ರೀಕರಿಸಲಾಗಿದೆ. ಕೇಂದ್ರ ಸರಕಾರ ಉನ್ನತ ಶಿಕ್ಷಣ ವ್ಯವಸ್ಥೆಯನ್ನಂತೂ ಕೇಂದ್ರೀಕರಿಸಿದೆ, ರಾಜ್ಯಗಳಿಗೆ ಇದರಲ್ಲಿ ಪಾತ್ರ ಬಹಳ ಕಡಿಮೆ. ಆದರೆ ಶಾಲಾ ಶಿಕ್ಷಣದಲ್ಲಾದರೂ ತನ್ನ ರಾಜ್ಯದ ಸಾಮಾಜಿಕ, ಸಾಂಸ್ಕೃತಿಕ , ಭೌಗೋಳಿಕ ಮತ್ತು ಇತರ ಅಂಶಗಳ ಆಧಾರದ ಮೇಲೆ ಪಠ್ಯಗಳನ್ನು ರೂಪಿಸುವುದು ರಾಜ್ಯದ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತದೆ. ರಾಜ್ಯ ಪರೀಕ್ಷಾ ಮಂಡಳಿಗಳ ಮೂಲಕ ಶಾಲಾ ಪರೀಕ್ಷೆಗಳನ್ನು ನಡೆಸಲಾಗುತ್ತದೆ.

ಏಕಪಕ್ಷೀಯ ಪ್ರಕಟಣೆ

ಕೇಂದ್ರ ಮಂತ್ರಿಗಳ ಏಕಪಕ್ಷೀಯ ಪ್ರಕಟಣೆಯಲ್ಲಿನ ಪ್ರಸ್ತಾವ ರಾಜ್ಯಗಳ ಅಧಿಕಾರಗಳ ಉಲ್ಲಂಘನೆಯಾಗುತ್ತದೆ ಮತ್ತು ಶಾಲಾಶಿಕ್ಷಣದ ವಲಯದಲ್ಲಿ ಅವುಗಳ ಅಧಿಕಾರದಲ್ಲಿ ಅತಿಕ್ರಮಣ ಮಾಡಿದಂತಾಗುತ್ತದೆ. ಒಂದೇ ಮಂಡಳಿಯ ಮೂಲಕ ಒಂದು ಅಖಿಲ ಭಾರತ ಹನ್ನೆರಡನೇ ತರಗತಿಯ ಪರೀಕ್ಷೆಯ ಪ್ರಸ್ತಾವ ಕೂಡಾ ನಮ್ಮ ದೇಶದಲ್ಲಿನ ವಿವಿಧ ರಾಜ್ಯಗಳಲ್ಲಿ ಕಂಡು ಬರುವ ವೈವಿಧ್ಯತೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಮತ್ತು ತಂತಮ್ಮ ರಾಜ್ಯಗಳಲ್ಲಿನ ಸಂಸ್ಕೃತಿ ಮತ್ತು ಪರಿಸ್ಥಿತಿಗಳಿಗೆ ಅನುಗುಣವಾಗಿ ಶಾಲಾ ಮಟ್ಟದಲ್ಲಿ ಶೈಕ್ಷಣಿಕ ಆಡಳಿತ ನಡೆಸುವ ರಾಜ್ಯ ಸರಕಾರಗಳ ಸ್ವಾಯತ್ತತೆಯ ಅತಿಕ್ರಮಣವೂ ಆಗುತ್ತದೆ. ಈ ಕ್ರಮಗಳನ್ನು ಜಾರಿಗೆ ತಂದರೆ ಶಾಲಾ ಮಟ್ಟದಲ್ಲಿ ರಾಜ್ಯಗಳನ್ನು ಮತ್ತಷ್ಟು ಅಂಚಿಗೆ ತಳ್ಳಿದಂತಾಗುತ್ತದೆ.

ಸರಕಾರದ ಅಂಕಿ-ಅಂಶಗಳ ಪ್ರಕಾರ(2005) ಒಂದನೇ ತರಗತಿ ಸೇರಿದ ವಿದ್ಯಾರ್ಥಿಗಳಲ್ಲಿ ಕೇವಲ 35ಶೇಕಡಾ (ಗಂಡು ಮಕ್ಕಳಲ್ಲಿ 35ಶೇ. ಮತ್ತು ಹೆಣ್ಣು ಮಕ್ಕಳಲ್ಲಿ 27ಶೇ.) ಮಾತ್ರ ಹತ್ತನೇ ತರಗತಿ ತಲುಪುತ್ತಾರೆ. ಇವರಲ್ಲಿಯೂ ಸುಮಾರು ಅರ್ಧದಷ್ಟು, ಅಂದರೆ 16.6ಶೇ.(18.6ಶೇ. ಗಂಡು ಮಕ್ಕಳು ಮತ್ತು 16.6ಶೇ. ಹೆಣ್ಣು ಮಕ್ಕಳು) ಹತ್ತನೇ ತರಗತಿಯ ನಂತರ ಅಥವಾ ಹನ್ನೆರಡನೇ ತರಗತಿ ತಲುಪುವ ಮೊದಲೇ ಶಾಲೆ ಬಿಡುತ್ತಾರೆ. ಅವರಲ್ಲಿ ಹಲವರು ತಮ್ಮ ಹತ್ತನೇ ತರಗತಿ ಅಂಕಗಳ ಆಧಾರದಲ್ಲಿ ಪಾಲಿಟೆಕ್ನಿಕ್‌ಗಳು ಇತ್ಯಾದಿಗಳಲ್ಲಿ ನಡೆಸುವ ವೃತ್ತಿ ಶಿಕ್ಷಣದ ಕೋರ್ಸುಗಳಲ್ಲಿ ಸೇರಿಕೊಳ್ಳುತ್ತಾರೆ. ನಮ್ಮ ದೇಶದ 17-23 ವಯೋಗುಂಪಿನಲ್ಲಿ ಕೇವಲ 8-9ಶೇ. ಯುವಜನರು ಮಾತ್ರ ಕಾಲೇಜು/ ವಿಶ್ವ ವಿದ್ಯಾಲಯ ಮಟ್ಟದಲ್ಲಿ ಉನ್ನತ ಶಿಕ್ಷಣವನ್ನು ತಲುಪಲು ಸಾಧ್ಯವಾಗುತ್ತದೆ.

ಹೀಗಿರುವಾಗ ಹತ್ತನೇ ತರಗತಿ ಪರೀಕ್ಷೆಯನ್ನು ರದ್ದು ಮಾಡಬೇಕೇ, ಅಥವಾ ಐಚ್ಛಿಕಗೊಳಿಸಬೇಕೇ ಎಂಬುದನ್ನು ಅಥವಾ ಇನ್ನಾವುದೇ ಪ್ರಸ್ತಾವವನ್ನು ರಾಜ್ಯ ಸರಕಾರಗಳ ಮುಂದಿಡಬೇಕಾಗಿತ್ತು ಮತ್ತು



ಎಲ್ಲಾ ರಾಜ್ಯಗಳ ಶಿಕ್ಷಣ ಮಂತ್ರಿಗಳು ಪ್ರತಿನಿಧಿಗಳಾಗಿರುವ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯಲ್ಲಿ ಚರ್ಚಿಸಬೇಕಾಗಿತ್ತು.

ಶಿಕ್ಷಣದ ಕಂಪನೀಕರಣ

ಇದಲ್ಲದೆ ಮಂತ್ರಿಗಳು ಶಾಲಾಶಿಕ್ಷಣದಲ್ಲಿ ಕಂಪನಿಗಳು ಹಣ ಹೂಡುವ ಬಗ್ಗೆ, ಜಂಟಿ ಪ್ರಯತ್ನಗಳ ಬಗ್ಗೆ, ಸಾರ್ವಜನಿಕ-ಖಾಸಗಿ ಪಾಲುದಾರಿಕೆಯ ಬಗ್ಗೆಯೆಲ್ಲಾ ಮಾತಾಡಿದ್ದಾರೆ. ಶಿಕ್ಷಣ ವಲಯದಲ್ಲಿ ವಿದೇಶಿ ನೇರ ಹೂಡಿಕೆ(ಎಫ್‌ಡಿಐ)ಗೆ ಅವಕಾಶ ನೀಡಬೇಕೆಂಬ ಆತುರವನ್ನು ಕೂಡ ಮಂತ್ರಿಗಳು ವ್ಯಕ್ತಪಡಿಸಿದ್ದಾರೆ. "ಭಾರತದೊಳಕ್ಕೆ ಎಫ್‌ಡಿಐ ಬರಬೇಕು. ಶಿಕ್ಷಣ ವಲಯದಲ್ಲಿ ಅದರ ಪ್ರವೇಶವನ್ನು ಸೀಮಿತಗೊಳಿಸಲೂ ಬಾರದು, ವಿಪರೀತ ನಿಯಂತ್ರಣಗಳನ್ನೂ ಹಾಕಬಾರದು" ಎಂದು ಅವರು ಹೇಳಿದ್ದಾರೆ. ಶಿಕ್ಷಣದ ಕಂಪನೀಕರಣ ಮತ್ತು ಜತೆಗೆ ವಿದೇಶಿ ಶಿಕ್ಷಣ ಸಂಸ್ಥೆಗಳ ಪ್ರವೇಶ ಮಂತ್ರಿಗಳ ಬಯಕೆಯಿದ್ದಂತೆ ಕಾಣುತ್ತದೆ.

ಭಾರತದಲ್ಲಿ ಎಲ್ಲಾ ವಿದ್ಯಾರ್ಥಿಗಳಲ್ಲಿ ಸುಮಾರು ಮೂರನೆ ಒಂದರಷ್ಟು (ಒಂದು ಕೋಟಿಗೂ ಹೆಚ್ಚು) ಖಾಸಗೀ ಸಂಸ್ಥೆಗಳಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಇವುಗಳಲ್ಲಿ ಹಲವು ಖಾಸಗಿ ಸಂಸ್ಥೆಗಳು ವಿದ್ಯಾರ್ಥಿಗಳ ಶೋಷಣೆಯಲ್ಲಿ ತೊಡಗಿವೆ. ಶುಲ್ಕಗಳು, ಪಠ್ಯಕ್ರಮ, ಮೂಲರಚನೆ, ಶೈಕ್ಷಣಿಕ ಮಟ್ಟ, ಪರೀಕ್ಷೆಗಳು ಇತ್ಯಾದಿಗಳನ್ನು ಕುರಿತಂತೆ ಇವುಗಳ ಮೇಲೆ ನಿಯಂತ್ರಣವಿಡಲು ಒಂದು ಕೇಂದ್ರೀಯ ಶಾಸನ ತರಬೇಕು ಎಂದು ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ಆಗ್ರಹಿಸುತ್ತಾ ಬಂದಿವೆ. ಈ ಕುರಿತ ಒಂದು ಕರಡು 2005ರಲ್ಲಿ ಪ್ರಕಟವಾಯಿತು. ಅದರ ಉದ್ದೇಶದಲ್ಲಿ ಹಲವು ದೌರ್ಬಲ್ಯಗಳಿದ್ದರೂ ಯುಪಿಎ ಅದನ್ನು ಕೈಗೆತ್ತಿಕೊಳ್ಳಬೇಕೆಂದು ಎಡಪಕ್ಷಗಳು ಮತ್ತೆ-ಮತ್ತೆ ಆಗ್ರಹಿಸಿದವು. ಆದರೆ ಯುಪಿಎ ಅದನ್ನು ಕೈಗೆತ್ತಿಕೊಳ್ಳಲು ನಿರಾಕರಿಸಿತು. ಈಗಲಾದರೂ ಅದನ್ನು ಕೈಗೆತ್ತಿಕೊಳ್ಳಬೇಕು.

ಎಫ್‌ಡಿಐ ಹಾನಿಕಾರಕ

ಶಿಕ್ಷಣದಲ್ಲಿ ಎಫ್‌ಡಿಐ ಕೇವಲ ಲಾಭ ಮತ್ತು ಮಾರುಕಟ್ಟೆ ನಿಯಮಗಳನ್ನು ಅವಲಂಬಿಸಿರುತ್ತದೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ವಿದೇಶಿ ಶಿಕ್ಷಣ ಸಂಸ್ಥೆಗಳು ಮಾರುಕಟ್ಟೆಗೆ ಯಾವುದು ಬೇಕೋ ಅಂತಹ ಕೋರ್ಸುಗಳನ್ನು ರೂಪಿಸುತ್ತವೆ, ಜಾಹೀರಾತುಗಳ ಮೂಲಕ ತಮ್ಮ ಕೋರ್ಸುಗಳ ಬಗ್ಗೆ ತಪ್ಪು ಭಾವನೆಗಳನ್ನು ಸೃಷ್ಟಿಸುತ್ತವೆ ಮತ್ತು ತಕ್ಷಣವೇ ಉದ್ಯೋಗಾವಕಾಶ ಇರುವ ಕೋರ್ಸುಗಳಿಗೆ ವಿಪರೀತ ಶುಲ್ಕಗಳನ್ನು ವಸೂಲು ಮಾಡುತ್ತವೆ. ವಿದೇಶಿ ಶಿಕ್ಷಣ ಸಂಸ್ಥೆಗಳು ತಮ್ಮ ಹಣಬಲದಿಂದ ಸ್ಥಳೀಯ ಶಿಕ್ಷಣ ಸಂಸ್ಥೆಗಳ ಅತ್ಯುತ್ತಮ ಶಿಕ್ಷಕರನ್ನು ಮತ್ತು ಶ್ರೀಮಂತ ವಿದ್ಯಾರ್ಥಿಗಳನ್ನು ಆಕರ್ಷಿಸಿ, ಆ ಸಂಸ್ಥೆಗಳ ಮೇಲೆ ಪ್ರತಿಕೂಲ ಪರಿಣಾಮವಾಗುತ್ತದೆ.

ಶಿಕ್ಷಣದಲ್ಲಿ ಎಫ್‌ಡಿಐ ನಮ್ಮ ವಿಶ್ವವಿದ್ಯಾಲಯ ಶಿಕ್ಷಣ ವ್ಯವಸ್ಥೆಯಲ್ಲಿ ದೇಶೀ ಮತ್ತು ನಿರ್ಣಾಯಕ ಸಂಶೋಧನೆ ಬೆಳೆಯುದಂತೆ ಅಡ್ಡಿಯುಂಟುಮಾಡುತ್ತದೆ, ವಾಣಿಜ್ಯೀಕರಣದ ಪ್ರವೃತ್ತಿಯನ್ನು ಬಲಗೊಳಿಸುತ್ತದೆ ಮತ್ತು ನಮ್ಮ ಶಿಕ್ಷಣ ರಂಗದಲ್ಲಿ ನವ-ಉದಾರವಾದಿ ವಿಚಾರಗಳ ಕುಮ್ಮಕ್ಕು ಬಲಗೊಳ್ಳುತ್ತದೆ. ವಿದೇಶಿ ಶಿಕ್ಷಣ ಸಂಸ್ಥೆಗಳಿಗೆ ಅವರ ಲಾಭಗಳ ಬಗ್ಗೆ ಕಾಳಜಿಯಿರುತ್ತದೆಯೇ ಹೊರತು, ನಮ್ಮ ಸಂಸ್ಕೃತಿ ಮತ್ತು ಸಮಾಜದ ಬಗ್ಗೆಯಲ್ಲ. ಯುಪಿಎ ಸರಕಾರ ಶಿಕ್ಷಣ ಕ್ಷೇತ್ರವನ್ನು ಎಫ್‌ಡಿಐಗೆ ತೆರೆಯುವ ಶಾಸನ ತರಲು ಮುಂದಾಗಬಾರದು.

ಇನ್ನಷ್ಟು ಚರ್ಚೆ ಅಗತ್ಯ

ಯಶಪಾಲ ಸಮಿತಿ ವಿಶ್ವವಿದ್ಯಾಲಯಗಳಿಗೆ ಪ್ರವೇಶಕ್ಕೆ ಜಿಆರ್‌ಇ (ಪದವಿ ದಾಖಲೆ ಪರೀಕ್ಷೆ) ಮಾದರಿಯ ಅಖಿಲ ಭಾರತ ಮಟ್ಟದ ಪರೀಕ್ಷೆ ಇರಬೇಕು ಎಂದು ಶಿಫಾರಸು ಮಾಡಿದೆ. ಇದು ಕೂಡಾ ವಿದ್ಯಾರ್ಥಿಗಳು ಈಗ ಎದುರಿಸಬೇಕಾಗಿರುವ 'ಭೀತಿ'ಗೆ ಪರಿಹಾರವಾಗಲಾರದು. ಇಲ್ಲಿರುವ ಒಂದೇ ವ್ಯತ್ಯಾಸವೆಂದರೆ ಮಂಡಳಿ(ಬೋರ್ಡ್) ಪರೀಕ್ಷೆಗಳು ವರ್ಷಕ್ಕೊಮ್ಮೆಯೇ ನಡೆಯುತ್ತವೆ, ಜಿಆರ್‌ಇಯಂತವುಗಳು ಒಂದಕ್ಕಿಂತ ಹೆಚ್ಚು ಬಾರಿ ನಡೆಯುತ್ತವೆ. ಈಗ ಅಗತ್ಯವಾಗಿ ಮಾಡಬೇಕಾಗಿರುವುದು ಪರೀಕ್ಷೆಗಳ ವಿಧಾನದ ಬದಲಾವಣೆ ಮತ್ತು ಉನ್ನತ ಮಟ್ಟದಲ್ಲಿ ಸಾಕಷ್ಟು ಸೌಲಭ್ಯಗಳು ಮತ್ತು ಮೂಲರಚನೆಗಳೊಂದಿಗೆ ಸೀಟುಗಳ ಸಂಖ್ಯೆಯ ಹೆಚ್ಚಳ.

ವಿಶ್ವವಿದ್ಯಾಲಯ ಅನುದಾನ ಆಯೋಗ(ಯುಜಿಸಿ)ದಂತಹ ಸಂಸ್ಥೆಗಳ ಬದಲು ಒಂದು ರಾಷ್ಟ್ರೀಯ ಉನ್ನತ ಶಿಕ್ಷಣ ಮತ್ತು ಸಂಶೋಧನೆ ಆಯೋಗವನ್ನು ರಚಿಸಬೇಕು ಎಂಬಿತ್ಯಾದಿ ಯಶಪಾಲ್ ಸಮಿತಿಯ ಶಿಫಾರಸುಗಳ ಬಗ್ಗೆಯೂ ಇನ್ನಷ್ಟು ಚರ್ಚೆಗಳು ನಡೆಯಬೇಕಾಗಿದೆ. ಎಲ್ಲಕ್ಕೂ ಮಿಗಿಲಾಗಿ, ಕೇಂದ್ರ ಸರಕಾರ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ರಾಜ್ಯಗಳ ಹಕ್ಕುಗಳು ಮತ್ತು ವಲಯಗಳಲ್ಲಿ ಅತಿಕ್ರಮಣ ಮಾಡುವ ಯಾವುದೇ ಕ್ರಮಗಳನ್ನು ಕೈಗೊಳ್ಳಬಾರದು.

ತಪ್ಪು - ಒಪ್ಪು

- ಜುಲೈ 05, 2009 ರ ಪತ್ರಿಕೆಯ ಪುಟ 10 ರ 'ಚುನಾವಣಾ ಹಿನ್ನಡೆ, ಸಿಪಿಐ(ಎಂ) ಗಂಭೀರ ಸ್ವಯಂ ವಿಮರ್ಶೆ' ಲೇಖನದಲ್ಲಿ ಸಿಪಿಐ(ಎಂ) ಕೇಂದ್ರಸಮಿತಿ ಸಭೆ ನಡೆದದ್ದು ಡಿಸೆಂಬರ್ 20 ಮತ್ತು 21, 2009 ಎಂದು ತಪ್ಪಾಗಿ ಮುದ್ರಿತವಾಗಿದೆ. ಸರಿಯಾದ ದಿನಾಂಕ ಜೂನ್ 20 ಮತ್ತು 21, 2009
- ಜೂನ್ 14 ರ ಪತ್ರಿಕೆಯ ಪುಟ 12 ರಲ್ಲಿ ಪ್ರಕಟವಾಗಿರುವ 'ಚಂಡಮಾರುತ ಹಾನಿ' ಎಂಬ ಬರಹದ ಬರಹಗಾರರು ಎಸ್.ವೈ. ಗುರುಶಾಂತ್. ಹೆಸರು ತಪ್ಪಿಹೋಗಿದೆ.

ಆಗಿರುವ ತಪ್ಪು, ದೋಷಗಳಿಗೆ ವಿಷಾದಿಸುತ್ತೇವೆ.

ಎರಡನೇ ಯುಪಿಎ ಸರ್ಕಾರದ ಮೊದಲ ಬಜೆಟ್

ಸಹಜವಾಗಿಯೇ ಈಗ ಎಲ್ಲೆಡೆ ಮನಮೋಹನಸಿಂಗ್ ನೇತೃತ್ವದ ಎರಡನೆ ಯುಪಿಎ ಸರಕಾರದ ಮೊದಲ ಬಜೆಟ್ ಹೇಗಿರಬಹುದು ಎಂಬ ಕುತೂಹಲ. ಅದು ಹೇಗಿರಬೇಕು ಎಂಬ ಆಳುವ ವರ್ಗಗಳ ನಿರೀಕ್ಷೆಗಳಂತೂ ಕಳೆದ ಒಂದೂವರೆ ತಿಂಗಳಿಂದ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಲೇ ಇವೆ. ದೇಶದ ದುಡಿಯುವ ಜನಗಳಲ್ಲೂ ಈ ಬಗ್ಗೆ ತಮ್ಮದೇ ಆದ ನಿರೀಕ್ಷೆಗಳಿವೆ. ಆದರೆ ಅವು ಮಾಧ್ಯಮಗಳಲ್ಲಿ ಬಿಂಬಿತವಾಗುತ್ತಿಲ್ಲ ಎಂಬುದು ಬೇರೆ ಮಾತು.

'ಆಮ್ ಆದ್ಮಿ'ಯ ಹೆಸರಲ್ಲಿ ಕೋಟ್ಯಾಧೀಶ್ವರರ ನಿರೀಕ್ಷೆಗಳು

ಒಂದೂವರೆ ತಿಂಗಳ ಹಿಂದೆ 15 ನೇ ಲೋಕಸಭಾ ಚುನಾವಣೆಗಳು ಪ್ರಕಟವಾದಾಗ ದೊಡ್ಡ ಉದ್ದಿಮೆಗಳ ಮಾಲಕರು, ಅವರ ಹತೋಟಿಯಲ್ಲಿರುವ ಮಾಧ್ಯಮಗಳು, ಅಂದರೆ ದೊಡ್ಡ-ದೊಡ್ಡ ಪತ್ರಿಕೆಗಳು ಹಾಗೂ ಸುದ್ದಿ ವಾಹಿನಿಗಳು ಆನಂದ ಪರವಶಗೊಂಡಿದ್ದವು. ಇನ್ನು ಮುಂದೆ ಎಡಪಕ್ಷಗಳ ಕಡಿವಾಣ ಇಲ್ಲ, ಸರಕಾರ ಈ ದೇಶದ ಜನಗಳಿಗೆ ಏನು ಮಾಡಬೇಕೆಂದಿದೆ ಎಂಬುದನ್ನು ಪಟ್ಟಿ ಮಾಡುವ ಸಾಮಾನ್ಯ ಕನಿಷ್ಟ ಕಾರ್ಯಕ್ರಮ(ಸಿಎಂಪಿ)ವೂ ಇಲ್ಲ, ಫಲವಾಗಿ ಮಾಲಕರ ಆಶಯಗಳ ಈಡೇರಿಕೆಗೆ ಈಗೇನೂ ಅಡ್ಡಿ ಆತಂಕಗಳಿಲ್ಲ ಎಂಬ ಕಾರಣಕ್ಕೇ ಈ ಸಂತೋಷ.

ಈ ಸರಕಾರ ತಕ್ಷಣವೇ ಏನೇನು ಮಾಡಬೇಕು, ಏನೇನು ಮಾಡಬಾರದು ಎಂಬ ಸಲಹೆಗಳು ಮಾತ್ರವಲ್ಲ ಮುಂದಿನ ಹಣಕಾಸು ಮಂತ್ರಿ ಯಾರಾಗಬೇಕು ಎಂಬ ಬಗ್ಗೆಯೂ ಸೂಚನೆಗಳನ್ನು ಕೊಟ್ಟವು. 1991ರಲ್ಲಿ ಶ್ರೀಮಂತರಿಗೆ ಬಹಳ ಮುದಕೊಟ್ಟಿರುವ ಉದಾರೀಕರಣ ನೀತಿಗಳು ಆರಂಭವಾದಾಗಿನಿಂದಲೂ ಮನಮೋಹನ ಸಿಂಗ್‌ರವರ ಬಲಗೈ ಬಂಟನಂತಿರುವ ಮೊಂಟೆಕ್ ಸಿಂಗ್ ಆಹ್ಲುವಾಲಿಯಾರವರೇ ಅದಕ್ಕೆ ಏಕಮಾತ್ರ ತಕ್ಕ ವ್ಯಕ್ತಿ ಎಂದು ಸಾರಿದವು.

ಆ ಕೆಲಸಗಳಾದರೂ ಯಾವುವು?-

- ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಹತೋಟಿಯಲ್ಲಿಡುವ ವ್ಯವಸ್ಥೆಯನ್ನು ಕಳಚಿ ಹಾಕಬೇಕು,
- ಸಾರ್ವಜನಿಕ ವಲಯದ ಘಟಕಗಳ ಶೇರುಗಳನ್ನು ಮಾರಾಟ ಮಾಡಬೇಕು,
- ವಿದೇಶಿ ನೇರ ಹೂಡಿಕೆಗಳ ಮಿತಿಗಳನ್ನು ಏರಿಸಬೇಕು,
- 'ಶ್ರಮ ಮಾರುಕಟ್ಟೆಯ ಸುಧಾರಣೆ'(ಅಂದರೆ ಮಾಲಕರ ಪರವಾಗಿ ಕಾರ್ಮಿಕ ಕಾನೂನುಗಳ ಬದಲಾವಣೆ).

(ಇಕಾನಮಿಕ್ ಟೈಮ್ಸ್ ಸಂಪಾದಕೀಯ, ಮೇ 18).



'ಬೇಜವಾಬ್ದಾರಿ ಭರವಸೆಗಳು'!

ಒಂದು ಇಂಗ್ಲೀಷ್ ಪತ್ರಿಕೆಯಂತೂ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯನ್ನು ವಿಸ್ತರಿಸುವ ಮತ್ತು "25 ಕೆ.ಜಿ. ಅಕ್ಕಿ ಅಥವಾ ಗೋಧಿಯನ್ನು ಕೆ.ಜಿ.ಗೆ 3 ರೂ.ನಂತೆ, ಅಂದರೆ ಮಾರುಕಟ್ಟೆ ಬೆಲೆಗಳ ಆರನೆ ಒಂದು ಭಾಗ ಬೆಲೆಯಲ್ಲಿ ಒದಗಿಸುವ" ಕಾಂಗ್ರೆಸ್ ಪ್ರಣಾಳಿಕೆಯ ಭರವಸೆಗಳು 'ಬೇಜವಾಬ್ದಾರಿ ಭರವಸೆಗಳು' ಎಂದು ವರ್ಣಿಸಿತು. 'ಸುಧಾರಣೆ'ಗಳ ಖ್ಯಾತಿಯ ಮನಮೋಹನ್ ಸಿಂಗ್ 2009ರ ಜನಾದೇಶವನ್ನು ತನ್ನ ಸರಕಾರ 2004ರಿಂದ ಮಾಡಿದ್ದಕ್ಕೆ ನೀಡಿದ ಅನುಮೋದನೆ ಎಂದು ಕಾಣುವ ಬದಲು, 2004ರಿಂದ ಮಾಡಲಾಗದ್ದನ್ನು ಮಾಡಲು ದೊರೆತ ಎರಡನೇ ಅವಕಾಶವೆಂದು ಬಗೆಯಬೇಕು ಎಂದು ಸಲಹೆ ನೀಡಿತು. "ಇದೀಗ ಅವರಂತಹ ವ್ಯಕ್ತಿಯಿಂದ ನಿರೀಕ್ಷಿಸುವ ಕೆಲಸಗಳನ್ನು ಮಾಡಬೇಕಾಗಿರುವ ಸಮಯ" ಎಂದಿತು.

ಆಹ್ಲುವಾಲಿಯ ಹಣಕಾಸು ಮಂತ್ರಿಯಾಗಲಿಲ್ಲ. ಅತ್ತ ರಾಷ್ಟ್ರಪತಿಗಳ ಭಾಷಣ ಮೇಲೆ ಹೇಳಿದ ಸಂಪಾದಕೀಯ 'ಬೇಜವಾಬ್ದಾರಿಯುತ' ಎಂದು ವರ್ಣಿಸಿದ ಭರವಸೆಗಳನ್ನು ಈಡೇರಿಸಬೇಕು ಎಂದು ಪುನರುಚ್ಚರಿಸಿತು. 2009ರ ಜನಾದೇಶ ಒಬ್ಬ 'ಉದಾರ' 'ಸುಧಾರಣಾವಾದಿ' ಪ್ರಧಾನಮಂತ್ರಿಯ ಸರಕಾರ 'ಸುಧಾರಣಾ-ವಿರೋಧಿ' ಎಡಪಕ್ಷಗಳ ಒತ್ತಡದಿಂದ ತಂದ ಕ್ರಮಗಳಿಗೆ ನೀಡಿದ 'ಅನುಮೋದನೆ ಎಂದು ಹೆಚ್ಚೆಚ್ಚು 'ವಿಶ್ಲೇಷಕ'ರ ಅರಿವಿಗೆ ಬರಲಾರಂಭಿಸಿತು. ಬಹುಶಃ ಇದೇ ಹಿನ್ನೆಲೆಯಲ್ಲಿ ಪ್ರಧಾನಿಗಳೂ ಬಜೆಟ್ ತಯಾರಿಸುವಾಗ ರಾಷ್ಟ್ರಪತಿಗಳ ಭಾಷಣವನ್ನು ಗಮನದಲ್ಲಿ ಇಟ್ಟುಕೊಳ್ಳಲಾಗುತ್ತದೆ ಎಂದಿದ್ದಾರೆ. ಆದರೂ ಎರಡನೇ ಯುಪಿಎ ಸರಕಾರದ ಮೊದಲ ಬಜೆಟಿನಿಂದ ಆಳುವ ವರ್ಗಗಳ, ಅದರಲ್ಲೂ ಕಾರ್ಪೊರೇಟ್ ಭಾರತದ ಅಂದರೆ ದೊಡ್ಡ-ದೊಡ್ಡ ಉದ್ದಿಮೆಗಳ ಮಾಲಕರ ನಿರೀಕ್ಷೆಗಳೇನೂ ಬದಲಾಗಿಲ್ಲ. ಅವು ಹೊಸ ರೂಪ ಪಡೆದಿವೆ.

ಖೋತಾ ತಗ್ಗಿಸುವ 'ಸಲಹೆಗಳು'


'ಆಮ್ ಆದ್ಮಿ'(ಜನಸಾಮಾನ್ಯ)ಯ ಹೆಸರು ಹೇಳಿ ಅಧಿಕಾರಕ್ಕೆ ಬಂದ ಸರಕಾರ ಜನರಿಗೆಂದು 'ಏನಾದರೂ' ಮಾಡಲೇಬೇಕಲ್ಲ ಎಂದು ಈ ಕಾರ್ಪೊರೇಟ್ ಮಂದಿಗೆ ಗೊತ್ತಿದೆ. ಅವರ ಮಟ್ಟಿಗೆ ಇದು "ಪ್ರಜಾಪ್ರಭುತ್ವದ ಒಂದು ಅನಿವಾರ್ಯ ದೌರ್ಬಲ್ಯ"! ಆದ್ದರಿಂದ ಬಜೆಟಿನಲ್ಲಿ ಸಾಮಾಜಿಕ ವಲಯದ ಇಂತಹ 'ಬೇಜವಾಬ್ದಾರಿ' ಖರ್ಚುಗಳ ಬಗ್ಗೆ ಈಗ ಅವರ ತಕರಾರು ಏನಿಲ್ಲ. ಮೂಲರಚನೆಗಳಿಗೂ ಹಣ ಒದಗಿಸಲಿ, ಒಳ್ಳೆಯದೇ. ಆದರೆ ಇವೆಲ್ಲದರಿಂದ ಬಜೆಟ್ ಖೋತಾ ಹೆಚ್ಚುತ್ತದಲ್ಲ ಎಂದು ಅವರಿಗೆ ಆತಂಕ ಅಷ್ಟೆ! 'ಹಣಕಾಸು ಶಿಸ್ತಿ'ನ ಹೆಸರಿನಲ್ಲಿ ಇವರೇ ಬಜೆಟ್ ಖೋತಾ ದೇಶದ ಒಟ್ಟು ಉತ್ಪನ್ನ(ಜಿಡಿಪಿ)ದ 5ಶೇ. ಮೀರಬಾರದು ಎಂದು ಕಾನೂನು ಪಾಸು ಮಾಡಿಸಿದ್ದಾರಲ್ಲ! ಅದಕ್ಕೇನು ಮಾಡುವುದು? ಜಾಗತಿಕ ಆರ್ಥಿಕ ಬಿಕ್ಕಟ್ಟನ್ನು ಎದುರಿಸಲು ಇದುವರೆಗೆ ಕಳೆದ ತಾತ್ಕಾಲಿಕ ಬಜೆಟ್ ವರೆಗೆ ಕೈಗೊಂಡ ಕ್ರಮಗಳಿಂದಾಗಿ ಹಣಕಾಸು ಕೊರತೆ ಈಗಾಗಲೇ 5.5 ಶೇ. ದಾಟಿದೆ. ಆದ್ದರಿಂದ ಇದಕ್ಕೆ ಅನುಗುಣವಾಗಿ ಸರಕಾರದ ಆದಾಯ ಹೆಚ್ಚುವಂತೆ ಮಾಡಬೇಕು. ಇದನ್ನು ಹೇಗೆ ಮಾಡಬೇಕು, ಹೇಗೆ ಮಾಡಬಾರದು ಎಂಬ ಬಗ್ಗೆಯೂ ಈ ಕಾರ್ಪೊರೇಟ್ ಮಂದಿಯ ಬಳಿ ಪಕ್ಕಾ ಸಲಹೆಗಳಿವೆ. ಮುಖ್ಯವಾಗಿ ತಮ್ಮ ಗಳಿಕೆಗಳಿಗೆ, ತಾವೇ ಸ್ವತಃ ಸರಕಾರದಿಂದ ನಿರೀಕ್ಷಿಸುವ ಪ್ರಯೋಜನಗಳಿಗೆ ಯಾವುದೇ ಅಡ್ಡಿ ಬರದಂತೆ ನೋಡಿಕೊಳ್ಳುವ ಸಲಹೆಗಳಿವು.

ಸರಕಾರ 18 ನವರತ್ನ ಮತ್ತು 58 ಮಿನಿರತ್ನ ಸಾರ್ವಜನಿಕ ವಲಯದ ಕಂಪನಿಗಳಲ್ಲಿ ಇರುವ ತನ್ನ ಹೂಡಿಕೆಗಳಲ್ಲಿ 20 ಶೇಕಡಾವನ್ನು ಹಿಂತೆಗೆದುಕೊಂಡರೆ ಅಂದರೆ ಖಾಸಗಿಯವರು ಅದನ್ನು ಕೊಳ್ಳಲು ಬಿಟ್ಟರೆ ಸರಕಾರಕ್ಕೆ 3 ಲಕ್ಷ ಕೋಟಿ ರೂ. ಬರುತ್ತದೆ ಎಂದು ಲೆಕ್ಕ ಹಾಕಿರುವ ದೊಡ್ಡ ಉದ್ಯಮಿಗಳ ಸಂಘಟನೆ ಅಸ್ಸೋಚಾಮ್ 2012ರೊಳಗೆ ಇದನ್ನು ಮಾಡುವ ಕಾರ್ಯಕ್ರಮ ಹಾಕಿಕೊಂಡು ಹಣಕಾಸು ಕೊರತೆಯನ್ನು ನೀಗಿಸಿಕೊಳ್ಳಿ ಎಂದು ಸಲಹೆ ಮಾಡಿದೆ. ಅತಿ ಹೆಚ್ಚು ಲಾಭಗಳಿಸುತ್ತಿರುವ 10 ಸಾರ್ವಜನಿಕ ವಲಯದ ಕಂಪನಿಗಳ ಶೇರುಗಳನ್ನು ಖಾಸಗಿಯವರಿಗೆ ಕೊಟ್ಟರೂ 37000 ಕೋಟಿ ರೂಪಾಯಿ ಬರುತ್ತದಂತೆ. ಆದರೆ ಲಾಭಗಳು ಹೆಚ್ಚುತ್ತಿರುವಾಗ ಯಾರಾದರೂ ಹೀಗೆ ಮಾಡುತ್ತಾರೆಯೇ, ಇದರಿಂದ ಪ್ರತಿವರ್ಷವೂ ಅಪಾರ ಲಾಭಾಂಶದ ರೂಪದಲ್ಲಿ ಬರುತ್ತಿರುವ ಆದಾಯ ಮುಂದೆ ಇಲ್ಲದಂತಾಗುವುದಿಲ್ಲವೇ, ಚಿನ್ನದ ಮೊಟ್ಟೆಯಿಡುವ ಕೋಳಿಯ ಕಥೆಯಾಗುವುದಿಲ್ಲವೇ ಎಂಬ ಆತಂಕ ಮಾತ್ರ ಅವರಿಗಿದ್ದಂತಿಲ್ಲ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳ ಬೆಲೆಗಳ ಹತೋಟಿಗೆ ಈಗಿರುವ ವ್ಯವಸ್ಥೆಯಿಂದ ಸರಕಾರದ ಮೇಲೆ ಭಾರೀ ಹೊರೆ ಬೀಳುತ್ತದೆಯಾದ್ದರಿಂದ ಈ ಹತೋಟಿಗಳನ್ನು ತೆಗೆಯಬೇಕು. ಆದರೆ ಈಗ ಕಚ್ಚಾ ತೈಲಗಳ ಬೆಲೆ ಏರುತ್ತಿರುವಾಗ ಇದು ಕಷ್ಟವೆನಿಸಿದರೂ ವಾಹನಗಳ ಇಂಧನ ಬೆಲೆಗಳನ್ನು ಏರಿಸಬಹುದು! ಆದರೆ ಇದರಿಂದ ಆಗಲೇ ನಾಗಾಲೋಟ ನಡೆಸಿರುವ ಬೆಲೆಗಳು ಮತ್ತಷ್ಟು ಏರುತ್ತದಲ್ಲ ಎಂಬ ಆತಂಕ ಮಾತ್ರ ಇವರಿಗಿಲ್ಲ. ವಾಸ್ತವವಾಗಿ ಬೆಲೆಯೇರಿಕೆ ಎಂಬುದು ಇವರಿಗೆ ಸಮಸ್ಯೆಯೇ ಅಲ್ಲ.

ಈಗ ಬ್ಯಾಂಕಿಂಗ್, ವಿಮೆ ಮತ್ತು ಇತರ





ಹಣಕಾಸು ವಿಷಯಗಳಲ್ಲಿ ಉದಾರೀಕರಣ ತರಲು ರಾಜಕೀಯವಾಗಿ ಒಳ್ಳೆಯ ಸಮಯ ಎಂಬುದು ಅಸ್ಸೋಚಾಮ್ ಅಧ್ಯಕ್ಷ ಸಜ್ಜನ್ ಜಿಂದಾಲ್ ಸಲಹೆ. ಸರಕಾರ ಕಳೆದ ಲೋಕಸಭೆಯ ಅವಧಿ ಮುಗಿಯುವ ವೇಳೆಗೆ ವಿದೇಶಿ ನೇರ ಹೂಡಿಕೆಗಳ ಮಿತಿಗಳನ್ನು ಹೆಚ್ಚಿಸಲು, ವಿಮೆಯಲ್ಲಿ ಈಗಿರುವ ಮಿತಿಯನ್ನು 26ಶೇ. ದ 49ಶೇ. ಕ್ಕೆ ಹೆಚ್ಚಿಸಲು ಹಾಗೂ ಪೆನ್ಶನ್ ನಿಧಿಗಳ ಖಾಸಗೀಕರಣದ ಪ್ರಯತ್ನಗಳನ್ನು ರಭಸದಿಂದ ನಡೆಸಿ ವಿದೇಶೀ ಬಂಡವಾಳವನ್ನು ಆಕರ್ಷಿಸಬೇಕು ಎಂಬುದು ಈ ಕಾರ್ಪೊರೇಟ್ ಮಂದಿಯ ಇನ್ನೊಂದು ಸಲಹೆ.

ಆದರೆ ಹೀಗೆ ಸರಕಾರದ ಹಣಕಾಸು ಕೊರತೆ ನಿವಾರಣೆಗೆ ಸಲಹೆಗಳನ್ನು ಕೊಡಮಾಡುವ ಈ ಕಾರ್ಪೊರೇಟ್ ಮಂದಿಗೆ ತಮಗೆ ಇನ್ನಷ್ಟು ರಿಯಾಯ್ತಿಗಳನ್ನು ಕೇಳಿ ಅದರ ಆದಾಯದಲ್ಲಿ ಇನ್ನಷ್ಟು ಕೊರತೆ ತರುವ ಬಗ್ಗೆ ಮಾತ್ರ ಯಾವ ಮುಜುಗರವೂ ಇದ್ದಂತಿಲ್ಲ. ಶೇರು ಮಾರುಕಟ್ಟೆ ವ್ಯವಹಾರಗಳಲ್ಲಿನ ಲಾಭಗಳ ಮೇಲೆ ಹಾಕಿರುವ 0.125ಶೇ. ತೆರಿಗೆಯನ್ನೂ ಹಿಂತೆಗೆದುಕೊಳ್ಳಬೇಕು, ಕಂಪನಿ ತೆರಿಗೆಗಳನ್ನು ಹಗುರಗೊಳಿಸಬೇಕು ಹಾಗೂ ಅಂಚಿನ ಸೌಲಭ್ಯಗಳ ಮೇಲೆ ಹಾಕಿರುವ ತೆರಿಗೆಯನ್ನು, ರತ್ನಗಳು, ಆಭರಣಗಳು ಮತ್ತು ಜವಳಿ ರಫ್ತುಗಾರರ ಮೇಲಿನ ಇಂತಹ ತೆರಿಗೆಯನ್ನಾದರೂ ತೆಗೆಯಬೇಕು ಎಂಬುದು ಅವರ ನಿರೀಕ್ಷೆ.

ಶೇ. 300 ಕೋಟ್ಯಾಧೀಶ್ವರರನ್ನು ಹೊಂದಿರುವ 15 ನೇ ಲೋಕಸಭೆಯಲ್ಲಿ (ಇದರಲ್ಲಿ 141 ಮಂದಿ ಕಾಂಗ್ರೆಸಿನ "ಆಮ್ ಕರೋಡ್ಪತಿ"ಗಳು) ಈ ಕಾರ್ಪೊರೇಟ್ ಮಂದಿಯ ನಿರೀಕ್ಷೆಗಳು ಈಡೇರದಿರಲು ಸಾಧ್ಯವೇ? ಆದರೆ ಅದೇಕೋ ಶೇರು ಮಾರುಕಟ್ಟೆಯ ವರ್ತನೆಯನ್ನು ನೋಡಿದರೆ ಇವರಿಗೆ ಒಂದೂವರೆ ತಿಂಗಳ ಹಿಂದೆ ಇದ್ದ ಉತ್ಸಾಹ ಈಗ ಇದ್ದಂತಿಲ್ಲ ಎನ್ನುತ್ತಾರೆ ಒಬ್ಬ ವೀಕ್ಷಕರು. ಸಂಸತ್ತಿನಲ್ಲಿ ಈಗ ಎಡಪಕ್ಷಗಳ ಕಡಿವಾಣ ಇರಲಿಕ್ಕಿಲ್ಲ, ಆದರೆ ಸಂಸತ್ತಿನ ಹೊರಗೆ ಎಡಪಕ್ಷಗಳ ನೇತೃತ್ವದ ಸಾಮೂಹಿಕ ಸಂಘಟನೆಗಳ, ಜನಾಂದೋಲನಗಳ 'ಭಯ'ವಂತೂ ಇದ್ದೇ ಇದೆಯಲ್ಲ ಎನ್ನುತ್ತಾರೆ ಅವರು. ○

(ಈ ಸಂಚಿಕೆ ಮುದ್ರಣಕ್ಕೆ ಹೋಗುತ್ತಿರುವ ವೇಳೆಗೆ ಯುಪಿಎ ಸರಕಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಏರಿಸಿ, ಕೋಟ್ಯಾಧೀಶರ ನಿರೀಕ್ಷೆಗಳಲ್ಲಿ ಒಂದನ್ನು ಭಾಗಶಃವಾದರೂ ಈಡೇರಿಸಿದೆ. ನಂತರ ಪ್ರಕಟವಾದ ಆರ್ಥಿಕ ಸಮೀಕ್ಷೆ ಅವರ ಇನ್ನಷ್ಟು ನಿರೀಕ್ಷೆಗಳನ್ನು ಈಡೇರಿಸುವ ಸೂಚನೆಗಳನ್ನು ನೀಡಿದೆ. ಈ ಬಗ್ಗೆ ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೋ ಹೇಳಿಕೆಯನ್ನು ನೋಡಿ)

ಜನಪರ ಕಾರ್ಯಕ್ರಮಗಳಿಗೆ ಸಂಪನ್ಮೂಲ ಕ್ರೋಢೀಕರಣ ಹೇಗೆ?

ಹೊಸ ಲೋಕಸಭೆ ರಚನೆಯಾದ ನಂತರ ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ರಾಷ್ಟ್ರಪತಿಗಳ ಭಾಷಣ 'ಎಲ್ಲರನ್ನೂ ಒಳಗೊಳ್ಳುವ' ಬೆಳವಣಿಗೆಯ ಬಗ್ಗೆ ಬಹಳವಾಗಿ ಕಾಳಜಿ ವ್ಯಕ್ತಗೊಳಿಸಿತು. ಪ್ರಧಾನಿಗಳು ಮುಂಬರುವ ಬಜೆಟಿನಲ್ಲಿ ಈ ಕಾಳಜಿಗಳು ಕೃತಿರೂಪಕ್ಕೆ ಇಳಿಯುತ್ತವೆ ಎಂದಿದ್ದಾರೆ. ಮಹಾ 'ಉದಾರವಾದಿ'ಯೆನಿಸಿದ ಯೋಜನಾ ಆಯೋಗದ ಅಧ್ಯಕ್ಷ ಅಹ್ಲುವಲಿಯಾ ಕೂಡಾ ಇದು 'ಅಗ್ಗದ ಜನಪ್ರಿಯತೆ' (ಪಾಪ್ಯುಲಿಸ್ಟ್)ಯ ಬಜೆಟಾಗಿರುವುದಿಲ್ಲ, ಜನಪರ ಬಜೆಟಾಗಿರುತ್ತದೆ ಎಂದು ಹೇಳಿರುವುದಾಗಿ ವರದಿಯಾಗಿದೆ. ಜನಪರ ಎಂದರೆ ಹೇಗಿರಬೇಕು ಎಂದು ಈಗಾಗಲೇ ಕೋಟ್ಯಂತರ ಕಾರ್ಮಿಕರನ್ನು ಪ್ರತಿನಿಧಿಸುವ ಕಾರ್ಮಿಕ ಸಂಘಗಳು ಹಣಕಾಸು ಮಂತ್ರಿಗಳಿಗೆ ಮನವಿ ಅರ್ಪಿಸಿವೆ(ಜನಶಕ್ತಿ, ಜೂನ್ 14, 2009). ಅದೇ ರೀತಿ ದೇಶದ ಕೋಟ್ಯಂತರ ಮಹಿಳೆಯರನ್ನು ಪ್ರತಿನಿಧಿಸುವ ಮಹಿಳಾ ಸಂಘಟನೆಗಳೂ ಹಣಕಾಸು ಮಂತ್ರಿಗಳಿಗೆ ಜಂಟಿಯಾಗಿ ಮನವಿ ಸಲ್ಲಿಸಿವೆ.

ಬೆಲೆ ಏರಿಕೆ - ಆರ್ಥಿಕ ಬಿಕ್ಕಟ್ಟಿಗೆ ಪರಿಹಾರ ಕ್ರಮ

ಬೇಲೆಯೇರಿಕೆ ಈಗ ದೇಶದ ಜನಸಾಮಾನ್ಯ(ಆಮ್ ಆದ್ಮಿ)ರನ್ನೆಲ್ಲಾ ಬಹುವಾಗಿ ಬಾಧಿಸುತ್ತಿರುವ ಪ್ರಶ್ನೆ. ಆದ್ದರಿಂದ ಬಜೆಟ್ ಇದನ್ನು ಎದುರಿಸಲು ಆದ್ಯತೆ ಕೊಡಬೇಕು ಎಂಬುದು ಸಾಮೂಹಿಕ ಸಂಘಟನೆಗಳ ನಿರೀಕ್ಷೆ. ಆಹಾರ ಸಾಮಗ್ರಿಗಳ ಮತ್ತು ಇತರ ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆಗಳನ್ನು ತಡೆಹಿಡಿದು ಬೆಲೆ ಸ್ಥಿರತೆ ತರಲು ಕಟ್ಟುನಿಟ್ಟಾದ ಕ್ರಮಗಳನ್ನು ತರಬೇಕು, ಈ ಸಾಮಗ್ರಿಗಳಲ್ಲಿ ಜೂಜುಕೋರತನಕ್ಕೆ ಸರಕಾರ ಅವಕಾಶ ನೀಡುವುದನ್ನು ನಿಲ್ಲಿಸಬೇಕು ಹಾಗೂ ಪಡಿತರ ವ್ಯವಸ್ಥೆಯನ್ನು ಯಾವುದೇ ಹೆಸರಿನಲ್ಲಿ ಸೀಮಿತಗೊಳಿಸುವುದನ್ನು ನಿಲ್ಲಿಸಬೇಕು ಎಂಬುದು ಜನಸಂಘಟನೆಗಳ ಪ್ರಮುಖ ಬೇಡಿಕೆ.

ಜಾಗತಿಕ ಆರ್ಥಿಕ ಬಿಕ್ಕಟ್ಟು ನಮ್ಮ ದೇಶವನ್ನೂ ತಟ್ಟಿ ಉಂಟುಮಾಡಿರುವ ಸಮಸ್ಯೆಗಳು ಕೂಡಾ ಅತಿ ಹೆಚ್ಚಾಗಿ ತಟ್ಟಿರುವುದು ಜನಸಮಾನ್ಯರನ್ನೇ. ಆದರೆ ಯುಪಿಎ ಸರಕಾರ ಇದುವರೆಗೆ ಪ್ರಕಟಿಸಿರುವ ಉತ್ತೇಜಕ ಕ್ರಮಗಳೆಲ್ಲಾ ಉದ್ದಿಮೆದಾರರನ್ನಷ್ಟೇ ಗಮನದಲ್ಲಿಟ್ಟುಕೊಂಡವುಗಳು. ಈ ಬಜೆಟ್ ನಲ್ಲಾದರೂ ಜನಸಾಮಾನ್ಯರಿಗೆ, ಮುಖ್ಯವಾಗಿ ಕಾರ್ಮಿಕರಿಗೆ ಈ ಸಂಕಟಗಳಿಂದ ಪರಿಹಾರ ನೀಡುವ ಕ್ರಮಗಳನ್ನು ನಿರೀಕ್ಷಿಸುವುದು ಸಹಜ.

ಮಹಿಳೆಯರ ಪಾಲು

ಹತ್ತನೇ ಪಂಚವಾರ್ಷಿಕ ಯೋಜನೆಯ ಮಧ್ಯಂತರ ಪರಿಶೀಲನಾ ಸಮಿತಿ ಎಲ್ಲ ಇಲಾಖೆಗಳ ಬಜೆಟ್ ಪಾಲುಗಳಲ್ಲಿ 30 ಶೇ.ವಾದರೂ ಮಹಿಳೆಯರನ್ನು ತಲುಪಬೇಕು ಎಂದು ಶಿಫಾರಸು ಮಾಡಿತ್ತು. ಆದರೆ ಇದನ್ನು ಸರಿಯಾಗಿ ಜಾರಿ ಮಾಡುತ್ತಿಲ್ಲ, ತಪ್ಪು ಲೆಕ್ಕಾಚಾರಗಳನ್ನು ಕೊಟ್ಟು ಉತ್ಪ್ರೇಕ್ಷಿತ ಅಂಕಿ-ಅಂಶಗಳನ್ನು ಕೊಡಲಾಗುತ್ತಿದೆ. ಇದನ್ನು ನಿಲ್ಲಿಸಿ ಪ್ರಾಮಾಣಿಕವಾಗಿ ಈ ಶಿಫಾರಸನ್ನು ಜಾರಿ ಮಾಡಬೇಕು ಎಂಬುದು ಮಹಿಳಾ ಸಂಘಟನೆಗಳ ಇನ್ನೊಂದು ಪ್ರಮುಖ ಬೇಡಿಕೆ.

ಈಗಿನ ರಾಜಕೀಯ ಸನ್ನಿವೇಶದಲ್ಲಿ ಶ್ರೀಮಂತ ವಿಭಾಗಗಳು 'ಅಗ್ಗದ ಜನಪ್ರಿಯತೆ'ಯ ಕ್ರಮಗಳೆಂದು ಹೆಸರಿಸುವ ಕಾರ್ಯಕ್ರಮಗಳಿಗೆ ಬಹಿರಂಗವಾಗಿ ವಿರೋಧ ಸೂಚಿಸುವ ಪರಿಸ್ಥಿತಿ ಇಲ್ಲದಿರುವಾಗ ಈ ಕಾರ್ಯಕ್ರಮಗಳಿಗೆ ಸಂಪನ್ಮೂಲಗಳು ಎಲ್ಲಿಂದ ಬರಬೇಕು ಎಂಬುದು ಬಹುಮುಖ್ಯ ಪ್ರಶ್ನೆಯಾಗುತ್ತದೆ. ಇದಕ್ಕೆ ಶ್ರೀಮಂತ ವಿಭಾಗಗಳ 'ಸಲಹೆ'ಗಳನ್ನು ಮುಖ್ಯ ಲೇಖನದಲ್ಲಿ ಪರಿಶೀಲಿಸಿದ್ದೇವೆ. ಜನಸಾಮನ್ಯರ ವಿವಿಧ ವಿಭಾಗಗಳನ್ನು ಪ್ರತಿನಿಧಿಸುವ ಸಾಮೂಹಿಕ



ಸಂಘಟನೆಗಳು ಕೂಡಾ ಅಗತ್ಯ ಸಂಪನ್ಮೂಲಗಳನ್ನು ಹೇಗೆ ಕ್ರೋಢೀಕರಿಸಬಹುದು ಎಂಬ ಬಗ್ಗೆ ಖಚಿತ ಅಭಿಪ್ರಾಯಗಳನ್ನು ಹೊಂದಿವೆ.

ಶ್ರೀಮಂತ ವಿಭಾಗಗಳು ಹೇಳುವಂತೆ ಸಾರ್ವಜನಿಕ ವಲಯದಲ್ಲಿ ಸರಕಾರದ ಹೂಡಿಕೆಗಳನ್ನು ಖಾಸಗಿಯವರಿಗೆ ಮಾರುವುದು ಇದಕ್ಕೆ ಏಕೈಕ ಅಥವಾ ದಕ್ಷವಾದ ಕ್ರಮವೇನೂ ಅಲ್ಲ ಎಂದು ಆರ್ಥಿಕ ತಜ್ಞರೂ ಹೇಳುತ್ತಾರೆ. ಉದಾಹರಣೆಗೆ, 1991ರಿಂದ ಈ ರೀತಿ ಸರಕಾರದ ಹೂಡಿಕೆಗಳನ್ನು ಹಿಂದಕ್ಕೆ ಪಡೆಯುವ ಕ್ರಮದಿಂದ ಇದುವರೆಗೆ ಸಂಗ್ರಹಿಸಿದ ಹಣ ಸರಕಾರದ ಒಟ್ಟು ಹಣಕಾಸು ಕೊರತೆಯ 1 ಶೇ. ದಷ್ಟು ಕೂಡಾ ಆಗುವುದಿಲ್ಲ ಎಂದು ಒಬ್ಬ ಆರ್ಥಿಕ ತಜ್ಞರು ಲೆಕ್ಕ ಹಾಕಿದ್ದಾರೆ. ಇಷ್ಟಕ್ಕಾಗಿ ಜನತೆಯ ಈ ಅಮೂಲ್ಯ ಆಸ್ತಿಗಳನ್ನು ಮಾರುವುದು ಜಾಣತನದ ಕೆಲಸವಾಗುವುದಿಲ್ಲ. ಬದಲಿಗೆ ಸಾರ್ವಜನಿಕ ವಲಯದ ಘಟಕಗಳಲ್ಲಿ ಸಂಗ್ರಹವಾಗಿರುವ ಸುಮಾರು 4ಲಕ್ಷ ಕೋಟಿ ರೂ.ಗಳಷ್ಟು ಮೀಸಲು ನಿಧಿಗಳನ್ನು ಈ ಘಟಕಗಳ ವಿಸ್ತರಣೆಗೆ ಬಳಸಿಕೊಳ್ಳಬೇಕು.

ಭಾರತಕ್ಕೆ ಜಾಗತಿಕ ಆಥಿಕ ಬಿಕ್ಕಟ್ಟಿನ ಆಘಾತಗಳಿಂದ ಸ್ವಲ್ಪವಾದರೂ ರಕ್ಷಣೆ ನೀಡಿರುವ ಸಾರ್ವಜನಿಕ ವಲಯದ ಹಣಕಾಸು ಸಂಸ್ಥೆಗಳನ್ನು ಶ್ರೀಮಂತ ವಿಭಾಗಗಳು ಬಯಸುವಂತೆ ದುರ್ಬಲಗೊಳಿಸುವ ಬದಲು ಇನ್ನಷ್ಟು ಬಲಗೊಳಿಸಬೇಕು. ಹಣಕಾಸು ವಲಯದ ಮೇಲೆ ಬಲವಾದ ನಿಯಂತ್ರಣದ ಮೂಲಕ ಆದ್ಯತೆಯ ವಲಯಗಳಿಗೆ ಸಾಲ ನೀಡಿಕೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಲಿಸುವಂತೆ ಮಾಡಬೇಕು.

ಶ್ರೀಮಂತ ವಿಭಾಗ, ಬಂಡವಾಳಗಾರರು ನುಣುಚಿಕೊಳ್ಳಲು ಬಿಡಬೇಡಿ

- ಶ್ರೀಮಂತ, ಸಂಪನ್ನ ವಿಭಾಗಗಳ ಮೇಲೆ ತೆರಿಗೆಗಳನ್ನು ಹಾಕಿ ಅವು ಅದನ್ನು ತಪ್ಪಿಸಿಕೊಳ್ಳದಂತೆ ಕ್ರಮ ವಹಿಸಬೇಕು.
- ಕಾರ್ಪೊರೇಟ್ ಗಳಿಗೆ, ದೊಡ್ಡ ಉದ್ದಿಮೆದಾರರಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ, ವಿಶೇಷ ಆರ್ಥಿಕ ವಲಯಗಳಿಗೆ ವಿವಿಧ ರಿಯಾಯ್ತಿಗಳು, ವಿನಾಯ್ತಿಗಳು, ಉತ್ತೇಜನೆಗಳು ಎಂಬ ಹೆಸರಿನಲ್ಲಿ ಸರಕಾರದ ಹಣಕಾಸಿನ ದುಂದುವೆಚ್ಚವನ್ನು ನಿಲ್ಲಿಸಬೇಕು.
- ದುಪ್ಪಟ್ಟು ತೆರಿಗೆ ತಪ್ಪಿಸುವ ಒಪ್ಪಂದಗಳ ಹೆಸರಿನಲ್ಲಿ ಜೂಜುಕೋರ ಲಾಭಕೋರರು ತೆರಿಗೆಗಳನ್ನು ತಪ್ಪಿಸಿಕೊಳ್ಳದಂತೆ ಅವುಗಳ ಮರುವಿಮರ್ಶೆ ನಡೆಸಬೇಕು.
- ಉನ್ನತ ಆದಾಯ ಗುಂಪುಗಳು ಮತ್ತು ಕಾರ್ಪೊರೇಟುಗಳ ಮೇಲಿನ ಆದಾಯ ತೆರಿಗೆಯ ದರಗಳನ್ನು ಹೆಚ್ಚಿಸಬೇಕು.
- ಒಂದು ಅತೀ ಸಣ್ಣ ವಿಭಾಗ ಅಪಾರ ಸಂಪತ್ತನ್ನು ಪೇರಿಸಿಕೊಳ್ಳುತ್ತಿರುವ ಸನ್ನಿವೇಶದಲ್ಲಿ ಸಂಪತ್ತು ತೆರಿಗೆಯನ್ನು ಆರಂಭಿಸಬೇಕು.
- ದೀರ್ಘಕಾಲೀನ ಬಂಡವಾಳ ಲಾಭ ತೆರಿಗೆಯನ್ನು ಮತ್ತೆ ತರಬೇಕು.
- ಶೇರು ಮಾರುಕಟ್ಟೆ ವ್ಯವಹಾರಗಳಲ್ಲಿನ ಲಾಭಗಳ ಮೇಲಿನ ತೆರಿಗೆ ದರಗಳನ್ನು ಹೆಚ್ಚಿಸಬೇಕು.
- ದುಂದುವೆಚ್ಚ, ಆಡಂಬರದ ಸಾಮಾಜಿಕ ಸಮಾರಂಭಗಳು ಮತ್ತು ಕೊಳ್ಳುಬಾಕ ಚಟುವಟಿಕೆಗಳ ಮೇಲೆ ತೆರಿಗೆಗಳನ್ನು ಹಾಕಬೇಕು.
- ದೇಶದ ಒಳಗೂ, ಹೊರಗೂ ಕಪ್ಪು ಹಣವನ್ನು ಹೊರಗೆಳೆಯಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.
- ಮಾಹಿತಿ ತಂತ್ರಜ್ಞಾನ ಆಧಾರಿತ ಸೇವೆಗಳು, ಹೊರಗುತ್ತಿಗೆ ವಲಯಗಳು, ವಾಣಿಜ್ಯ ಆಧಾರದಲ್ಲಿ ಕಾರ್ಯ ನಿರ್ವಹಿಸುವ ಶೈಕ್ಷಣಿಕ, ಸಂಸ್ಥೆಗಳು, ಆರೋಗ್ಯ ಮತ್ತು ಇತರ ಸೇವೆಗಳು ಇವನ್ನೆಲ್ಲ ಸೇವಾ ತೆರಿಗೆ ವ್ಯವಸ್ಥೆಯೊಳಗೆ ತರಬೇಕು.

ನಮ್ಮ ದೇಶದ ದೊಡ್ಡ ಉದ್ದಿಮೆದಾರರಿಗೆ, ಸಂಪನ್ನ ವಿಭಾಗಗಳಿಗೆ ಸರಕಾರದ ಹಣಕಾಸು ಕೊರತೆಯ ಬಗ್ಗೆ ನಿಜವಾಗಿಯೂ ಕಾಳಜಿಯಿದ್ದರೆ ಅವರು ಈ ಕ್ರಮಗಳನ್ನು ವಿರೋಧಿಸಲು ಸಾಧ್ಯವಿಲ್ಲ, ಅಲ್ಲವೇ?

‘ಅಕ್ಷರವಿಲ್ಲ...ಅರಿವಿಗೇನು ಕಡಿಮೆಯಿಲ್ಲ’

ಶಿಕ್ಷಣವಿಲ್ಲದ ಅನಕ್ಷರಸ್ಥರು, ಅದೂ ಮಹಿಳೆಯರು, ಅದರಲ್ಲೂ ವಯಸ್ಸಾದ ಮಹಿಳೆಯರು ಏನು ತಾನೇ ಮಾಡಬಲ್ಲರು ಎಂದು ಕೆಲವರಿಗೆ ಅನಿಸಬಹುದು. ಆದರೆ ಬಿಜಾಪುರದ ಮಹಿಳಾ ಚಳುವಳಿಯ ಅನುಭವ ಹೇಳುವುದೇ ಬೇರೆ. ಅನಕ್ಷರಸ್ಥ ಮಹಿಳೆಯರೇ ಹೆಚ್ಚಾಗಿರುವ ಬಿಜಾಪುರ ಮಹಿಳಾ ಚಳುವಳಿಯೊಂದಿಗಿನ ವಿಭಿನ್ನ ಅನುಭವವನ್ನು ಹಂಚಿಕೊಂಡಿದ್ದಾರೆ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ.

ಕೆ.ಎಸ್.ಲಕ್ಷ್ಮಿ

ವಿದ್ಯಾರ್ಥಿ ಚಳುವಳಿಯಿಂದ ನಾನು ಬಿಡುಗಡೆಯಾಗಿ ಮಹಿಳಾ ಚಳುವಳಿಯ ಪೂರ್ಣಾವಧಿ ಕಾರ್ಯಕರ್ತೆಯಾದ ಆರಂಭದ ದಿನಗಳಲ್ಲಿ ನನ್ನನ್ನು ಕಾಡಿದ ಪ್ರಶ್ನೆ ಇದು - ಮಹಿಳೆಯರಿಗೆ ಆರೋಗ್ಯದ ಇತಿಮಿತಿ, ವಯಸ್ಸಿನ ಇತಿಮಿತಿ, ಶಿಕ್ಷಣದ ಕೊರತೆ, ಕೌಟುಂಬಿಕ ಜವಾಬ್ದಾರಿಗಳ ಇತಿಮಿತಿಗಳು ಹೆಚ್ಚಿವೆ. ಇದನ್ನು ಮೀರಿ ಮಹಿಳಾ ಚಳುವಳಿ ಕಟ್ಟೋದು ಸುಲಭ ಅಲ್ಲ ಅಲ್ಲವೇ ಎಂಬ ಪ್ರಶ್ನೆ. ಆದರೆ ಇದಕ್ಕೆ ಸಂಪೂರ್ಣ ವಿರುದ್ಧವಾದ ವಿಭಿನ್ನ ಅನುಭವ ನೀಡಿದ್ದು ಬಿಜಾಪುರ ಜಿಲ್ಲೆಯ ಮಹಿಳಾ ಸಂಘಟನೆ.

ಬಡತನದ ತೊಡಕು ದಾಟಿ

ಜಿಲ್ಲೆಯ ಜವಾಬ್ದಾರಿಯುಳ್ಳ ಪದಾಧಿಕಾರಿಯಾದ ನಾನು ಇಲ್ಲಿಯುವರೆಗೆ 5-6 ಬಾರಿ ಬಿಜಾಪುರಕ್ಕೆ ಹೋಗಿದ್ದೇನೆ. ಹೋದಾಗಲೆಲ್ಲಾ ಒಂದೊಂದು ಸಲ ಒಬ್ಬೊಬ್ಬ ಮಹಿಳಾ ಕಾರ್ಯಕರ್ತರ ಮನೆಗೆ ಉಳಿದುಕೊಂಡಿದ್ದೇನೆ. ಜಿಲ್ಲಾ ಕಾರ್ಯದರ್ಶಿ ಸುರೇಖಾ ರಜಪೂತ, ಜಿಲ್ಲಾ ಅಧ್ಯಕ್ಷೆ ಜಯಾ ಪವಾರ್ ಹೀರಾಬಾಯಿ, ಬಾನು ಬಿ. ಹೀಗೆ ಯಾರದ್ದೇ ಮನೆ ನೋಡಿದರೂ ಬಡತನ, ಕಿತ್ತು ತಿನ್ನುವ ಬಡತನ... ಹೊತ್ತು ಕಳೆದರೆ ಇನ್ನೊಂದು ಹೊತ್ತಿನ ಚಿಂತೆ. 20-25 ದಿನಗಳಿಗೊಮ್ಮೆ ಮನೆಗೆ ನೀರು. ಗಂಡ, ಹೆಂಡತಿ, ಮಗ,ಸೊಸೆಯಾದಿಯಾಗಿ ಬಾಳಿ ಬದುಕಲು ಮೂಲೆಗೊಂದು ಶೌಚಾಲಯವುಳ್ಳ ಕೊಠಡಿಗಳೇ ಮನೆಗಳು. ಇದೇ ಚಿತ್ರ ಉಳಿದೆಲ್ಲಾ ಸದಸ್ಯರ ಮನೆಗಳಲ್ಲೂ ಕಾಣಬಹುದು. ಅದರೀ ಜನ ಕಷ್ಟವನ್ನು, ಬಡತನವನ್ನು ಲೆಕ್ಕಿಸದೇ ಚಳುವಳಿಯೊಂದಿಗೆ ತೊಡಗಿಕೊಂಡ ಅವರ ಬದುಕನ್ನು ಕಂಡು ತುಂಬಾ ಭಾವುಕಳಾದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಆಗಾಗ್ಗೆ ಕೇಳಿಬರುವ ಮಾತು ‘ಕಾಮ್ರೇಡ್, ನಮಗೆ ವಯಸ್ಸಾಗಿದೆ. ನಾವು ಅವಿದ್ಯಾವಂತರು. ಇದಕ್ಕಿಂತ ಇನ್ನೇನು ಮಾಡೋಣ’ ಎಂಬುದು. ಆದರೆ ಬಿಜಾಪುರ ಜಿಲ್ಲಾ ಸಮಿತಿಯ ಶೇ. 60 ಸದಸ್ಯರು 50 ವರ್ಷ ಗಡಿ ದಾಟಿದವರು. 19 ಜನರ ಜಿಲ್ಲಾ ಸಮಿತಿಯಲ್ಲಿ 18 ಸದಸ್ಯರು ಅವಿದ್ಯಾವಂತರು. ಬರವಣಿಗೆಗೆ ಇತರರನ್ನು ಪೂರಾ ಅವಲಂಬಿಸಬೇಕಾದ ಸ್ಥಿತಿ ಇದ್ದರೂ ಅವರಲ್ಲಿ ಅಳುಕಿಲ್ಲ, ಕೀಳರಿಮೆ ಇಲ್ಲ. ಭಯವಂತೂ ಇಲ್ಲವೇ ಇಲ್ಲ. ಇವರಿಗೆ ತಪ್ಪಿತಸ್ಥ ಪೊಲೀಸರು, ಅಧಿಕಾರಿಗಳು ಹೆದರುತ್ತಾರೆ. ಒಂದು ಫೋನ್ ಮಾಡಿದರೆ ಸಾಕು ಬೆಚ್ಚಿ ಕೆಲಸ ಮಾಡಿಕೊಡ್ತಾರೆ. ಉತ್ತಮರು ಪ್ರಾಮಾಣಿಕ ಗೌರವದಿಂದ ಮಾತಾಡ್ತಾರೆ. ಜನವಾದಿ ಮಹಿಳಾ ಸಂಘಟನೆಯ ರಾಜ್ಯಮಟ್ಟದ ಅಧ್ಯಯನ ಶಿಬಿರದ ಸ್ವಾಗತ ಸಮಿತಿ ರಚನಾ ಸಭೆಗೆ ಆಹ್ವಾನ ಪತ್ರ ನೀಡಿದರೆ, ಸಭೆಗೆ ಮಹಿಳಾ ವೈದ್ಯರು, ವಕೀಲರು, ವಿಶ್ವವಿದ್ಯಾಲಯದ ಪ್ರೊಫೆಸರುಗಳು, ಹೈಸ್ಕೂಲ್ ಮುಖ್ಯೋಪಾಧ್ಯಯರು, ಸಾಹಿತಿಗಳು ಪ್ರೀತಿಯಿಂದ ಅಭಿಮಾನದಿಂದ ಭಾಗವಹಿಸುತ್ತಾರೆ. ವಿದ್ಯಾವಂತರು, ಅವಿದ್ಯಾವಂತರ ನಡುವೆ ಯಾವುದೇ ಅಂತರವೇ ಇಲ್ಲ.

‘ಕನಿಷ್ಟ ವೆಚ್ಚ ಕೊಡಿ ಸಾಕು’

ರಾಜ್ಯ ಅಧ್ಯಯನ ಶಿಬಿರಕ್ಕೆ 15 ಜಿಲ್ಲೆಗಳಿಂದ 200 ಪ್ರತಿನಿಧಿಗಳು ಭಾಗವಹಿಸುತ್ತಿದ್ದು, ಅವರು ಉಳಿದುಕೊಳ್ಳಲು ಒಳ್ಳೆಯ ವಸತಿ ಇರುವ



ಸಭಾಂಗಣ ಅಗತ್ಯವಿತ್ತು. ಅದರ ಸಲುವಾಗಿ ನಾನು, ಸುರೇಖಾ ಆಟೋ ಹತ್ತಿ ಹೊರಟೆವು. ಯಾವ ಸಭಾಂಗಣಕ್ಕೆ ಹೋದರೂ ಇವರ ಪರಿಚಯವಿದೆ. ದಿನಕ್ಕೆ 10-15 ಸಾವಿರ ಬಾಡಿಗೆ ಇರುವ ಮಂಟಪಗಳ ಮಾಲೀಕರು ಕನಿಷ್ಟ ವೆಚ್ಚ, ನೀರು, ಕರೆಂಟು ಶುಚಿತ್ವದ ಖರ್ಚುಗಳನ್ನು ವಹಿಸಿಕೊಂಡರಾಯಿತು ಅಂತಾರೆ.... ಶಿಬಿರಕ್ಕೆ ಬರುವ ಅತಿಥಿಗಳಿಗೆ ಹೋಟೆಲ್ ಕೊಠಡಿಗಳನ್ನು ವಿಚಾರಿಸಲು ಹೋದರೆ... ಬರ್ರಿ ಮೇಡಂ...ನೀವು ಕೇಳೋದು ದೊಡ್ಡದಾ.. ನಾವು ಕೊಡೋದು ದೊಡ್ಡದಾ ಎಂದು ಉಚಿತವಾಗಿ ಉತ್ತಮ ಕೊಠಡಿಗಳನ್ನು ನೀಡಲು ಮುಂದೆ ಬರುತ್ತಾರೆ. ಇದು ಹೇಗೆ ಸಾಧ್ಯವಾಯಿತು ಇವರಿಗೆ? ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಭೀಮಸಿ ಕಲಾದಗಿ, ಅಣ್ಣಾರಾಯ ಈಳಗೇರಾ, ಜನವಾದಿ ಮುಖಂಡರಾದ ಹೀರಾಬಾಯಿ,ಸೋನಾ ಬಾಯಿ, ಸುರೇಖಾ ರಜಪೂತ ನೆನಪಿನ ಪುಟಗಳನ್ನ ತಿರುವಿದಾಗ ತಿಳಿದುಬಂದದ್ದು.

ಬಿಜಾಪುರದಲ್ಲಿ ಸಾವಿರಾರು ರೈತರ ನೇತೃತ್ವದಲ್ಲಿ ನಡೆದ ಹೋರಾಟಗಳು ಮಹಿಳೆಯ ಮೇಲಿನ ದೌರ್ಜನ್ಯಗಳ ವಿರುದ್ಧ, ನಾಗರೀಕ ಸೌಲಭ್ಯಗಳಿಗಾಗಿ ಮಹಿಳೆಯರು ನಡೆಸಿದ ಅನಿರ್ದಿಷ್ಟಾವಧಿ ಹೋರಾಟಗಳು. ಗೆಲುವುಗಳು ಜನಜೀವನದೊಂದಿಗೆ ಮಿಳಿತ’ವಾಗಿರುವ’ ವಿಚಾರಗಳಷ್ಟೆ ಮಹಿಳೆಯರು ದಿನಂಪ್ರತಿ ತರುವ ವೈಯಕ್ತಿಕ ದೂರುಗಳಿಗೇ ಹೋರಾಟದ ಸ್ವರೂಪ ನೀಡಿ ಪರಿಹಾರ ಕೊಡಿಸುವುದರಿಂದ ಎಷ್ಟೇ ಶ್ರೀಮಂತರಿರಲಿ, ಉನ್ನತ ಹುದ್ದೆಯಲ್ಲಿದ್ದವರಿರಲಿ... ಮೇಲ್ಜಾತಿಯವರಿರಲಿ.... ಇವರ ಬಳಿ ಬರಲೇಬೇಕು. ಇನ್ನು ಕಾನೂನಿನ ವಿಷಯ. ಇವರೇ ನಿಭಾಯಿಸುತ್ತಾರೆ ಎಂಬುದೇ ರೋಮಾಂಚನಕಾರಿ. ಆಸ್ತಿ ವಿವಾದವಾ..ದುಡಿಯುವ ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣವೂ ಗಂಡ ಹೆಂಡತಿಯರ ನಡುವಿನ ಸಮಸ್ಯೆಯೂ ನಾಗರಿಕರ ಸಮಸ್ಯೆಯೂ ಯಾವುದೇ ಇರಲಿ ಅಗತ್ಯವಾದಾಗ ತಿಳಿದವರಿಂದ ತಿಳಿದುಕೊಳ್ತಾರೆ... ಇಡೀ ಪ್ರಕರಣವನ್ನು ಎಳೆ ಎಳೆಯಾಗಿ ಬಿಡಿಸಿ ಅರ್ಥೈಸಿಕೊಂಡು ಪರಿಹಾರ ಕೊಡಿಸ್ತಾರೆ. ಇಂದು ತೀರ್ಮಾನ ಮಾಡಿದರೆ ನಾಳಿನ ಕಾರ್ಯಕ್ರಮಕ್ಕೆ 100 ರಿಂದ 150 ಜನರನ್ನು ಸೇರಿಸಲು ಶಕ್ತಿ ಇರುವ ಜಿಲ್ಲಾ ಸಮಿತಿಯ ಸದಸ್ಯರೆಲ್ಲರೂ ಕನಿಷ್ಟ ವೆಚ್ಚ ತೆಗೆದುಕೊಂಡು, ಅಂಗವಿಕಲರಿಗೆ ಪೆನ್ಶನ್, ವಿಧವೆಯರಿಗೆ, ಹಿರಿಯ ನಾಗರಿಕರಿಗೆ ಪೆನ್ಶನ್, ರೇಷನ್ ಕಾರ್ಡ್, ನಿವೇಶನ, ಡ್ರೈವಿಂಗ್ ಲೈಸೆನ್ಸ್ ಇವೆಲ್ಲವನ್ನೂ ಕೊಡಿಸ್ತಾರೆ.. ಅವರಿಗೆಲ್ಲಾ ಮಹಿಳಾ ಸಂಘಟನೆಯ ಸದಸ್ಯತ್ವ ನೀಡುತ್ತಾರೆ. ಹೀಗೆ ಸಂಪರ್ಕಕ್ಕೆ ಬಂದ ಮಹಿಳೆಯರೊಂದಿಗೆ ಚರ್ಚಿಸಿ ಮನವರಿಕೆ ಮಾಡಿಕೊಟ್ಟು ಆ ಪ್ರದೇಶಗಳಲ್ಲಿ ಘಟಕಗಳನ್ನು ಮಾಡ್ತಾರೆ... ಪ್ರಸ್ತುತ ಬಿಜಾಪುರ ನಗರದಲ್ಲಿ 14 ಘಟಕಗಳಿದ್ದದ್ದು 26 ಘಟಕಗಳಾಗಿವೆ. ಪ್ರತಿ ಘಟಕದಲ್ಲೂ ಕನಿಷ್ಟ ಒಬ್ಬರು ಓದಿದವರಿರಬೇಕೆಂಬುದರ ಬಗೆಗೆ ಒತ್ತು ನೀಡಿ ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಿದ್ದರಿಂದ ಘಟಕ ಮಟ್ಟದಲ್ಲಿ ನಡವಳಿಕೆ ದಾಖಲಾತಿ ಪುಸ್ತಕದಲ್ಲಿ ಅಜೆಂಡಾ ಬರೆದು ಸಭೆ ನಡೆಸುವುದಕ್ಕೆ ಸಾಕಷ್ಟು ಪ್ರಯತ್ನಗಳು ನಡೀತಿವೆ.

ಉಚಿತ ಸಭಾಂಗಣ

ತಂದೆ ತಾಯಿಯರನ್ನು ಅಪಘಾತದಲ್ಲಿ ಕಳೆದುಕೊಂಡ ಮಕ್ಕಳ ಆಸ್ತಿಯನ್ನು ಬೇರೆಯವರು ಲಪಟಾಯಿಸಲು ಹೊರಟ ದೂರೊಂದನ್ನು ಸಂಘಟನೆಯವರು ನಿಭಾಯಿಸಿದ ರೀತಿಯಿಂದ ಪ್ರಭಾವಿತರಾದ ಫಿರ್ಯಾದುದಾರರು ನಗರ ಕೇಂದ್ರದಲ್ಲಿ 20 ವರ್ಷಕ್ಕೆ ಉಚಿತವಾಗಿ 20 ಜನ ಕುಳಿತುಕೊಳ್ಳಬಹುದಾದ ಸಭಾಂಗಣವೊಂದನ್ನು ನೀಡಿದ್ದಾರೆ.

ಹೀಗೆ ಒಂದೊಂದು ಹೋರಾಟವೂ ವಿಶೇಷ ಅನುಭವವನ್ನು ನೀಡುತ್ತದೆ. ಈ ಮಹಿಳೆಯರಿಗೆ ಶಿಕ್ಷಣ ನೀಡಿ, ಸಂಘಟನಾ,ಸೈದ್ಧಾಂತಿಕ ತಿಳುವಳಿಕೆಯನ್ನು ವಿಸ್ತರಿಸಲು ನೂತನ ವಿಧಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ಸಂಘಟನಾ ಶಿಕ್ಷಣದಿಂದ ವಂಚಿತರಾದ ವಿಶಾಲ ಸಮುದಾಯವನ್ನು ಮುಟ್ಟಲು ಯೋಚಿಸುತ್ತಿದ್ದೇವೆ.

ದುಬಾರಿ ನಗರ ಜೀವನದ ಸಂಕಷ್ಟವಿರಲಿ, ಕೌಟುಂಬಿಕ ಜವಾಬ್ದಾರಿ,ಒತ್ತಡವಿರಲಿ, ಆರೋಗ್ಯದ ಸಮಸ್ಯೆ ಇರಲಿ, ಒಮ್ಮೆ ಬಿಜಾಪುರಕ್ಕೆ ಹೋಗಿ ಓಡಾಡಿ, ಅಲ್ಲಿನ ಮಹಿಳಾ ಸಂಗಾತಿಗಳೊಂದಿಗೆ ಒಡನಾಡಿ ಬಂದರೆ......... ಮತ್ತೆ ಉಲ್ಲಾಸ, ಉತ್ಸಾಹ, ಸ್ಫೂರ್ತಿ ಚಿಗುರೊಡೆಯುತ್ತದೆ. ●

ರಾಮ್ಕೊ ಇಂಡಸ್ಟ್ರೀಸ್ ಗುತ್ತಿಗೆ ಕಾರ್ಮಿಕರನ್ನು ಕಾಯಂಗೊಳಿಸಿದ ಒಪ್ಪಂದಕ್ಕೆ ಸಹಿ

ರಾಣಿಬೆನ್ನೂರು: ಇಲ್ಲಿನ ಖ್ಯಾತ ರಾಮ್ಕೋ ಇಂಡಸ್ಟ್ರೀಸ್ ಕಾರ್ಖಾನೆಯಲ್ಲಿ ಕಳೆದ ಸುಮಾರು ಇಪ್ಪತ್ತು-ಇಪ್ಪತ್ತೈದು-ವರ್ಷಗಳಿಂದ ಗುತ್ತಿಗೆ ಕಾರ್ಮಿಕರಾಗಿ ದುಡಿಯುತ್ತಿದ್ದ ಎಲ್ಲಾ 35 ಜನ ಕಾರ್ಮಿಕರನ್ನು ಮುಂದಿನ 31/2 ವರ್ಷಗಳಲ್ಲಿ ಹಂತ ಹಂತವಾಗಿ ಕಾಯಂಗೊಳಿಸುವ ಒಪ್ಪಂದಕ್ಕೆ ಜೂನ್ 22 ರಂದು ಸಹಿ ಹಾಕಲಾಯಿತು. ಇದರಿಂದಾಗಿ ರಾಮ್ಕೊ ಕಾರ್ಮಿಕರ ಬಹುದಿನಗಳ ಕನಸು ನನಸಾದಂತಾಗಿದೆ. ಜಾಗತಿಕ ಆರ್ಥಿಕ ಹಿಂಜರಿತದಿಂದ ರಾಜ್ಯದಲ್ಲಿ ಕಾರ್ಮಿಕರ ಹಕ್ಕುಗಳ ಮೇಲೆ ದಾಳಿ ನಡೆಯುತ್ತಿರುವ ಈ ದಿನಗಳಲ್ಲಿ ಇದೊಂದು ಅಪವಾದದ ಆದರೂ ಗಮನಾರ್ಹ ಬೆಳವಣಿಗೆಯಾಗಿದೆ. ಸಿಐಟಿಯು ನೇತೃತ್ವದಲ್ಲಿ ಸಂಘಟಿತರಾಗಿದ್ದ ಇಲ್ಲಿನ ಕಾರ್ಮಿಕರು ನಿರಂತರವಾಗಿ ನಡೆಸುತ್ತಾ ಬಂದ ಹೋರಾಟಗಳ ಫಲವಾಗಿ ಪ್ರತಿ 31/2 ವರ್ಷಕ್ಕೊಮ್ಮೆ ಏರ್ಪಡಿಸುತ್ತಿದ್ದ ವೇತನ ಪರಿಷ್ಕರಣೆಯ ಒಪ್ಪಂದಗಳಲ್ಲಿ ತಮ್ಮ ವೇತನದಲ್ಲಿ ಗಣನೀಯವಾದ ಪ್ರಗತಿಯನ್ನು ಸಾಧಿಸುತ್ತಾ ಈಗ ಕಾಯಂ ಕಾರ್ಮಿಕರಾಗಿ ಬಡ್ತಿ ಹೊಂದಲು ಸಾಧ್ಯವಾಯಿತು.

ಈ ಒಪ್ಪಂದದಿಂದಾಗಿ ಕಾಯಂಗೊಳ್ಳುತ್ತಿರುವ ಕಾರ್ಮಿಕರ ಮಾಸಿಕ ವೇತನ ಸುಮಾರು ರೂ.6500ಕ್ಕೆ ಏರಲಿದೆ. ತಮ್ಮ ಅವಧಿ ಬರುವವರೆಗೆ ಗುತ್ತಿಗೆ ಕಾರ್ಮಿಕ ರಾಗಿಯೇ ಕೆಲಸ ಮಾಡುವ ಕಾರ್ಮಿಕರ ಮಾಸಿಕ ವೇತನದಲ್ಲಿ ಸುಮಾರು 800 ರೂ.ಗಳ ನೇರ ಹೆಚ್ಚಳವಾಗಿದ್ದು ಅವರ ಮೂಲ ವೇತನ ರೂ.5260ಕ್ಕೆ ಏರಲಿದೆ. ಇವರು ಮುಂದಿನ 9 ತಿಂಗಳು ಬದಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಾ ತರಬೇತಿಯನ್ನು ಪಡೆಯಲಿದ್ದಾರೆ.

ಒಪ್ಪಂದಕ್ಕೆ ಆಡಳಿತ ವರ್ಗದ ಪರವಾಗಿ ಜನರಲ್ ಮ್ಯಾನೇಜರ್ ಮುತ್ತುಕೃಷ್ಣನ್ ಸಹಿ ಹಾಕಿದ್ದಾರೆ. ಕಾರ್ಮಿಕ ಸಂಘದ ಪರವಾಗಿ ಅಧ್ಯಕ್ಷರಾಗಿ ನಿತ್ಯಾನಂದಸ್ವಾಮಿ, ಉಪಾಧ್ಯಕ್ಷರಾದ ಕೆ.ಬಸವನಗೌಡ ಮತ್ತು ಶಿವಪ್ಪ.ಕೆ, ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ಸಹಕಾರ್ಯದರ್ಶಿ ಶಿವಪುತ್ರ ಎಂ. ಹಾಗೂ ಖಜಾಂಚಿ ಲೋಹಿತ್.ಕೆ ಸಹಿ ಹಾಕಿದ್ದಾರೆ. ಸುಮಾರು 6 ತಿಂಗಳುಗಳಿಂದ ಒಪ್ಪಂದಕ್ಕಾಗಿ ಮಾತುಕತೆ ನಡೆಸಲಾಗಿತ್ತು. ಕಾಯಂ ಕಾರ್ಮಿಕರ ಸಂಘದ ಮುಖಂಡರಾದ ಮೌಲಾಸಾಬ್ ಜೆ, ನಿಂಗಪ್ಪ ಬಕ್ಕಜ್ಜಿ ಮತ್ತು ವಿಶ್ವನಾಥ ಕೆ.ಎಸ್. ಅವರು ಆಡಳಿತ ವರ್ಗದ ಮೇಲೆ ಒತ್ತಡ ತಂದು ಸೌಹಾರ್ದಯುತವಾಗಿ ಒಪ್ಪಂದ ಏರ್ಪಡುವ ಸಹಕರಿಸಿದರು.

ವರದಿ: ಚಂದ್ರಶೇಖರ್, ಕರೂರ್

"ಮೂವತ್ತೆರಡು ವರ್ಷಗಳ ಕಾಲ ಎಡರಂಗ ಸರಕಾರದ ಅಧಿಕಾರ ನಡೆಸಿದ ಮೇಲೂ ಪಶ್ಚಿಮ ಬಂಗಾಳದ ಲಾಲ್‌ಗರ್' ಅಭಿವೃದ್ಧಿಯಾಗಿಲ್ಲ. ಜನರು ಆದಿವಾಸಿಗಳು ಪಶ್ಚಿಮ ಬಂಗಾಳ ಸರ್ಕಾರದ ವಿರುದ್ಧ ಬಂಡೆದಿದ್ದಾರೆ. ಅವರು ಮಾವೋವಾದಿಗಳ ನೇತೃತ್ವದಲ್ಲಿ ಸಂಘರ್ಷಕ್ಕಿಳಿದಿದ್ದಾರೆ....." ಇತ್ಯಾದಿಯಾಗಿ ಎಷ್ಟೋ ವರದಿಗಳು ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿವೆ. ಜೂನ್ 26, 2009 ರ 'ದಿ ಹಿಂದೂ ಪತ್ರಿಕೆ'ಯ ಈ ವರದಿ ಪ್ರಸ್ತುತ ಲಾಲ್‌ಗರ್‌ನಲ್ಲಿನ ವಾಸ್ತವ ಸತ್ಯಗಳೇನೆಂದು ತೆರೆದಿಡುವ ಒಂದು ಪ್ರತ್ಯಕ್ಷ ವರದಿ. ಆ ವರದಿ ಏನು ಹೇಳಿದೆ ನೋಡಿ. ಅದರ ಯಥಾವತ್ ರೂಪ ಇಲ್ಲಿದೆ.

ಲಾಲ್‌ಗರ್

'ವಿಮೋಚನೆ'ಯೋ ಅಥವಾ ಭೀತಿಯ ಆಳ್ವಿಕೆಯೋ ?

ಈ ತಿಂಗಳ (ಜೂನ್) ಆರಂಭದಲ್ಲಿ ಪೊಲೀಸರು ಲಾಲ್‌ಗರ್ ಒಳಕ್ಕೆ ಪ್ರವೇಶಿಸುತ್ತಿದ್ದಂತೆ ಮಾವೋವಾದಿಗಳು ಅಲ್ಲಿನ ಆದಿವಾಸಿ ನಿವಾಸಿಗಳಿಗೆ ದಾರಿಗಳಲ್ಲಿ ಅಡೆತಡೆಗಳನ್ನು ನಿರ್ಮಿಸಲು ಸೂಚಿಸಿದರು. ರೈಫಲ್‌ಗಳು ಮತ್ತಿತರ ಆಯುಧಗಳನ್ನು ಹೊಂದಿದ್ದ ದಂಗೆಕೋರರು ಹಳ್ಳಿಗರು ಮರ ಕಡಿಯುವುದನ್ನು ಮತ್ತು ನೆಲ ತೋಡಿ ಕಂದಕ ನಿರ್ಮಿಸುವುದನ್ನು ನೋಡುತ್ತಿದ್ದರು.

ಆದರೆ ಸೋಮವಾರ, ಬೋಗಾರಾಮ್ ಲೋಹರ್ ಎಂಬಾತ ಡಜನ್ ಸ್ಥಳೀಯ ನಿವಾಸಿಗಳ ಪರವಾಗಿ ಮಾತನಾಡುವ ಧೈರ್ಯ ತೋರಿದ. ಮಾವೋವಾದಿಗಳ ಈ ಆದೇಶದ ಉಲ್ಲಂಘನೆಗಾಗಿ ಲೋಹರ್ ತೀವ್ರವಾದ ಹಲ್ಲೆಗೆ ಗುರಿಯಾದ ಮತ್ತು ಆತ ಊರಿಂದಲೇ ಹೊರಬೀಳಬೇಕಾಯಿತು.

ಬಹಳಷ್ಟು ವರದಿಗಳು ಲಾಲ್‌ಗಢನ ಹಿಂಸೆಯು ಮೂಲಭೂತವಾಗಿ ಆದಿವಾಸಿಗಳ ಕಿಚ್ಚು-ಆಕ್ರೋಶ, ಅವರು ನ್ಯಾಯಕ್ಕಾಗಿ ಹಾಗೂ ಅಭಿವೃದ್ಧಿಗಾಗಿ ಸಿಡಿದೆದ್ದಿದ್ದಾರೆ ಎನ್ನುತ್ತಿವೆ. ಒಂದು ವರದಿಯಂತೂ ಕಳೆದ 3 ದಶಕಗಳಿಂದ, ಅಭಿವೃದ್ಧಿಯು ಲಾಲ್‌ಗರ್ ಬಳಿ ಸುಳಿಯಲೇ ಇಲ್ಲ' ಎಂದು ಹೇಳಿದೆ.

ಆದರೆ ಮಿ.ಲೋಹರ್‌ನ ಕತೆ ಮತ್ತು ಇಲ್ಲಿನ ಒಟ್ಟು ಅನುಭವದಿಂದ ತಿಳಿದುಬರುವ ಅಂಶವು ಈ ಮೇಲಿನ ಕತೆಗಳ ಬಗೆಗೆ ಸಂಶಯವನ್ನು ಹುಟ್ಟುಹಾಕುತ್ತದೆ.

ಅಭಿವೃದ್ಧಿ ಆಗಿಲ್ಲವೇ?

ಹಿಂದೆ 1977 ರಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಮೊದಲ ಬಾರಿ ಎಡರಂಗ ಸರ್ಕಾರವು ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೇರಿದಾಗ 'ಜೋತೆದಾರ'ರು ಎಂಬ ಭೂಮಾಲಿಕರಿಂದ ಈ ಪ್ರದೇಶದ ಇಡೀ ಗ್ರಾಮಗಳನ್ನೇ ಮುಕ್ತಗೊಳಿಸಿದರು. ಪಶ್ಚಿಮ ಬಂಗಾಳದ 'ಭೂಸುಧಾರಣೆ ಮತ್ತು ಭೂ ಇಲಾಖೆ'ಯ ಅಂಕಿ ಅಂಶಗಳನ್ನು ನೋಡಿದರೆ 2002 ಮತ್ತು 2003 ರವರೆಗೆ ಜಾಗ್ರಮ್, ಬಿನಾಪುರ್, ಸಾಲ್‌ಬೋನಿ ಬ್ಲಾಕ್‌ಗಳಲ್ಲಿ 16,280 ಹೆಕ್ಟೇರ್ (40,700 ಎಕರೆ) ಭೂಮಿಯನ್ನು ಬಡರೈತರಿಗೆ ಹಂಚಿಕೆ ಮಾಡಲಾಗಿರುವುದು ತಿಳಿಯುತ್ತದೆ. ಇದೇ ಪ್ರದೇಶ ಈಗ ಮಾವೋವಾದಿಗಳ ಧಾಳಿಗೆ ಗುರಿಯಾಗಿದೆ.

ಅಪರಾಜಿತ ಭಕ್ಷಿ - ಕೊಲ್ಕೊತ್ತಾದ ಇಂಡಿಯನ್ ಸ್ಟಾಟಿಸ್ಟಿಕಲ್ ಇನಿಸ್ಟಿಟ್ಯೂಟ್'ನ ಹಿರಿಯ ಸಂಶೋಧನಾ ವಿದ್ಯಾರ್ಥಿ ಹೇಳುತ್ತಾರೆ. "ನಾನು ಸಂಶೋಧನೆ ಕೈಗೊಂಡಿರುವ ಜಾಗ್ರಮ್ ಗ್ರಾಮದಲ್ಲಿ ಶೇ.75 ರಷ್ಟು ಕುಟುಂಬಗಳು ಭೂಸುಧಾರಣೆಯ ಫಲಾನುಭವಿಗಳು. ಪರಿಶಿಷ್ಟ ಪಂಗಡಗಳ ಕುಟುಂಬಗಳಲ್ಲಿ ಶೇ.70 ಕ್ಕಿಂತ ಕಮ್ಮಿ ಇಲ್ಲದಂತೆ ಜನರು ಭೂಸುಧಾರಣೆಯಿಂದ ಭೂಮಿ ಪಡೆದುಕೊಂಡಿದ್ದಾರೆ. ಇತ್ತ ಶೇ.90ರಷ್ಟು ಜನರು ಮನೆ ನಿವೇಶನಗಳನ್ನು ಪಡೆದುಕೊಂಡಿದ್ದಾರೆ.

ಆದಾಯದಲ್ಲಿನ ಬಡತನ ಮತ್ತು ಅಭಿವೃದ್ಧಿಹೀನತೆ ಇಡೀ ಪ್ರದೇಶದಲ್ಲಿ ಮುಂದುವರಿದಿದೆ. ಆದರೆ ಭೂಸುಧಾರಣೆಯು ಆದಿವಾಸಿಗಳಿಗೆ ಒಂದು ಹಂತದ ಸ್ವಾತಂತ್ರ್ಯವನ್ನು, ಭದ್ರತೆಯನ್ನು ನೀಡಿದೆ. ಈ ಸ್ವಾತಂತ್ರ್ಯ ಮತ್ತು ಭದ್ರತೆಯು ದೇಶದ ಉಳಿದ ಭಾಗದ ಆದಿವಾಸಿಗಳಿಗೆ ಇಲ್ಲ ಎಂಬುದನ್ನು ಗಮನಿಸಬೇಕಾಗಿದೆ.

ಲಾಲ್‌ಗರ್‌ನ 'ವಿಮೋಚನೆ' ಎಂದು ಸಾರಲಾಗುತ್ತಿರುವ ಮಾವೋವಾದಿಗಳ ಆಡಳಿತವು ವಾಸ್ತವವಾಗಿ ಬಹಳಷ್ಟು ಆದಿವಾಸಿಗಳ ಬದುಕನ್ನು ಸಂಕಷ್ಟಕ್ಕೆ ತಳ್ಳಿದೆ. ಅರಣ್ಯ ಉತ್ಪನ್ನಗಳಿಂದ ಬರುವ ಆದಾಯವನ್ನೇ ಇಲ್ಲಿನ ಹೆಚ್ಚಿನ ಕುಟುಂಬಗಳು ಅವಲಂಬಿಸಿವೆ. ಆದರೆ ಆ ಆದಾಯ ಈಗ ಬತ್ತಿಹೋಗಿದೆ. ಸಂಕಷ್ಟಗಳನ್ನು ತಗ್ಗಿಸಬಹುದಾಗಿದ್ದ ಸರ್ಕಾರದ ಯೋಜನೆಗಳೆಲ್ಲವೂ ಕುಸಿದುಬಿದ್ದಿವೆ.

ನಕ್ಸಲ್ - ತೃಣಮೂಲ ಹಿಂಸಾಚಾರಗಳಿಂದ ತೀವ್ರ ತೊಂದರೆಗೊಳಗಾಗಿ ಸೈನಿಕ ಶಿಬಿರ ತಲುಪಿರುವ ಮಹಿಳೆಯರು



ಸ್ಥಳೀಯ ನಿವಾಸಿ ಮಾನೇಕ್‌ಸಿಂಗ್ ಹೇಳುತ್ತಾರೆ "ನವೆಂಬರ್‌ನಲ್ಲಿ ಮಾವೋವಾದಿಗಳು, ನಾವು ಅರಣ್ಯ ಪ್ರವೇಶಿಸಿ ಮರ ಕಡಿಯುವುದಕ್ಕೆ ತಡೆಯೊಡ್ಡಿದರು. ಈ ಕೆಲಸಕ್ಕೆ ಅರಣ್ಯ ಇಲಾಖೆಯು ನಮಗೆ ದಿನಕ್ಕೆ 70 ರೂ.ಗಳ ಕೂಲಿ ಕೊಡುತ್ತಿತ್ತು. ಈಗ ಯಾರೊಬ್ಬರೂ ನಮ್ಮ ಈ ಪ್ರದೇಶಕ್ಕೆ ಕಾಲಿಡುವುದಿಲ್ಲ. ಮರದ ಎಲೆಗಳಿಂದ ತಯಾರಿಸಲಾಗುವ ಊಟದ ಎಲೆಗಳನ್ನು ಕೊಳ್ಳಲು ಸಹ ಯಾರೂ ಬರುವುದಿಲ್ಲ. ನಮಗೆ ಇಲ್ಲೀಗ ಏನೂ ದೊರೆಯುತ್ತಿಲ್ಲ"

ದರೋಡೆ ಮತ್ತು ಧಾಳಿಗಳು

ಮಾವೋವಾದಿಗಳ ದಾಳಿಗಳು ಮತ್ತು ಲೂಟಿಗಳನ್ನು ಕಂಡು ಸರ್ಕಾರಿ ನೌಕರರು ಪ್ರದೇಶದಿಂದ ದೂರ ಉಳಿದಿದ್ದಾರೆ. ಐ.ಸಿ.ಡಿ.ಎಸ್ (ಅಂದರೆ ಅಂಗನವಾಡಿ) ಕಾರ್ಯಕರ್ತೆಯರು ತಿಂಗಳಿಗೆ 1000 ರೂ. ಕೊಡುವಂತೆ ಮಾವೋವಾದಿಗಳು ಆದೇಶ ಕೊಟ್ಟಿದ್ದಾರೆಂದು ಇಲ್ಲಿನ ನಿವಾಸಿಗಳು ದೂರುತ್ತಾರೆ. ಬ್ಲಾಕ್ ಡೆವಲಪ್‌ಮೆಂಟ್ ಕಛೇರಿಯಲ್ಲಿ ಶಿಕ್ಷಣ ಇಲಾಖೆಯ ಶಿಕ್ಷಕರು ಮತ್ತು ನೌಕರರು ಮಾವೋವಾದಿಗಳಿಗೆ ಇದರ ಎರಡು ಪಟ್ಟು ಹಣ ನೀಡಬೇಕಾಗಿದೆ ಎಂದು ದೂರು ಹೇಳಿಕೊಂಡರು. ಅಕ್ಟೋಬರ್‌ನಲ್ಲಿ ನಡೆದ ಭಾರತಿ ಮಜ್ಹಿ ಎಂಬ ನರ್ಸ್ ಹಾಗೂ ಹೊನಿರಾನ್ ಮುರ್ಮು ಎಂಬ ಸರ್ಕಾರಿ ವೈದ್ಯರ ಕೊಲೆಯಿಂದಾಗಿ ಲಾಲ್‌ಗರ್‌ನ ಬಹುತೇಕ ಪ್ರದೇಶಗಳು ಇಂದು ಆರೋಗ್ಯ ವ್ಯವಸ್ಥೆಯಿಂದ ವಂಚಿತವಾಗಿವೆ.

ರಾಜಕೀಯ ಮತ್ತು ಅಧಿಕಾರ

ಲಾಲ್‌ಗರ್‌ನಲ್ಲಿ ಸಿಪಿಐ(ಎಂ) ವಿರುದ್ಧ ಜನ ಬಾರಿ ಬಂಡಾಯ ಎದ್ದಿದ್ದಾರೆ ಎಂಬುದನ್ನು ಚುನಾವಣೆಗೆ ಸಂಬಂಧಿಸಿದ ಅಂಕಿ ಸಂಖ್ಯೆಗಳು ಅಲ್ಲಗಳೆಯುತ್ತಿವೆ. 2006 ರಲ್ಲಿ ಪಶ್ಚಿಮ ಬಂಗಾಳ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಸಿಪಿಐ(ಎಂ) ಪಕ್ಷವು ಜಾಗ್ರಮ್ ಲೋಕ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಈ ಪ್ರದೇಶದ 7 ವಿಧಾನಸಭಾ ಸ್ಥಾನಗಳ ಪೈಕಿ 6 ರಲ್ಲಿ ಗೆದ್ದಿದೆ.

ಗಾರ್ಬೆಟಾ ಪೂರ್ವ, ಗಾರ್‌ಬೇಟಾ ಪಶ್ಚಿಮ (ಎಸ್.ಸಿ) ಸಲ್‌ಬನಿ, ನಯಾಗ್ರಾಮ್ ಮತ್ತು ಜಾಗ್ರಮ್ ಅವೇ ಈ ಆರು ಕ್ಷೇತ್ರಗಳು. ಸಿಪಿಐ(ಎಂ) ಪಕ್ಷವು ಲಾಲ್‌ಗರ್ ಕೂಡ ಭಾಗವಾಗಿರುವ ಈ ಲೋಕಸಭಾ ಸ್ಥಾನವನ್ನು 1977 ರಿಂದಲೂ ನಿರಂತರವಾಗಿ ಗೆಲ್ಲುತ್ತಾ ಬಂದಿದೆ.

ಪೊಲೀಸ್ ಧಾಳಿಗಳು

ಕಳೆದ ವರ್ಷ ನವೆಂಬರ್ 2 ರಂದು ನಡೆದ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯರ ಹತ್ಯೆ ಯತ್ನದ ನಂತರ ಈ ಪ್ರದೇಶದಲ್ಲಿ ಪಶ್ಚಿಮ ಬಂಗಾಳದ ಪೊಲೀಸರು ಕಾರ್ಯಾಚರಣೆ ನಡೆಸಿದರು. ಆಗ ಮಾವೋವಾದಿ ಬೆಂಬಲಿಗರಿಗೂ ಹಾಗೂ ಪೊಲೀಸರಿಗೂ ಘರ್ಷಣೆಯಾಗಿ ಹಲವು ಜನರು ಗಾಯಗೊಂಡರು.

ಮಾವೋವಾದಿಗಳ ಬೆಂಬಲದೊಂದಿಗೆ ತೃಣಮೂಲ ಕಾಂಗ್ರೆಸ್‌ನ ನಾಯಕ ಛಾತ್ರಧರ್ ಮಹತೋ 'ಪೊಲೀಸ್ ದೌರ್ಜನ್ಯ ಪ್ರತಿರೋಧ ಜನಸಮಿತಿ (ಪಿಎಸ್‌ಬಿಜೆಸಿ)ಯನ್ನು ಸ್ಥಾಪಿಸಿದರು. ಈತ ಮುಖ್ಯಮಂತ್ರಿ ಹತ್ಯಾ ಯತ್ನದ ಪ್ರಧಾನ ಆರೋಪಿಯ ಸಹೋದರ. ಈ ಸಮಿತಿಯ ಕಾರ್ಯಕರ್ತರು ರಸ್ತೆಗಳಲ್ಲಿ ತಡೆ ನಿರ್ಮಿಸಿದರು. ಈ ಪ್ರದೇಶಕ್ಕೆ ಪೊಲೀಸರ ಪ್ರವೇಶವನ್ನು ತಡೆದರು. ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಆಕ್ರಮಣಗಳನ್ನು ನಡೆಸಿದರು.

ಈ ವರ್ಷದ ಲೋಕಸಭಾ ಚುನಾವಣೆಗೆ ಮುಂಚೆಯೇ ಮಾವೋವಾದಿಗಳು ಗಣನೀಯ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಇಟ್ಟುಕೊಂಡು ಈ ಪ್ರದೇಶದ ಗ್ರಾಮಗಳಾದ ಬೋರೋ ಪೆಲಿಯಾ, ಚೋಟೋ ಪೆಲಿಯಾ, ದಾಲಿಪುರ್ ಚೌಕ್ ಮತ್ತು ಖಾಸ್ ಜಂಗಲ್ ಮುಂತಾದವುಗಳಿಗೆ ಪೊಲೀಸರು ಪ್ರವೇಶಿಸದಂತೆ ತಡೆದಿದ್ದರು. ಒಂದು ಪಕ್ಷ ಪ್ರತಿರೋಧ ಸಮಿತಿಯು ಜನರ ಸಾಮೂಹಿಕ ಅಸಂತೃಪ್ತಿಯನ್ನು ಪ್ರತಿನಿಧಿಸುವುದೇ ಆಗಿದ್ದರೆ ಲೋಕಸಭಾ ಚುನಾವಣಾ ಫಲಿತಾಂಶದಲ್ಲಿ ಅದು ಖಂಡಿತ ವ್ಯಕ್ತವಾಗಬೇಕಿತ್ತು. ಪರಿಸ್ಥಿತಿ ಹಾಗಿಲ್ಲ, ಆದರೆ ಪ್ರತಿರೋಧ ಸಮಿತಿಯು ಸಿಪಿಐ(ಎಂ) ವಿರೋಧಿ ಭಾವೋನ್ಮಾದಕ್ಕೆ ತುತ್ತಾಗಿದೆ. ಸಿಪಿಐ(ಎಂ) ಅಭ್ಯರ್ಥಿ ಪುಲಿನ್ ಬಿಹಾರ್ ಬಾಸ್ಕೆ ಅವರಿಗೆ 4, 45, 231 ಮತಗಳು ಈ ಕ್ಷೇತ್ರದಲ್ಲಿ ದೊರೆತಿದೆ. 2,52,886 ಮತ ಗಳಿಸಿದ ಕಾಂಗ್ರೆಸ್ ಅಭ್ಯರ್ಥಿ ಅಮ್ರಿತ್ ಹಂಸದ ಅವರಿಗಿಂತ ಸಿಪಿಐ(ಎಂ) ಅಭ್ಯರ್ಥಿ ಗೌರವಾನ್ವಿತ ಮುನ್ನಡೆ ಗಳಿಸಿರುವುದು ಸ್ಪಷ್ಟವಾಗಿದೆ. ಪುಲಿನ್ ಬಿಹಾರ ಬಾಸ್ಕೆ ಯವರು ಲಾಲ್‌ಗರ್ ಪ್ರದೇಶವನ್ನೂ ಒಳಗೊಳ್ಳುವ ಬಿನಾಪುರ ಕ್ಷೇತ್ರದಲ್ಲೂ ಮುನ್ನಡೆ ಸಾಧಿಸಿದ್ದಾರೆ.


ಭಯದ ಪಾತ್ರ

ಹಾಗಿದ್ದರೆ ಮಾವೋವಾದಿಗಳು ಈ ಪ್ರದೇಶದಲ್ಲಿ ಇಷ್ಟೊಂದು ಪ್ರಭಾವವನ್ನು ಹೇಗೆ ಗಳಿಸಿದರು? ಜಾರ್ಖಂಡ್ ಪಕ್ಷದ ಅಭ್ಯರ್ಥಿ ಚುನಿಬಾಲ ಹಂಸ್ದ ಅವರು ತಮ್ಮನ್ನು ಪ್ರಶ್ನಿಸಿದ ಪತ್ರಕರ್ತರಿಗೆ ಈ ಒಂದು ಸರಳವಾದ ಉತ್ತರ ನೀಡಿದ್ದರು. "ಜನರು ಅವರ ಬಗ್ಗೆ ಭಯಗೊಂಡಿದ್ದಾರೆ."

ಕಳೆದ ವರ್ಷ ಪಿ.ಎಸ್.ಬಿ.ಜೆ.ಸಿ ಯು ಪಶ್ಚಿಮ ಬಂಗಾಳ ಸರ್ಕಾರದ ವಿರುದ್ಧ ಜನರನ್ನು ಒಟ್ಟುಗೂಡಿಸಲು ಆರಂಭಿಸುತ್ತಿದ್ದಂತೆ, ಭಾರತ್ ಜತ್‌ಮಹಿ ಮಾರ್ವಾ ಎಂಬ ಸಾಂಪ್ರದಾಯಿಕ ಆದಿವಾಸಿಗಳ ಸಂಘಟನೆಯು ಮಾವೋವಾದಿ ಹಿಂಸೆಗಳ ವಿರುದ್ಧ ಒಂದು ಬೃಹತ್ ರ‍್ಯಾಲಿಯನ್ನು ಸಂಘಟಿಸಿತ್ತು. ಈ ಸಂಘಟನೆ ಸಹ ಸಿಪಿಐ(ಎಂ) ವಿರೋಧಿ ಸಂಘಟನೆ. ಡಿಸೆಂಬರ್ 19, 2009 ರಂದು ಬುಲಬೇಡ ಪ್ರದೇಶದ ಬೇಲ್ ಪಹಾರಿಯಲ್ಲಿ ಈ ರ‍್ಯಾಲಿ ನಡೆಯಿತು.

ಈ ರ‍್ಯಾಲಿ ನಡೆದ 48 ಗಂಟೆಗಳ ಒಳಗಾಗಿ ಈ ರ‍್ಯಾಲಿಯನ್ನು ಸಂಘಟಿಸಿದ ಸುಧೀರ್ ಮಂಡಲ್ ಎಂಬ ಆದಿವಾಸಿ ಮುಖಂಡನನ್ನು ಗುಂಡಿಕ್ಕಿ ಕೊಲ್ಲಲಾಯಿತು.

● ಪ್ರವೀಣ್ ಸ್ವಾಮಿ



ಬೆಂಗಳೂರಿನಲ್ಲಿ ಈಗ ಕಟ್ಟಡ ಕಾರ್ಮಿಕರಿಗೆ ಕೆಲಸವಿಲ್ಲ

ಕಳೆದ ಆರು ತಿಂಗಳಲ್ಲಿ ಸುಮಾರು ಎರಡೂವರೆ ಲಕ್ಷ ವಲಸೆ ಕಟ್ಟಡ ಕಾರ್ಮಿಕರು ಬೆಂಗಳೂರು ಬಿಟ್ಟಿದ್ದಾರೆ. ಕಾರಣ ಇಲ್ಲೀಗ ಕೆಲಸವಿಲ್ಲ. ಇದು ಅಂತರ್‍ರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಒ)ಯ ದಿಲ್ಲಿ ಪ್ರಾದೇಶಿಕ ಕೇಂದ್ರ ನಡೆಸಿದ ಒಂದು ಅಧ್ಯಯನದಿಂದ ಕಂಡು ಬಂದ ಸಂಗತಿ. ಕಟ್ಟಡ ನಿರ್ಮಾಣ ವಲಯದಲ್ಲಿ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮಗಳನ್ನು ಪರಿಶೀಲಿಸಲು ಈ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿತ್ತು. ದಿಲ್ಲಿ ರಾಜಧಾನಿ ಪ್ರದೇಶ, ಗಾಝಿಯಾಬಾದ್, ಗುರ್‌ಗಾಂವ್, ನೋಯ್ಡಾ ಮತ್ತು ಬೆಂಗಳೂರಿನಲ್ಲಿ ಈ ಅಧ್ಯಯನಗಳನ್ನು ನಡೆಸಲಾಯಿತು.

ದಿಲ್ಲಿ ಸುತ್ತ-ಮುತ್ತ 2010ರಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಆಟಗಳಿಗೆ ಸಿದ್ಧತೆಯ ಹಿನ್ನೆಲೆಯಲ್ಲಿ ಸದ್ಯಕ್ಕೆ ಹೆಚ್ಚಿನ ನಿರ್ಮಾಣ ಚಟುವಟಿಕೆಗಳು ನಡೆಯುತ್ತಿರುವುದರಿಂದ ಆರ್ಥಿಕ ಬಿಕ್ಕಟ್ಟಿನ ನಿಜವಾದ ಪರಿಣಾಮಗಳು ಅಲ್ಲಿ ಕಾಣುತ್ತಿಲ್ಲ. ಆದರೆ ಗಾಝಿಯಾಬಾದ್‌ನಲ್ಲಿ ಇದು ಕಾಣುತ್ತಿದೆ. 400 ಕಾರ್ಮಿಕರನ್ನು ದುಡಿಸಿಕೊಳ್ಳುವ ಜಾಗಗಳಲ್ಲಿ ಕೇವಲ 40 ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿರುವುದು ಕಂಡು ಬಂದಿದೆ.

ಬೆಂಗಳೂರಿನಲ್ಲಿ ಇದು ಸ್ಪಷ್ಟವಾಗಿ ಕಾಣುತ್ತಿದೆ. ಇಲ್ಲಿ ಕಟ್ಟಡ ನಿರ್ಮಾಣ ವಲಯದಲ್ಲಿ ಕೆಲಸ ಅರಸಿಕೊಂಡು ರಾಜ್ಯದ ಉತ್ತರ ಭಾಗಗಳಿಂದ ಅಂದರೆ ಗುಲ್ಬರ್ಗಾ, ರಾಯಚೂರು ಮತ್ತು ಬೀದರಿನಿಂದ ಮಾತ್ರವಲ್ಲ, ಆಂಧ್ರ ಪ್ರದೇಶ, ತಮಿಳುನಾಡು, ರಾಜಸ್ತಾನ, ಒರಿಸ್ಸಾ, ಪಶ್ಚಿಮ ಬಂಗಾಲ, ಉತ್ತರ ಪ್ರದೇಶ, ಬಿಹಾರದಿಂದಲೂ ಬರುತ್ತಿದ್ದರು. ಆದರೆ ನಗರದ ಹೊರವಲಯಗಳಲ್ಲಿ ಇರುವ ಇವರ ಕಾಲನಿಗಳು ಈಗ ಭಣಗುಡುತ್ತಿವೆ ಎಂದು ಅಧ್ಯಯನ ತಿಳಿಸಿದೆ. ಈ ವಿಷಯವನ್ನು ಸಿಐಟಿಯು ಅಧ್ಯಕ್ಷ ಡಾ. ಎಂ.ಕೆ. ಪಂಧೆ ವಿಚಾರ ಸಂಕಿರಣವೊಂದರಲ್ಲಿ ತಿಳಿಸಿದ್ದಾರೆ. ಐಎಲ್‌ಒ ಮಹಾನಿರ್ದೇಶಕರ ಪ್ರಕಾರ ಈ ಆರ್ಥಿಕ ಹಿಂಜರಿತ ಬೇಗನೆ ಕೊನೆಗಾಣುವಂತೆ ಕಾಣುತ್ತಿಲ್ಲ, ಅದು 20 ಕೋಟಿ ಉದ್ಯೋಗಗಳನ್ನು ಇಲ್ಲವಾಗಿಸಬಹುದು.

ಪಿಎಫ್ ಸಾಲಕ್ಕೆ ಒಂದು ಕೋಟಿ ಅರ್ಜಿಗಳು

ಭವಿಷ್ಯ ನಿಧಿ ಅಥವಾ ಪಿಎಫ್ ಎನ್ನುವುದು ಅದರ ಹೆಸರೇ ಸೂಚಿಸುವಂತೆ ಭವಿಷ್ಯದಲ್ಲಿ, ವಯಸ್ಸಾದಾಗ ನೆರವಾಗಲೆಂದು ಮಾಡುವ ಉಳಿತಾಯ. ಆದರೆ ಕೋಟ್ಯಂತರ ಕಾರ್ಮಿಕರು ಸದ್ಯ ಬದುಕುಳಿಯಲಿಕ್ಕಾಗಿಯೇ ಅದನ್ನು ಬಳಸಿಕೊಳ್ಳದೆ ಬೇರೆ ದಾರಿಯಿಲ್ಲ ಎನ್ನುವಂತಾಗಿದೆ. ಇದು ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಒಂದು ದುಷ್ಪರಿಣಾಮ.

ಭವಿಷ್ಯ ನಿಧಿಯಿಂದ ತಾತ್ಕಾಲಿಕ ಹಣಕಾಸು ಅಗತ್ಯಗಳಿಗಾಗಿ ಹಣವನ್ನು ಹಿಂತೆಗೆದುಕೊಳ್ಳುವ ಅವಕಾಶವಿದೆ. ಸಾಮಾನ್ಯವಾಗಿ 10 ಶೇಕಡಾ ಮಂದಿ ಇದನ್ನು ಬಳಸಿಕೊಳ್ಳುತ್ತಾರೆ. ಆದರೆ 2008-09 ರಲ್ಲಿ ಇದು 32 ಶೇಕಡಾಕ್ಕೆ ಏರಿದೆ. ಕೇಂದ್ರೀಯ ನೌಕರರ ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ)ಯ ಆಯುಕ್ತರ ಪ್ರಕಾರ ತಮ್ಮ ಸಂಘಟನೆ ಸುಮಾರು 4.5 ಕೋಟಿ ಸಾರ್ವಜನಿಕ ವಲಯದ ಮತ್ತು ಖಾಸಗೀವಲಯದ ನೌಕರರ ಭವಿಷ್ಯ ನಿಧಿಯನ್ನು ನೋಡಿಕೊಳ್ಳುತ್ತಿದ್ದು, 2008-09ರಲ್ಲಿ ಹಣ ಹಿಂತೆಗದುಕೊಳ್ಳಲು ಅರ್ಜಿ ಹಾಕಿದವರ ಸಂಖ್ಯೆ ಮೊದಲ ಬಾರಿಗೆ ಒಂದು ಕೋಟಿ ದಾಟಿದೆ. ದಿಲ್ಲಿಯಲ್ಲಿ ಸಾಮಾನ್ಯವಾಗಿ ತಿಂಗಳಿಗೆ 30000 ಅರ್ಜಿಗಳು ಬರುತ್ತಿದ್ದರೆ ಈ ವರ್ಷ ಅದು ಒಂದು ಲಕ್ಷವನ್ನು ತಲುಪಿದೆ. ಮುಂಬೈಯಲ್ಲಿಯೂ ಇಂತಹುದೇ ಕಥೆ.

ಬಿಕ್ಕಟ್ಟಿನ ಪರಿಣಾಮಗಳ ಅಧ್ಯಯನ ಮಾಡುತ್ತಿರುವ ದಿಲ್ಲಿಯ ಇನ್ನೊಂದು ಸಂಸ್ಥೆ ಅಬ್ಸರ್ವರ್ ರಿಸರ್ಚ್ ಫೌಂಡೇಶನ್ (ಒಆರ್‌ಎಫ್) "ಸಂಘಟಿತ ವಲಯದಲ್ಲೂ ಈ ಅಲ್ಲೋಲ-ಕಲ್ಲೋಲದ ಪ್ರಭಾವ ಕಾಣ ಬಂದಿದೆ, ಸುಮಾರು 30 ಲಕ್ಷ ಉದ್ಯೋಗಗಳು ನಷ್ಟಗೊಂಡಿವೆ. ಅಸಂಘಟಿತ ವಲಯದಲ್ಲಂತೂ 80ಲಕ್ಷದಿಂದ 1.2 ಕೋಟಿ ಉದ್ಯೋಗ ನಷ್ಟ ಸಂಭವಿಸಿದೆ" ಎಂದಿದೆ.

ಜನರಲ್ ಮೋಟರ್ಸ್‌ನಲ್ಲೂ 4000 ಉದ್ಯೋಗಗಳಿಗೆ ಕುತ್ತು

ಅಮೆರಿಕಾದ ಈ ಪ್ರಖ್ಯಾತ ಕಾರು ತಯಾರಿಕಾ ಸಂಸ್ಥೆಯ ಈಗಿನ ಶೋಚನೀಯ ಸ್ಥಿತಿಯ ಬಗ್ಗೆ ನೀವು ಈಗಾಗಲೇ 'ಜನಶಕ್ತಿ'ಯಲ್ಲಿ ಓದಿದ್ದೀರಿ. ಅದು ಈಗ ಉಳಿದಿರುವ 27000 ನೌಕರರಲ್ಲಿ ಈ ವರ್ಷಾಂತ್ಯದೊಳಗೆ ಇನ್ನೂ ಸುಮಾರು 4000 ಮಂದಿಯನ್ನು ಮನೆಗೆ ಕಳಿಸುವ ಯೋಚನೆಯಲ್ಲಿದೆ. ಕೆಲಸ ಬಿಡುವವರಿಗೆ ಎಂದಿನ ಪ್ಯಾಕೆಜುಗಳನ್ನು ಕೊಡಲಾಗುವುದು ಎಂದು ಮಾಲಕರಿಂದ ಎಲ್ಲಾ ನೌಕರರಿಗೆ ಇ-ಮೇಲ್ ಬಂದಿದೆ.

ಟಾಟಾ ಮೋಟಾರ್ಸ್‌ಗೆ 2505 ಕೋಟಿ ರೂ. ನಷ್ಟ

ಭಾರತದ ದೊಡ್ಡ ಉದ್ದಿಮೆ ಗುಂಪುಗಳಲ್ಲಿ ಪ್ರಮುಖವಾದ ಟಾಟಾ ಗುಂಪಿನ ಟಾಟಾ ಮೋಟರ್ಸ್‌ಗೆ 2008-09ರಲ್ಲಿ 2505 ಕೋಟಿ ರೂ. ನಷ್ಟವಾಗಿದೆ ಎಂದು ಕಳೆದ ಶುಕ್ರವಾರ ಆ ಕಂಪನಿಯ ಮುಖ್ಯ ಹಣಕಾಸು ಅಧಿಕಾರಿ ಪ್ರಕಟಿಸಿದ್ದಾರೆ. ಕಳೆದ ವರ್ಷ 2167 ಕೊಟಿ ರೂ. ಲಾಭ ಮಾಡಿದ್ದ ಈ ಕಂಪನಿ ಕಳೆದ ಎಂಟು ವರ್ಷಗಳಲ್ಲಿ ಮೊದಲ ಬಾರಿ ನಷ್ಟ ಅನುಭವಿಸಿದೆ ಎಂದು ಹೇಳಲಾಗಿದೆ.

ಇದು ಕೂಡಾ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮ. ವಿಶೇಷವಾಗಿ ಜುಲೈ 2008ರಿಂದ ವಾಹನ ಹಣಕಾಸು ಮತ್ತು ಬೇಡಿಕೆ ಕುಸಿದುದೇ ಇದಕ್ಕೆ ಕಾರಣ ಎಂದು ಕಂಪನಿಯ ಅಧಿಕಾರಿಗಳು ಹೇಳಿದ್ದಾರೆ. ಜಾಗ್ವಾರ್-ಲ್ಯಾಂಡ್ ರೋವರ್ ಕಂಪನಿಯನ್ನು ವಹಿಸಿಕೊಂಡ ಟಾಟಾ ಮೋಟರ್ಸ್ ಈಗಾಗಲೇ ಅಲ್ಲಿ ಕೆಲಸ ಮಾಡುತ್ತಿದ್ದ 2000 ಕಾರ್ಮಿಕರ ಲೇಆಫ್ ಮಾಡಿದೆ. ಉಳಿದ 15000 ಕಾರ್ಮಿಕರಲ್ಲಿ ಇನ್ನಷ್ಟು ಮಂದಿಯನ್ನು ಲೇಆಫ್ ಮಾಡುವ ಬಗ್ಗೆ ಅದೀಗ ಯೋಚಿಸುತ್ತಿದೆಯಂತೆ.

ವಾಸ್ತವವಾಗಿ ದೇಶದ ಅತೀ ದೊಡ್ಡ ಸಾರ್ವಜನಿಕ ವಲಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸಾಲ



ನೀಡಿಕೆ ಮೂಲಕ ನೆರವಿಗೆ ಬಂದಿರುವುದು, ಸೇನಾಪಡೆಗಳಿಗೆ ಲ್ಯಾಂಡ್ ರೋವರ್ ವಾಹನಗಳನ್ನು ಖರೀದಿಸುವ ಸಾಧ್ಯತೆ ಮತ್ತು ನಾನೋ ಕಾರುಗಳಿಗೆಂದು ಸಾರ್ವಜನಿಕರಿಂದ ಸಂಗ್ರಹಿಸಿದ 2500ಕೋಟಿ ರೂ. ಠೇವಣಿ ಟಾಟಾ ಗುಂಪನ್ನು ಒಂದು ತೀವ್ರ ಬಿಕ್ಕಟ್ಟಿನಿಂದ ಕಾಪಾಡಿದೆ ಎಂದು ಆರ್ಥಿಕಜ್ಞರೊಬ್ಬರು ಹೇಳಿದ್ದಾರೆ.

ಇದಾದ ಎರಡು ದಿನಗಳಲ್ಲೇ ಟಾಟಾ ಮೋಟರ್ಸ್ ಕಂಪನಿ ತನ್ನ ಹೊಸ ಅತಿ ದುಬಾರಿ(ಸುಮಾರು 65ಲಕ್ಷ ರೂ.) ಜಾಗ್ವಾರ್-ಲ್ಯಾಂಡ್ ರೋವರ್ ಕಾರನ್ನು ಮಾರಾಟಕ್ಕೆ ಬಿಡುಗಡೆ ಮಾಡಿದೆ!

ಇದೇ ಗುಂಪಿನ ಇನ್ನೊಂದು ಕಂಪನಿ ಟಾಟಾ ಸ್ಟೀಲ್ ಮೇಲೆ ಕೂಡಾ ಜಾಗತಿಕ ಹಿಂಜರಿತದ ಪರಿಣಾಮ ಬಿದ್ದಿದೆ. ಅದಕ್ಕೆ ನಷ್ಟ ಆಗಿರದಿದ್ದರೂ ಲಾಭದ ಪ್ರಮಾಣದಲ್ಲಿ 61 ಶೇ. ಇಳಿಕೆಯಾಗಿದೆ ಎಂದು ಹೇಳಿದೆ. ಯುರೋಪಿಯನ್ ಮಾರುಕಟ್ಟೆಯಲ್ಲಿ ಉಕ್ಕಿಗೆ ಬೇಡಿಕೆ ಇಳಿದಿರುವುದೇ ಇದಕ್ಕೆ ಮುಖ್ಯ ಕಾರಣವಂತೆ. ಇದರಿಂದ ಈ ಕಂಪನಿಯ ಯುರೋಪಿಯನ್ ಸ್ಥಾವರಗಳಲ್ಲಿ ಸುಮಾರು 2000 ಉದ್ಯೋಗಗಳಿಗೆ ಸಂಚಕಾರ ಬರಬಹುದು ಎಂದು ಕಂಪನಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಯುರೋಪಿನಲ್ಲಿ ನಿರುದ್ಯೋಗ ಪ್ರಮಾಣ ಹೆಚ್ಚಳ ಭೀತಿ

ಒಂದು ದಶಕದ ಹಿಂದೆ ಯುರೋಪಿಯನ್ ಒಕ್ಕೂಟ ರಚನೆಗೊಂಡ ಮೇಲೆ ಮೊದಲ ಬಾರಿಗೆ ಈ 16 ದೇಶಗಳ ಆರ್ಥಿಕ ವಲಯದಲ್ಲಿ ಹಣದಿಳಿತ ಒಂದು ದೊಡ್ಡ ಸಮಸ್ಯೆಯಾಗಿ ಕಾಡಲಾರಂಭಿಸಿದೆ. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಹಣದುಬ್ಬರ ಜನಗಳ ಮೇಲೆ ಹೊರೆ ಹಾಕುವಂತೆ ಹಣದಿಳಿತವೂ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಬಹಳ ಸಮಯ ಇದು ಮುಂದುವರೆದರೆ ಒಟ್ಟು ಆರ್ಥಿಕ ವ್ಯವಸ್ಥೆ ಮುದುಡಿಕೊಳ್ಳುತ್ತದೆ, ಆರ್ಥಿಕ ಚಟುವಟಿಕೆಗಳು ನಿಧಾನಗೊಳ್ಳುತ್ತವೆ, ಆರ್ಥಿಕದಲ್ಲಿನ ಉತ್ಪಾದನಾ ಸಾಮರ್ಥ್ಯದ ಪೂರ್ಣ ಬಳಕೆ ಸಾಧ್ಯವಾಗುವುದಿಲ್ಲ. ಇದರಿಂದಾಗಿ ನಿರುದ್ಯೋಗದ ಪ್ರಮಾಣ ಹೆಚ್ಚುತ್ತದೆ. ಯುರೋಪಿನಲ್ಲಿ ಈಗ ಇಂತಹ ಭೀತಿ ಉಂಟಾಗಿದೆ.

ಜಾಗತಿಕ ಆರ್ಥಿಕದಲ್ಲಿ 2.9ಶೇ. ಮುದುಡಿಕೆ-ವಿಶ್ವಬ್ಯಾಂಕಿನ ಅಂದಾಜು

2007ರಲ್ಲಿ 8.1ಶೇ. ಮತ್ತು 2008ರಲ್ಲಿ 5.9ಶೇ. ದರದಲ್ಲಿ ಬೆಳೆದ ಅಭಿವೃದ್ಧಿಶೀಲ ದೇಶಗಳ ಆರ್ಥಿಕ 2009ರಲ್ಲಿ ಕೇವಲ 1.2ಶೇ. ದರದಲ್ಲಿ ಬೆಳೆಯಬಹುದು ಎಂದು ವಿಶ್ವಬ್ಯಾಂಕ್ ಅಂದಾಜು ಮಾಡಿದೆ. ಅದರಲ್ಲಿ ಭಾರತ ಮತ್ತು ಚೀನಾವನ್ನು ಬಿಟ್ಟರೆ ಉಳಿದ ಅಭಿವೃದ್ಧಿಶೀಲ ದೇಶಗಳ ಆರ್ಥಿಕ ವಾಸ್ತವವಾಗಿ 1.6ಶೇ.ದಷ್ಟು ಇಳಿಕೆ ಕಾಣಬಹುದು ಎಂದಿರುವ ಈ ಅಂದಾಜು ಒಟ್ಟಾರೆಯಾಗಿ ಜಾಗತಿಕ ಆರ್ಥಿಕವು 2.9ಶೇ.ದಷ್ಟು ಮುದುಡಲಿದೆ ಎಂದಿದೆ. ಈ ಹಿಂದೆ ಅದು 1.7ಶೇ.ದಷ್ಟು ಮುದುಡಲಿದೆ ಎಂದಿತ್ತು.

ಭಾರತ ಮತ್ತು ಚೀನಾದಲ್ಲಿ ಈ ನಿಧಾನಗತಿಯ ದುಷ್ಪರಿಣಾಮ ಇತರರಿಗೆ ಹೋಲಿಸಿದರೆ ಕಡಿಮೆಯಿರಲು ಅವುಗಳ ಆರ್ಥಿಕದ ಮೇಲೆ ಸರ್ಕಾರದ ಒಡೆತನದ ಉದ್ದಿಮೆಗಳ ಪ್ರಮಾಣ ಹೆಚ್ಚಿರುವುದೇ ಕಾರಣವಿರಬೇಕು.

2010ರ ವೇಳೆಗೆ ಆರ್ಥಿಕ ಹಿಂಜರಿತ ಇಲ್ಲವಾಗಿ ಆರ್ಥಿಕ ಬೆಳವಣಿಗೆ ಮತ್ತೆ ಏರುಮುಖಗೊಳ್ಳುತ್ತದೆ ಎಂಬುದು ವಿಶ್ವಬ್ಯಾಂಕ್ ನಿರೀಕ್ಷೆ.

ಜಾಗತಿಕ ಹಿಂಜರಿತ ಕೊನೆಗೊಳ್ಳುತ್ತಿದೆಯೇ ?

ಜಗತ್ತಿನ 8 ಅತಿ ಶ್ರೀಮಂತ ದೇಶಗಳ ಹಣಕಾಸು ಮಂತ್ರಿಗಳಂತೂ ಈ ಬಗ್ಗೆ ಖಡಾಖಂಡಿತವಾಗಿ ಹೇಳುವ ಸ್ಥಿತಿಯಲ್ಲಿಲ್ಲ. ಇಟಲಿಯಲ್ಲಿ ಸಭೆ ಸೇರಿದ್ದ ಜಿ-8 ದೇಶಗಳ ಹಣಕಾಸು ಮಂತ್ರಿಗಳ ಸಭೆಯ ನಂತರ ಜೂನ್ 14ರಂದು ಹೊರಡಿಸಿದ ಹೇಳಿಕೆ "ನಮ್ಮ ಆರ್ಥಿಕಗಳು, ಶೇರು ಮಾರುಕಟ್ಟೆಗಳು ಸ್ಥಿರಗೊಳ್ಳುವ ಲಕ್ಷಣಗಳಿವೆ" ಎಂದರೂ ಪರಿಸ್ಥಿತಿ ಇನ್ನೂ ಅಸ್ಥಿರವಾಗಿದೆ, ಹಣಕಾಸು ಮತ್ತು ಆರ್ಥಿಕ ಸ್ಥಿರತೆಗೆ ಸಂಚಕಾರಗಳು ಇನ್ನೂ ಉಳಿದಿವೆ ಎಂದೂ ಆ ಹೇಳಿಕೆ ಅಭಿಪ್ರಾಯ ಪಟ್ಟಿದೆ. ಒಂದೆಡೆ ಅಮೆರಿಕ ಮತ್ತು ಬ್ರಿಟನ್‌ನಲ್ಲಿ ಚೇತರಿಕೆ ಇನ್ನೂ ಆರಂಭವಾಗಿಲ್ಲ ಎಂಬ ಭಾವನೆಯಿದ್ದರೆ, ಜರ್ಮನಿ ಮತ್ತು ಫ್ರಾನ್ಸಿನಲ್ಲಿ ಹೆಚ್ಚಿನ ನಿರೀಕ್ಷೆಯಿದೆಯಂತೆ.

ಅಮೇರಿಕ ಸಂಯುಕ್ತ ಸಂಸ್ಥಾನದಲ್ಲಿ

1930 ರ ಮಹಾ ಕುಸಿತದಲ್ಲಿ ಏನಾಯ್ತು?

ಶರತ್‌ಚಂದ್ರ

ಅರ್ಕಾನ್ಸಸ್ ಪ್ರಾಂತ್ಯದ ಒಂದು ಪಟ್ಟಣ ಇಂಗ್ಲೆಂಡ್-ಜನವರಿ 3, 1931 : ಹಿಂದಿನ ವರ್ಷದ ದೀರ್ಘ ಬರದಿಂದ ಜರ್ಜರಿತರಾದ 500 ಕ್ಕೂ ಹೆಚ್ಚು ರೈತರು ಈ ಪಟ್ಟಣದ ಕೇಂದ್ರ ಸ್ಥಳಕ್ಕೆ ದಾಪುಗಾಲು ಹಾಕಿ ನಡೆದರು. ಅವರಲ್ಲಿ ಹೆಚ್ಚಿನವರು ಬಿಳಿಯರು. ಕೆಲವರು ಕರಿಯರು. ಹಲವರ ಬಳಿ ಗನ್ನುಗಳು ಇದ್ದವು. ..ನಾವು ಮತ್ತು ನಮ್ಮ ಮಕ್ಕಳು ಹಸಿದಿದ್ದೇವೆ. ನಮಗೆ ಮುಫತ್ತಾಗಿ ಏನಾದರೂ ಆಹಾರ ಕೊಟ್ಟರೆ ಸರಿ. ಇಲ್ಲದಿದ್ದರೆ ಈ ಅಂಗಡಿಗಳಿಂದ ನಾವು ಅದನ್ನು ತೆಗೆದುಕೊಂಡು ಹೋಗ್ತೇವೆ ಎಂದು ಅವರು ಅಂಗಡಿಗಳನ್ನು ಸುತ್ತುವರೆದು ಎಚ್ಚರಿಕೆ ಕೊಟ್ಟರು.

ಚಿಕಾಗೊ ಏಪ್ರಿಲ್ 1, 1932

500 ಶಾಲಾ ಮಕ್ಕಳು ಮೆರವಣಿಗೆಯಲ್ಲಿ ನಗರದ ಕೇಂದ್ರಕ್ಕೆ ನಡೆದು ಬಂದರು. ಅವರ ...ರಿ ಬಟ್ಟೆ, ಹಸಿವಿನಿಂದ ಕಂದಿದ ಮುಖಗಳು ಜನರ ಗಮನ ಸೆಳೆದವು. ಶಿಕ್ಷಣ ಬೋರ್ಡಿನ ಆಫೀಸಿನ ಮುಂದೆ ಧರಣಿ ಕೂತರು. ಸ್ಕೂಲಲ್ಲಿ ಊಟ ಕೊಡಬೇಕು ಎಂಬುದು ಅವರ ಬೇಡಿಕೆ ಆಗಿತ್ತು.

ವಿಸ್ಕೊನ್ಸಿನ್, 1932

ತೆರಿಗೆ ಮತ್ತು ಸಾಲ ಕೊಡಲಾರದ ರೈತರ ಮನೆ ಹೊಲಗಳನ್ನು ಹರಾಜು ಹಾಕುವ ಅಧಿಕಾರಿಗಳ ಕಾರ್ಯಾಚರಣೆಯಿಂದ ಈ ಪ್ರದೇಶದಲ್ಲಿ ಹಲವು ತೀವ್ರ ಘರ್ಷಣೆಗಳಗಿವೆ. ಹಲವು ಕಡೆ ರೈತರು ಒಟ್ಟು ಸೇರಿ ಹರಾಜು ಹಾಕಲು ಬಂದ ಅಧಿಕಾರಿಗಳನ್ನು ಓಡಿಸುವುದು ಸಾಮಾನ್ಯವಾಗಿದೆ... ...ಅದೇ ವಿಸ್ಕೊನ್ಸಿನ್‌ನ ಎಲ್ಕ್‌ಹೋರ್ನ್‌ನ ಮ್ಯಾಕ್ಸ್ ಸಿಕೊನ್ ಮನೆಯಲ್ಲಿ ಸಹ ಈ ವರೆಗೆ ನಡೆದದ್ದು. ಆದರೆ ಈಗ ಕಥೆ ಬೇರೆಯದೇ ಆಯಿತು. ಹಲವು ತಿಂಗಳುಗಳ ಹಿಂದೆ ಮ್ಯಾಕ್ಸ್‌ನ ಮನೆ-ಹೊಲ ಎರಡನ್ನೂ ಅಧಿಕಾರಿಗಳು ಹರಾಜು ಹಾಕಿ ಯಾವನೋ ಒಬ್ಬ ...ಂಡುಕೊಂಡಿದ್ದ. ಆದರೆ ಮ್ಯಾಕ್ಸ್ ಕೊಂಡುಕೊಂಡಾತನ್ನು ಅಥವಾ ಅಧಿಕಾರಿಗಳನ್ನು ಅವನ ಮನೆ-ಹೊಲ ಹತ್ತಿರ ಬರಲೂ ಬಿಡುತ್ತಿರಲಿಲ್ಲ. ತನ್ನ ಶಾಟ್ ಗನ್ನಿನಿಂದ ಹೆದರಿಸುತ್ತಿದ್ದ. ಆದರೆ ಇಂದು ಅಧಿಕಾರಿಗಳು ರೈಫಲ್, ಮಶಿನ್ ಗನ್, ಅಶ್ರುವಾಯುಗಳಿಂದ ಸಜ್ಜಿತರಾದ ಪೋಲಿಸರ ಜತೆ ಬಂದರು. ಆದರೂ ಮ್ಯಾಕ್ಸ್ ಜಗ್ಗಲಿಲ್ಲ. .. ಈಗ ಮ್ಯಾಕ್ಸ್ ಜೈಲಿನಲ್ಲಿ ಇದ್ದಾನೆ. ಅವನ ಹೆಂಡತಿ ಮಕ್ಕಳು ಆಸ್ಪತ್ರೆಯಲ್ಲಿ. ಮ್ಯಾಕ್ಸ್ ಪುಂಡ ಪೋಕರಿ ಏನಲ್ಲ. ಅವನನ್ನು ಇತ್ತೀಚೆಗಷ್ಟೆ ಜೂರಿಯಾಗಿ ಆಯ್ಕೆ ಮಾಡಿದ್ದರು. ಅಂತಹ ಮ್ಯಾಕ್ಸ್ ಅಧಿಕಾರಿಗಳ ವಿರುದ್ಧ ತಿರುಗಿ ಬೀಳುವ ಪರಿಸ್ಥಿತಿ ಬಂತು ಎಂದರೆ ಅಧಿಕಾರಿಗಳಿಗೆ ಈ ಪ್ರಾಂತ್ಯದಲ್ಲಿ ಏನು ಕಾದಿದೆ ಎಂಬುದು ನಡುಕ ತರುತ್ತಿದೆ.

ಮಹಾಕುಸಿತದ ಸಂದರ್ಭದಲ್ಲಿ - ವಲಸೆ ಬಂದ ರೈತರು



ಸಿಯಾಟಲ್ ಫೆಬ್ರುವರಿ 16, 1933

ಐದು ಸಾವಿರ ನಿರುದ್ಯೋಗಿಗಳು ಉದ್ಯೋಗ ಕೊಡುವಂತೆ ಒತ್ತಾಯಿಸಿ ಜಿಲ್ಲಾ ಆಡಳಿತದ ನಗರ ಆಫೀಸಿಗೆ ಮುತ್ತಿಗೆ ಹಾಕಿ ಅದನ್ನು ತಮ್ಮ ವಶದಲ್ಲಿ ಇಟ್ಟುಕೊಂಡಿದ್ದರು. ಅವರನ್ನು ತೆರವು ಮಾಡಲು ರಿಸರ್ವ ಪೋಲಿಸು ಎರಡು ದಿನಗಳ ಕಾಲ ಘರ್ಷಣೆ ಮಾಡಬೇಕಾಯಿತು.



ಮಹಾಕುಸಿತದ ಸಂದರ್ಭದಲ್ಲಿ - ವಲಸೆ ಬಂದ ತಾಯಿ, ಮಗು

ಅಪ್ಪಾಲಾಷಿಯಾ, 1932

ನಾನು ಸ್ಥಳೀಯ ಸ್ಟೋರ್ ಒಂದಕ್ಕೆ ನುಗ್ಗಿದೆ. 24 ಪೌಂಡ್ ಹಿಟ್ಟಿನ ಚೀಲವನ್ನು ನನ್ನ ಮಗನಿಗೆ ಹೊರಗೆ ತೆಗೆದುಕೊಂಡು ಹೋಗಿ ಇಡುವಂತೆ ಹೇಳಿದೆ. ಒಂದು ಚೀಲ ಸಕ್ಕರೆ ನಾನೇ ಪ್ಯಾಕ್ ಮಾಡಿ ಹಿಡಿದುಕೊಂಡು ಅಂಗಡಿಯ ಮಾಲಕ ಮಾರ್ಟಿನ್ ಗೆ 'ಈಗ ನನ್ನ ಮಕ್ಕಳು ಹಸಿದಿದ್ದಾರೆ. ಅವರಿಗೆ ಮೊದಲು ಹೊಟ್ಟೆಗೆ ಹಾಕಬೇಕು.. ನಾನು ಮೂರು ತಿಂಗಳ ನಂತರ ಬರುತ್ತೇನೆ. ಆಗ ಇದರ ದುಡ್ಡು ಕೊಡುತ್ತೇನೆ. ನಿನಗೆ ಚಿಂತೆ ಬೇಡ' ಎಂದು ಹೇಳಿದೆ. ಮಾರ್ಟಿನ್ ಗಲಾಟೆ ಮಾಡಿದ. ನಾನು ಆಗ ಗುಡ್ಡ ಗಾಡು ಪ್ರದೇಶದಲ್ಲಿ ಮಿಡ್ ವೈಫ್ ಆಗಿ ಕೆಲಸ ಮಾಡುತ್ತಿದ್ದರಿಂದ ನನ್ನ ಬಳಿ ಲೈಸೆನ್ಸ್ ಇದ್ದ ಪಿಸ್ತೂಲು ಇತ್ತು. ನನ್ನ ಪಿಸ್ತೂಲು ಬ್ಯಾಗಿನಿಂದ ಎಳೆದು ಹೇಳಿದೆ ' ಮಾರ್ಟಿನ್..ನನ್ನ ಮಕ್ಕಳ ಊಟ ಕಸಿಯಬೇಡ. ನಾಳೆ ನನ್ನನ್ನು ಇಲೆಕ್ಟ್ರಿಕ್ ಕುರ್ಚಿಗೆ ತಳ್ಳಿದರೂ ಚಿಂತೆಯಿಲ್ಲ. ಆದರೆ ಈಗ ನಿನ್ನ ಬುರುಡೆಯೊಳಗೆ ಆರು ಗುಂಡು ಇಳಿಸುತ್ತೇನೆ' ಮಾರ್ಟಿನ್ ದಂಗಾಗಿ ನೋಡುತ್ತಿದ್ದ ಹಾಗೇ ಸೀದಾ ಮನೆಗೆ ಬಂದೆ. ನನ್ನ ಹಸಿದಿದ್ದ ಏಳು ಮಕ್ಕಳು ಬ್ರೆಡ್ ಮಾಡುವರೆಗೆ ಕಾಯಲು ತಯಾರಿರಲಿಲ್ಲ. ಅವರು ಹಸಿ ಹಿಟ್ಟನ್ನೇ ಮುಕ್ಕಲು ಆರಂಭಿಸಿದ್ದರು. - ಹೀಗಂತ ಆ ಮೇಲೆ ಕಾರ್ಮಿಕರ ಚಳುವಳಿಯ ನಾಯಕಳಾದ ಮೊಲ್ಲಿ ಜ್ಯಾಕ್ಸನ್ ತನ್ನದೇ ಅನುಭವವನ್ನು ಹೇಳಿಕೊಂಡಳು.

ಇವು 1930 ರ ದಶಕದ 'ಮಹಾ ಕುಸಿತ' ಎಂದು ಕರೆಯಲಾಗುವ ತೀವ್ರ ಆರ್ಥಿಕ ಬಿಕ್ಕಟ್ಟಿನ ಸಮಯದ ಅಮೆರಿಕದ ಹಲವು ಸ್ಯಾಂಪಲ್ಲುಗಳು. ಕೊನೆಯದು ಬಿಟ್ಟು ಉಳಿದವು ಆಗಿನ ಪತ್ರಿಕಾ ವರದಿಗಳು.

ಕರಿಯ ಮಂಗಳವಾರ

1930 ರ ಮಹಾಕುಸಿತದ ಆರಂಭ 'ಕರಿಯ ಮಂಗಳವಾರ' ಎಂದು ಕರೆಯಲಾಗುವ ಅಕ್ಟೋಬರ್ 29, 1929 ಎಂದು ಪರಿಗಣಿಸಲಾಗುತ್ತದೆ. 1920 ರ ದಶಕದ ತುಂಬಾ ಬಲೂನಿನಂತೆ ಊದುತ್ತಿದ್ದ ಶೇರು ಮಾರುಕಟ್ಟೆ ಬೆಲೆಗಳು ಅಂದು ಕುಸಿದಿತ್ತು. 1929 ನವಂಬರ್ ಮಧ್ಯದ ಹೊತ್ತಿಗೆ ಜನ ಮತ್ತು ಕಂಪನಿಗಳು 30 ಶತಕೋಟಿ ಡಾಲರುಗಳಷ್ಟು ಹಣವನ್ನು ಶೇರು ಮಾರುಕಟ್ಟೆಯಲ್ಲಿ ಕಳೆದುಕೊಂಡಿದ್ದರು. ಆದರೆ ಆರ್ಥಿಕ ಹಿಂಜರಿತ ಕೆಲವು ತಿಂಗಳುಗಳ ಮೊದಲೇ ಆರಂಭವಾಗಿತ್ತು.

ಶೇರು ಮಾರುಕಟ್ಟೆ ಕುಸಿತದ ಬೆನ್ನ ಹಿಂದೆ ಬ್ಯಾಂಕುಗಳು ದೀವಾಳಿ ಆಗತೊಡಗಿದವು. ಬ್ಯಾಂಕುಗಳು ದೀವಾಳಿಯಿಂದ ಉಂಟಾದ ಹಣಕಾಸಿನ ಮುಗ್ಗಟ್ಟಿನಿಂದ ಕೈಗಾರಿಕೆಗಳು, ವಾಣಿಜ್ಯ ಕಂಪನಿಗಳು ನಷ್ಟ ಎದುರಿಸಲು ಆರಂಭಿಸಿಡವು. ಕೆಲವು ಸಂಬಳ-ಉದ್ಯೋಗ ಕಡಿತ ಮಾಡಿ ಮುಂದುವರೆಯಲು ನೋಡಿದರೆ, ಕೆಲವು ಮುಚ್ಚಿದವು. ಒಟ್ಟಾರೆಯಾಗಿ ನಿರುದ್ಯೋಗ ವೇಗವಾಗಿ ಏರಲು ಆರಂಭವಾಯಿತು. ನಿರುದ್ಯೋಗ ಹೆಚ್ಚಳದಿಂದ ಸರಕುಗಳಿಗೆ ಬೇಡಿಕೆ ಕಡಿಮೆ ಆಯಿತು. ಉತ್ಪಾದನೆಯಾದ ಸರಕುಗಳು ಮಾರಾಟವಾಗದೆ ಉಳಿದವು. ಕಾರ್ಖಾನೆಗಳು ಉತ್ಪಾದನೆ ಕಡಿತ ಮಾಡಿದವು. ಇದರಿಂದ ಇನ್ನಷ್ಟು ಉದ್ಯೋಗ ನಷ್ಟವಾದವು. ಹೀಗೆ ಬಿಕ್ಕಟ್ಟು ತೀವ್ರವಾಗುತ್ತಾ ಹೋಯಿತು. ಕುಸಿತ ಮಹಾ ಕುಸಿತವಾಯಿತು. ಆಹಾರ ದಂಗೆಗಳು ದೇಶದ ತುಂಬಾ ಹರಡಿದವು.



ಮಹಾಕುಸಿತದ ಸಂದರ್ಭದಲ್ಲಿ - ಉಚಿತ ಕಾಫಿಗಾಗಿ ಕ್ಯೂ ನಿಂತವರು

ರೈಲ್ ರೋಡಿಂಗ್

ಕೃಷಿಯಲ್ಲೂ 1930 ರ ಬರ ತೀವ್ರ ಬಿಕ್ಕಟ್ಟು ತಂದೊಡ್ಡಿತು. ಹಣಕಾಸಿನ ಮುಗ್ಗಟ್ಟು ರೈತರಿಗೂ ತಟ್ಟಿತು. ಕೃಷಿ ಉತ್ಪನ್ನಗಳ ಬೆಲೆಗಳು ಕುಸಿದವು. ಆದಾಯವೇ ಇಲ್ಲದ ರೈತ ಸಾಲ ತೆರಿಗೆ ಕಟ್ಟಲು ಹಣ ಎಲ್ಲಿಂದ ತಂದಾನು. ಸಾಲ ತೆರಿಗೆ ವಸೂಲಿ ಮಾಡಲು ಅಧಿಕಾರಿಗಳು ರೈತನ ಮನೆ-ಹೊಲ ದೊಡ್ಡ ಪ್ರಮಾಣದಲ್ಲಿ ಹರಾಜು ಮಾಡಲಾರಂಭಿಸಿದರು. ಮನೆ-ಹೊಲ ಕಳೆದುಕೊಂಡ ರೈತರು ನಗರ ಪ್ರದೇಶಗಳಿಗೆ ವಲಸೆ ಹೋಗಲಾರಂಭಿಸಿದರು. ನಗರ ಪ್ರದೇಶಗಳಲ್ಲಿ ಪರಿಸ್ಥಿತಿ ಆಗಲೇ ಹದಗೆಟ್ಟಿತ್ತು. ಅಮೆರಿಕದ ಮೂಲೆ ಮೂಲೆಯಲ್ಲೂ ಎಲ್ಲೆಲ್ಲೂ ಉದ್ಯೋಗ ಆಹಾರ ಹುಡುಕುತ್ತಾ ಅಲೆಯುವ ಜನಗಳೇ ಕಂಡು ಬಂದರು. ರೈಲುಗಳಲ್ಲಿ ಈ ರೀತಿ ಇಡೀ ದೇಶ ಸುತ್ತುವ ಜನರ ದಂಡೇ ಕಂಡು ಬಂತು. ರೈಲಿನಲ್ಲಿ ಪ್ರತೀ ನಗರದಲ್ಲಿ ಇಳಿಯುವುದು. ಉದ್ಯೋಗ ಸಿಗುತ್ತಾ ಅಂತ ಪ್ರಯ್ರತ್ನಿಸುವುದು. ಇಲ್ಲದಿದ್ದರ ಪುನಃ ರೈಲು ಹತ್ತುವುದು. ಈ ವಿಶೇಷ ಪರಿಸ್ಥಿತಿ ವಿವರಿಸಲು 'ರೈಲ್ ರೋಡಿಂಗ್' ಎಂಬ ಹೊಸ ಶಬ್ದ ಹುಟ್ಟಿಕೊಂಡಿತು.

ಅಮೆರಿಕ ಮಾತ್ರವಲ್ಲ ಹಲವು ದೇಶಗಳ ಕೃಷಿ, ಕೈಗಾರಿಕೆ, ವಾಣಿಜ್ಯ ಕುಸಿದಂತೆ ಅಂತರ್ರಾಷ್ಟ್ರೀಯ ವ್ಯಾಪಾರ ಸಹ ಕುಸಿಯಿತು. ಇದರಿಂದ ಕೃಷಿಯಂತೆ ಗಣಿ ಮುಂತಾದ ಪ್ರಾಥಮಿಕ ಸರಕುಗಳ ಬೇಡಿಕೆ ಮತ್ತು ಬೆಲೆಗಳೂ ಕುಸಿದವು. ನಿರುದ್ಯೋಗ ವ್ಯಾಪಕವಾಯಿತು. 1933 ರ ಹೊತ್ತಿಗೆ ಅಮೆರಿಕದಲ್ಲಿ ಮತ್ತು ಜಗತ್ತಿನಲ್ಲಿ ಮಹಾ ಕುಸಿತ ಪಾತಾಳ ಕಂಡಿತ್ತು. ಸುಮಾರು ಒಂದು ವರೆ ಕೋಟಿ ಜನ (ನಾಲ್ಕು ಅಮೆರಿಕನ್ನರಲ್ಲಿ ಒಬ್ಬ) ನಿರುದ್ಯೋಗಿಗಳು. ಕುಸಿತದ ಮೊದಲು ನಿರುದ್ಯೋಗಿಗಳ ಸಂಖ್ಯೆ 15 ಲಕ್ಷ ಇತ್ತು ಅಂದರೆ ನಿರುದ್ಯೋಗ ಹತ್ತು ಪಟ್ಟು ಆಯಿತು. ಹತ್ತು ಲಕ್ಷ ಜನ ಹೊಲ ಕಳೆದುಕೊಂಡ್ತರೆ, 20 ಲಕ್ಷ ಜನ ಮನೆ ಕಳೆದುಕೊಂಡು 'ರೈಲ್ ರೋಡಿಂಗ್' ಮಾಡುತ್ತಿದ್ದರು. ಅಮೆರಿಕನ್ ಕುಟುಂಬಗಳ ಸರಾಸರಿ ಆದಾಯ ಶೇ. 40 ರಷ್ಟು ಕಡಿಮೆ ಆಗಿತ್ತು. ಕೈಗಾರಿಕಾ ಉತ್ಪಾದನೆ ಅರ್ಧಕ್ಕೆ ಇಳಿದಿತ್ತು. ಕೃಷಿ ಬೆಲೆಗಳು ಶೆ. 60 ರಷ್ಟು ಕುಸಿದವು. ಜಿಡಿಪಿ ಶೇ. 30 ರಷ್ಟು ಕಡಿಮೆ ಆಗಿತ್ತು. ಶೇರು ಮಾರುಕಟ್ಟೆ ಬೆಲೆ ಶೇ.90 ರಷ್ಟು ಇಳಿದಿತ್ತು. ಅಂತರ್ರಾಷ್ಟ್ರೀಯ ವ್ಯಾಪಾರ ಮೂರನೇ ಎರಡರಷ್ಟು ಕುಸಿಯಿತು.

ಮಹಾಕುಸಿತ 1933 ರಲ್ಲಿ ಅತ್ಯಂತ ತೀವ್ರವಾಗಿದ್ದರೂ ಹೆಚ್ಚು ಕಡಿಮೆ ಇಡೀ ದಶಕದ ಕಾಲ ಜನರನ್ನು ಬಾಧಿಸಿತು. ಮಹಾಕುಸಿತ ಕೆಲವು ದೇಶಗಳಲ್ಲಿ ಎರಡನೇ ಮಹಾಯುದ್ಧದ 'ಯುದ್ಧ ಆರ್ಥಿಕ'ದೊಂದಿಗೆ ಕೊನೆಯಾದರೆ, ಹಲವು ದೇಶಗಳಲ್ಲಿ ಇನ್ನೂ ಹಲವು ವರ್ಷ ಮುಂದುವರೆಯಿತು. ಉದಾಹರಣೆಗೆ 'ಯುದ್ಧ ಆರ್ಥಿಕ'ದ ಸುಗ್ಗಿ ಕಂಡ ಅಮೆರಿಕದಲ್ಲಿ 1941 ರಲ್ಲಿ ಮಾತ್ರವೇ ನಿರುದ್ಯೋಗದ ಪ್ರಮಾಣ ಕುಸಿತದ ಮೊದಲ (ಅಂದರೆ ಶೇ. 10 ಕ್ಕಿಂತ ಕಡಿಮೆ) ಮಟ್ಟಕ್ಕೆ ಬಂದಿದ್ದು. ○

ಜಗದಗಲ

ಶರತ್‌ಚಂದ್ರ

ಐಎಂಎಫ್, ವಿಶ್ವಬ್ಯಾಂಕ್ ಸುಧಾರಣೆಗೆ ಬ್ರಿಕ್ ಶೃಂಗಸಭೆ ಕರ


ಬ್ರೆಜಿಲ್, ರಶ್ಯಾ, ಇಂಡಿಯಾ ಮತ್ತು ಚೀನಾಗಳ ಗುಂಪನ್ನು ಬ್ರಿಕ್ (BRIC) ದೇಶಗಳೆಂದು ಕರೆಯುತ್ತಾರೆ. ಇತ್ತೀಚೆಗೆ ರಶ್ಯಾದ ಉರ್‍ಥಾಲ್ ಪ್ರದೇಶದ ಯೆಕಾಟೆರಿಂಗ್‌ಬರ್ಗ್ ನಗರದಲ್ಲಿ ನಡೆದ ಬ್ರಿಕ್ ದೇಶಗಳ ಮುಖ್ಯಸ್ಥರ ಮೊದಲ ಶೃಂಗಸಭೆ ಇಡೀ ಜಗತ್ತಿನ ಗಮನ ಸೆಳೆಯಿತು. ಎಲ್ಲಾ ನಾಲ್ಕು ದೇಶಗಳ ಮುಖ್ಯಸ್ಥರು (ರಶ್ಯದ ಅಧ್ಯಕ್ಷ ಮೆಡ್ವೆಡೆವ್, ಬ್ರೆಜಿಲ್ ಅಧ್ಯಕ್ಷ ಲುಲಾ, ಚೀನಾದ ಅಧ್ಯಕ್ಷ ಹು ಜಿಂತಾವೋ ಮತ್ತು ಭಾರತದ ಪ್ರಧಾನಿ ಮನಮೋಹನ್ ಸಿಂಗ್) ಈ ಶೃಂಗಸಭೆಯಲ್ಲಿ ಭಾಗವಹಿಸಿದರು. ಇವರು ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿರುವ ಜಗತ್ತಿನ ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಹುಡುಕುವಲ್ಲಿ ಮತ್ತು ಅವರ ಪುನರ್ರಚನೆಯಲ್ಲಿ ವಿಕಾಸ ಶೀಲ ದೇಶಗಳಿಗೆ ಸಮಾನ ಪಾತ್ರ ದೊರೆಯಬೇಕೆಂದು ಕರೆ ನೀಡಿದರು.

ಜಿ-7 ಎಂಬ ಶ್ರೀಮಂತ ದೇಶಗಳ ಗುಂಪು ಮತ್ತು ಅವರ ನಾಯಕತ್ವದ ಜಿ-20 ಆರ್ಥಿಕ ಕುಸಿತ ಎದುರಿಸುವಲ್ಲಿ ಯಾವುದೇ ರೀತಿಯ ಜಾಗತಿಕ ನಾಯಕತ್ವ ಕೊಡದೆ ಕೈಚೆಲ್ಲಿ ಕೂತಿರುವ ಹಿನ್ನಲೆಯಲ್ಲಿ, ಇದು ಚಾರಿತ್ರಿಕ ಮಹತ್ವ ಇರುವ ಜಾಗತಿಕ ಬೆಳವಣಿಗೆ. ಒಂದು ರೀತಿಯಲ್ಲಿ ಈ ಆರ್ಥಿಕ ಬಿಕ್ಕಟ್ಟನ್ನು ಸೃಷ್ಟಿಸಿರುವ ಜಿ-7 ಶ್ರೀಮಂತ ದೇಶಗಳ ಮತ್ತು ಜಾಗತಿಕ ನಾಯಕತ್ವಕ್ಕೆ ಮತ್ತು ಅಮೆರಿಕದ ಏಕಧ್ರುವೀಯ ಧೋರಣೆಗೆ ಇದು ಸವಾಲು ಹಾಕಿದಂತಾಗಿದೆ. ವಿಶ್ವಸಂಸ್ಥೆ, ಐ.ಎಂ.ಎಫ್., ವಿಶ್ವಬ್ಯಾಂಕ್ ಮುಂತಾದ ಜಾಗತಿಕ ಸಂಸ್ಥೆಗಳನ್ನು ಪ್ರಜಾಸತ್ತೀಕರಿಸುವ ತೀವ್ರ ಸುಧಾರಣೆಗಳಿಗೆ ಸಹ ಅದು ಒತ್ತಾಯಿಸಿದೆ. ಅಲ್ಲಿ ವಿಕಾಸ ಶೀಲ ಬ್ರಿಕ್ ದೇಶಗಳ ನಡುವೆ ಏನೂ ಸಾಮಾನ್ಯ ಅಂಶಗಳು ಇಲ್ಲ ಎಂತ ಮೇಲುನೋಟಕ್ಕೆ ಕಂಡು ಬರುತ್ತದೆ. ಆದರೆ ಇವು ವೇಗವಾಗಿ ಬೆಳೆಯುತ್ತಿರುವ ಜಗತ್ತಿನ ಪ್ರಮುಖ ವಿಕಾಸ ಶೀಲ ದೇಶಗಳು. ಜಗತ್ತಿನ ಶೇ. 42 ಜನಸಂಖ್ಯೆ ಬ್ರಿಕ್ ದೇಶಗಳಲ್ಲಿ ಇದೆ. ಇವು ಕಳೆದ ವರ್ಷದ ಜಾಗತಿಕದ ಆರ್ಥಿಕದ ಬೆಳವಣಿಗೆಯಲ್ಲಿ ಮೂರನೇ ಎರಡು ಪಾಲು ನೀಡುವಷ್ಟು ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ಹೊಂದಿವೆ. ಈಗ ಜಗತ್ತಿನ ಜಿಡಿಪಿಯ ಸುಮಾರು ಏಳನೇಯ ಒಂದು ಭಾಗ (ಶೇ. 15) ಮತ್ತು ವ್ಯಾಪಾರದ ಎಂಟನೇಯ ಒಂದು ಬಾಗ (ಶೇ. 12.8) ಇವುಗಳದ್ದು. ಈಗಿನ ದರದಲ್ಲಿ ಅವುಗಳ ಆರ್ಥಿಕ ಬೆಳೆದರೆ 20 ವರ್ಷಗಳಲ್ಲಿ ಜಗತ್ತಿನ ಜಿಡಿಪಿಯ ಅರ್ಧಭಾಗ ಅವು ಹೊಂದಿರುತ್ತವೆ. ಜಗತ್ತಿನ ಕಾಲುಭಾಗಕ್ಕಿಂತಲೂ ಹೆಚ್ಚು ಪ್ರದೇಶ ಹೊಂದಿರುವ ಮತ್ತು ದೊಡ್ಡ ಪ್ರಮಾಣದ ಪ್ರಾಕೃತಿಕ ಸಂಪತ್ತು ಹೊಂದಿವೆ. ಈ ಹಿನ್ನೆಲೆಯಲ್ಲಿ ಈ ದೇಶಗಳ ಜಂಟಿ ದನಿಗೆ ಮಹತ್ವ ಬಂದಿದೆ.

ಐ.ಎಂ.ಎಫ್., ವಿಶ್ವಬ್ಯಾಂಕ್ ಸುಧಾರಣೆ

'ಅಂತರ್‍ರಾಷ್ಟ್ರೀಯ ಕಾನೂನು ಆಧಾರಿತ ನಿಯಮಬದ್ಧತೆ, ಸಮಾನತೆ, ಪರಸ್ಪರ ಗೌರವ, ಸಾಮೂಹಿಕ ನಿರ್ಧಾರ ಪ್ರಕ್ರಿಯೆ ಆಧಾರಿತ ಹೆಚ್ಚು ಪ್ರಜಾಸತ್ತಾತ್ಮಕ ಮತ್ತು ನ್ಯಾಯಯುತ ಬಹುಧ್ರುವೀಯ ಜಾಗತಿಕ ವ್ಯವಸ್ಥೆ' ರೂಪಿಸಲು ಶೃಂಗಸಭೆಯ ಅಖೈರು ಹೇಳಿಕೆ ಕರೆ ನೀಡಿತು. ಆರ್ಥಿಕ ಬಿಕ್ಕಟ್ಟು ಅಲ್ಲದೆ ಜಗತ್ತಿನ ಮುಂದಿರುವ ಪ್ರಮುಖ ಸವಾಲುಗಳಾದ ಆಹಾರ ಮತ್ತು ಇಂಧನ ಭದ್ರತೆ, ಹವಾಮಾನ ಬದಲಾವಣೆ, ಅಂತರ್‍ರಾಷ್ಟ್ರೀಯ ಭಯೋತ್ಪಾದನೆ ಎದುರಿಸುವಲ್ಲಿ ವಿಶ್ವಸಂಸ್ಥೆಯ ಕೇಂದ್ರೀಯ ಪಾತ್ರ ಮತ್ತು ಬಹುಪಕ್ಷೀಯ ಮಾತುಕತೆಗಳ ಮೂಲಕ ಸಹಮತ ರೂಪಿಸುವ ವಿಧಾನದ ಮಹತ್ವಕ್ಕೆ ಒತ್ತು ನೀಡಿದೆ. ಜಾಗತಿಕ ವಿದ್ಯಮಾನಗಳಲ್ಲಿ ಭಾರತ ಮತ್ತು ಬ್ರೆಜಿಲ್ ವಹಿಸುತ್ತಿರುವ ಪಾತ್ರ ಗಮನಿಸಿ ವಿಶ್ವಸಂಸ್ಥೆಯಲ್ಲಿ ಹೆಚ್ಚಿನ ಪಾತ್ರ (ಮುಖ್ಯವಾಗಿ ಭದ್ರತಾ ಸಮಿತಿಯಲ್ಲಿ ಶಾಶ್ವತ ಸ್ಥಾನ) ಕೊಡುವುದಕ್ಕೆ ಪ್ರಬಲ ಬೆಂಬಲ ನೀಡಿದೆ.

ಐ.ಎಂ.ಎಫ್., ವಿಶ್ವಬ್ಯಾಂಕ್ ಮುಂತಾದ ಅಂತರ್‍ರಾಷ್ಟ್ರೀಯ ಆರ್ಥಿಕ ಸಂಘಟನೆಗಳಲ್ಲಿ ತೀವ್ರ ಪ್ರಜಾಸತ್ತಾತ್ಮಕ ಸುಧಾರಣೆಗಳಿಗೆ ಕರೆ ನೀಡುತ್ತಾ ವಿಕಾಸಶೀಲ ದೇಶಗಳಿಗೆ ಹೆಚ್ಚಿನ ದನಿ ಇರಬೇಕು. ಇಂತಹ ಸಂಘಟನೆಗಳ ನಾಯಕತ್ವದ ನಿರ್ಧಾರ ಮುಕ್ತ, ಪಾರದರ್ಶಕ ಕ್ರಮಗಳಿಂದ ನಡೆದು ಅದು ಪ್ರತಿಭೆ-ಆಧಾರಿತ ಆಗಿರಬೇಕು ಎಂದಿದೆ ಬ್ರಿಕ್ ಶೃಂಗಸಭೆ ಹೇಳಿಕೆ. ಇದಲ್ಲದೆ ಶೃಂಗಸಭೆ ಹಲವು ಪ್ರಮುಖ ವಿಷಯಗಳ ಬಗ್ಗೆ ನಿರ್ಣಯ ತೆಗೆದುಕೊಂಡಿದೆ ಮತ್ತು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ತುರ್ತಾಗಿ ಆಹಾರ ಭದ್ರತೆ ಸ್ಥಾಪನೆ ಇಂಧನ ಭದ್ರತೆ ಸ್ಥಾಪನೆ, ಆರ್ಥಿಕ ಬಿಕ್ಕಟ್ಟಿನಿಂ ಬೆಂದಿರುವ ಅತೀ ಬಡದೇಶಗಳಿಗೆ ಹಣಕಾಸ ಸಹಾಯ, ಸುಸ್ಥಿರ ಪರಿಸರ-ಸ್ನೇಹಿ ಬೆಳವಣಿಗೆ ಬ್ರಿಕ್ ಶೃಂಗಸಭೆ ಎತ್ತಿಕೊಂಡ ಪ್ರಮುಖ ವಿಷಯಗಳ



(ಅಮೆರಿಕದ ತೆರಿಗೆದಾರನೇ ಪುನರ್ವೀಕರಿಸಬಹುದಾದ ಇಂಧನ ಮೂಲ)

ಇರಾನ್ ಚುನಾವಣೆ ಅಕ್ರಮಣದ ಅಪಾದನ ಬೀತಿ ಪ್ರತಿಭಟನೆಗಳು

ಇರಾನ್ ಅಧ್ಯಕ್ಷೀಯ ಚುನಾವಣೆಗಳಲ್ಲಿ ಹಿಂದಿನ ಅಧ್ಯಕ್ಷ ಅಹ್ಮದಿನೇಜಾದ್ ಬಹುಮತದಿಂದ ಚುನಾಯಿತರಾಗಿದ್ದಾರೆ ಎಂಬ ಘೋಷಣೆ ಆಗುತ್ತಿದ್ದಂತೆ ವ್ಯಾಪಕ ಪ್ರತಿಭಟನೆಗಳು ವ್ಯಕ್ತವಾಗಿವೆ. ಚುನಾವಣೆಗಳಲ್ಲಿ ಅಕ್ರಮ ನಡೆದಿದೆ. ಮರು ಎಣಿಕೆ ಆಗಬೇಕೆಂದು ಪ್ರಮುಖ ವಿರೋಧಿ ಅಭ್ಯರ್ಥಿ ಮೌಸವಿ ಒತ್ತಾಯ ಮಾಡಿದ್ದಾರೆ. ಚುನಾವಣೆ ಫಲಿತಾಂಶಗಳನ್ನು ಒಪ್ಪಿಕೊಂಡಿಲ್ಲ. ಸರ್ಕಾರ ಅದಕ್ಕೆ ಒಪ್ಪದೆ ಇದ್ದರಿಂದ, ಒತ್ತಡ ಹೇರಲು ಪ್ರತಿ ದಿನ ಭಾರೀ ರ್‍ಯಾಲಿಗಳು ಮತ್ತು ಬೀದಿ ಪ್ರತಿಭಟನೆಗಳು ನಡೆಯುತ್ತಿವೆ. ಸರ್ಕಾರ ಪ್ರತಿಭಟನೆಗಳನ್ನು ದಮನ ಮಾಡಲು ಕಟು ಕ್ರಮಗಳನ್ನು ಕೈಗೊಂಡಿದ್ದು ವ್ಯಾಪಕ ಹಿಂಸಾಚಾರ ನಡೆದಿದೆ. ಬೀದಿ ಪ್ರತಿಭಟನೆಗಳಲ್ಲಿ ಮೊದಲ ಕೆಲವು ದಿನಗಳಲ್ಲಿ ಹಲವು ನಗರಗಳಲ್ಲಿ ಸಾವಿರಾರು ಜನ ಭಾಗವಹಿಸಿದ್ದು, ಭಾರೀ ದಮನ ಚಕ್ರದ ನಂತರ ನೂರಾರು ಜನರಿಗೆ ಇಳಿದಿದೆ. ವಿದ್ಯಾರ್ಥಿಗಳು, ಯುವಜನರು, ಬಜಾರ್ ವ್ಯಾಪಾರಿಗಳು, ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದು ಕಂಡು ಬಂದಿದೆ. ಯಾವುದೇ ಚುನಾವಣಾ ಅಕ್ರಮಗಳು ನಡೆದಿಲ್ಲ. ಬೀದಿ ಪ್ರತಿಭಟನೆಗಳು ತಕ್ಷಣ ನಿಲ್ಲಬೇಕು. ಇಲ್ಲದಿದ್ದರೆ ಪ್ರತಿಭಟನಾಕಾರಿಗೆ ಕಟು ಶಿಕ್ಷೆ ಕಾದಿದೆ ಎಂದು ಇಸ್ಲಾಮಿಕ್ ಕ್ರಾಂತಿಯ ಸುಪ್ರೀಂ ನಾಯಕ ಖಮೇನಿ ಸಾರ್ವಜನಿಕ ಎಚ್ಚರಿಕೆ ಕೊಟ್ಟ ಮೇಲೂ ಪ್ರತಿಭಟನೆಗಳು ಪೂರ್ಣ ನಿಂತಿಲ್ಲ.

ಅಧ್ಯಕ್ಷ ಅಹ್ಮದಿನೇಜಾದ್ ಪ್ರತಿಭಟನಾಕಾರರ ಮೇಲೆ ತೀವ್ರ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ. ಪ್ರತಿಭಟನೆಗಳು ಮತ್ತು ಹಿಂಸಾಚಾರ ಅಮೆರಿಕ ಮತ್ತು ಯುರೋಪಿನ ಶ್ರೀಮಂತ ದೇಶಗಳ ಚಿತಾವಣೆಯಿಂದ ಆಗುತ್ತಿರುವುದು. ಇದು ಇರಾನನ್ನು ದುರ್ಬಲಗೊಳ್ಳಿಸುವ ಪಿತೂರಿ. ಪೂರ್ವ ಯುರೋಪಿನಲ್ಲಿ ಶ್ರೀಮಂತ ದೇಶಗಳ ಕುಮ್ಮಕ್ಕಿನಿಂದ ನಡೆದ 'ಬಣ್ಣದ ಕ್ರಾಂತಿ'ಗಳ ದಾರಿಯಲ್ಲಿ ಕೊಂಡು ಹೋಗುವ ಅಮೆರಿಕದ ಸಿ.ಐ.ಎ. ಪ್ರೇರಿತ ಪ್ರಯತ್ನದ ಭಾಗ. ಮೌಸವಿ ಅಮೆರಿಕದ ಏಜಂಟರಂತೆ ನಡೆದುಕೊಳ್ಳುತ್ತಿದ್ದಾರೆ ಎಂದು ಆಪಾದಿಸಿದ್ದಾರೆ.

ಆದರೆ ವಿರೋಧಿಗಳು ಹಲವು ಚುನಾವಣೆ ಅಕ್ರಮಗಳನ್ನು ಬಹಿರಂಗ ಪಡಿಸಿದ್ದಾರೆ. ಹಲ ನಗರಗಳಲ್ಲಿ ರಿಜಿಸ್ಟರ್ ಮಾಡಿದ ಮತಗಳಿಗಿಂ ಮತದಾನ ಹೆಚ್ಚಾಗಿದೆ. ಮತಪತ್ರಗಳು, ಮು ಛಾಪುಗಳು ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ ಚಲಾವಣೆಯಲ್ಲಿ ಇದ್ದವು. ಮತ ಎಣಿಕೆ ಮತ್ತು ಫಲಿತಾಂಶ ಘೋಷಣೆಯ ಪ್ರಕ್ರಿಯೆ ಪಾರದರ್ಶಕವಾಗಿ ಇರಲಿಲ್ಲ ಎಂದು ವಿರೋಧಿಗಳ ಹೇಳಿದ್ದಾರೆ. ಇತರ ಹಲವು ಇಸ್ಲಾಮಿಕ್ ಕ್ರಾಂತಿಯ ಬೆಂಬಲಿಗರು ಚುನಾವಣೆ ಅಕ್ರಮಗಳ ಬಗ್ಗೆ ತನಿಖೆ ನಡೆಯಬೇಕು ಎಂದು ಹೇಳಿಕೆ ನೀಡಿದ್ದಾರೆ.

ಇರಾನಿನ ಈ ಘಟನೆಗಳ ಹಿಂದಿನ ಸತ್ಯಾಸತ್ಯತೆಗಳು ಏನು ? ಎಂಬ ಬಗ್ಗೆ ಒಮ್ಮತದ ಅಭಿಪ್ರಾಯ ಇಲ್ಲ. ಇಸ್ಲಾಮಿಕ್ ಕ್ರಾಂತಿಯ 3 ವರ್ಷಗಳ ಚರಿತ್ರೆಯಲ್ಲಿ ಮೊದಲ ಬಾರಿಗೆ ವ್ಯಾಪಕ ಪ್ರತಿಭಟನೆಗಳು ನಡೆದಿವೆ. ಅದರಲ್ಲಿ ದೊಡ್ಡ ಪಾಲ್ಗೊಳ್ಳುವಿಕೆ ನಡೆದಿದೆ ಎಂಬುದಂತೂ ಅಧ್ಯಕ್ಷ ಅಹ್ಮದಿನೇಜಾದ್ ಈ ವರೆಗೆ ಇಸ್ಲಾಮಿಕ್ ಆಡಳಿತದಲ್ಲೂ ಇದ್ದ ಹಲವು ಸ್ವಾತಂತ್ರ್ಯಗಳನ್ನು ಮಾಡುತ್ತಿದ್ದಾರೆ. ಆರ್ಥಿಕ ಮತ್ತು ಅಂತರ್‍ರಾಷ್ಟ್ರೀಯ ನೀತಿಗಳ ವಲಯಗಳಲ್ಲೂ ಅವರು ಅನಗತ್ಯ ಬಿ ನೀತಿ ಅನುಸರಿಸಿದ್ದು ಜನರ ಆಕ್ರೋಶಕ್ಕೆ ಗುರಿಯಾಗಿದ್ದಾರೆ. ಮೌಸವಿ ಈ ಕಟು ನೀತಿಗಳನ್ನು ವಿಮರ್ಶೆಗೊಳಪಡಿಸುವ ಭರವಸೆ ನೀಡಿದ್ದರು ಆದ್ದರಿಂದ ಅವರ ಜನಪ್ರಿಯತೆ ಹೆಚ್ಚಿತ್ತು. ಅದೇ ಸಮಯದಲ್ಲಿ ಹಲವು ಪಾಶ್ಚಿಮಾತ್ಯ ವರದಿಗಳ ಕೂಡಾ ಈ ಘಟನೆಗಳು ಸಿ.ಐ.ಎ. ಪ್ರೇರಿತ 'ಬಣ್ಣದ ಕ್ರಾಂತಿ'ಯ ಪ್ರಯತ್ನ ಇರಬಹುದು ಎಂದಿವೆ.

ಇರಾನಿನ ಇಸ್ಲಾಮಿಕ್ ಕ್ರಾಂತಿಯ ನಾಯಕತ್ವದಲ್ಲಿ ತೀವ್ರ ಭಿನ್ನಾಭಿಪ್ರಾಯಗಳು ಬಂದಿದ್ದು, ಅಧಿಕಾರಕ್ಕಾಗಿ ತಿಕ್ಕಾಟ ನಡೆಯುತ್ತಿದೆ. ಇಸ್ಲಾಮಿಕ್ ಕ್ರಾಂತಿಯಿಂದ ಜನರು ವಿಮುಖರಾಗಿದ್ದಾರೆ ಎಂಬುದೂ ಸ್ಪಷ್ಟ. ಆದರೆ ಈ ಬಿಕ್ಕಟ್ಟು ಎಷ್ಟರ ಮಟ್ಟಿಗೆ ಇಸ್ಲಾಮಿಕ್ ಕ್ರಾಂತಿಯಿಂದ ಜನರ ಭ್ರಮನಿರಸನದ ಫಲ ಅಥವಾ ಬರಿಯ ಅಧಿಕಾರಕ್ಕಾಗಿ ತಿಕ್ಕಾಟ. ಜನ ಈ ವ್ಯವಸ್ಥೆ ಒಳಗೆ ಕೆಲವು ಸುಧಾರಣೆಗಳನ್ನು ಬಯಸುತ್ತಿದ್ದಾರೆಯೇ ಅಥವಾ ಆಮೂಲಾಗ್ರ ಬದಲಾಣೆಗಳಿಗೆ ಹೋರಾಡುತ್ತಿದ್ದಾರೆಯೇ ? ಎಂದು ಹೇಳುವುದು ಕಷ್ಟ

ಸಂದರ್ಶನ

ರಾಜ್ಯದ ಮತ್ತು ಬೆಂಗಳೂರಿನಲ್ಲಿ ಕೈಗಾರಿಕಾ ವಲಯದಲ್ಲಿ ಇತ್ತೀಚಿನ ದಶಗಳಲ್ಲಿ ಭಾರಿ ಬದಲಾವಣೆಯಾಗುತ್ತಿದೆ. ಸಾರ್ವಜನಿಕ ವಲಯದ ಕೈಗಾರಿಕೆಗಳ ಗಾತ್ರ ಕುಗ್ಗುತ್ತಾ, ಅಸಂಘಟಿತ ವಲಯವು ಹಿಗ್ಗುತ್ತಾ ನಡೆದಿದೆ. ಏಕೆ? ಅಸಂಘಟಿತ ವಲಯದಲ್ಲಿ ಕಾರ್ಮಿಕರಿಗೆ ಕೂಲಿಯಲ್ಲಿ ಆಗುತ್ತಿರುವ ದೊಡ್ಡ ವಂಚನೆಯಿಂದಾಗಿಯೇ ಈ ಬೆಳವಣಿಗೆ ಆಗುತ್ತಿದೆ ಎನ್ನುತ್ತಾರೆ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ವಿ.ಜೆ.ಕೆ. ನಾಯರ್

'ಅಸಂಘಟಿತ ವಲಯದಲ್ಲಿ ದೊಡ್ಡ ಕೂಲಿ ವಂಚನೆ ನಡೆಯುತ್ತಿದೆ'

ವಿ.ಜೆ.ಕೆ.ನಾಯರ್

ಶಕ್ತಿ: ಬೆಂಗಳೂರಿನ ಉದ್ದಿಮೆಗಳಲ್ಲಿ ರ್ಮಿಕರ ಬದುಕಿನಲ್ಲಿ ಆಗುತ್ತಿರುವ ದಲಾವಣೆ ಏನು?

ಜೆಕೆ: ಬೆಂಗಳೂರಿನಲ್ಲಿ ಹಲವಾರು ಘನ ೈಗಾರಿಕೆಗಳು, ದೊಡ್ಡ ದೊಡ್ಡ ಕೈಗಾರಿಕೆಗಳಿದ್ದವು. ನ್‌ಜಿಇಎಫ್, ಕಿರ್ಲೋಸ್ಕರ್, ಗೆಸ್ಕಿನ್ ಲಿವಿಯಾ, ಮೈಕೊ, ಬಿಪಿಎಲ್, ಎಸ್ಕಾರ್ಟ್ಸ್, ಎಲ್‌ಅಂಡ್ ಿ, ಸ್ಟಂಪ್ ಅಂಡ್ ಸೂಲೆ ಸೋಮಪ್ಪ ಮುಂತಾದವು ಪ್ರಮುಖವಾದವು. ಜಾಗತೀಕರಣ ೀತಿಗಳು ಜಾರಿಯಾಗುವುದಕ್ಕೆ ಮುಂಚೆ ಸಾವಿರ, ಹತ್ತಾರು ಸಾವಿರ ಜನರು ಸಾರ್ವಜನಿಕ ವಲಯದ ೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದರು. ಹೆಚ್‌ಎಂಟಿ, ಿಇಎಲ್, ಬಿಇಎಂಎಲ್, ಐಟಿಐ ಇತ್ಯಾದಿ ಬೃಹತ್ ೈಗಾರಿಕೆಗಳಿದ್ದವು.ಹೆಚ್‌ಎಎಲ್‌ನಲ್ಲಿ 20 ಸಾವಿರಕ್ಕೂ ೆಚ್ಚು ಕಾರ್ಮಿಕರು, ಬಿಇಎಂಎಲ್‌ನಲ್ಲಿ 10 ಕ್ಕೂ ಹೆಚ್ಚು, ಐಟಿಐನಲ್ಲಿ 15 ಸಾವಿರಕ್ಕೂ ೆಚ್ಚು ಕಾರ್ಮಿಕರು ಒಂದುಹಂತದಲ್ಲಿ ುಡಿಯುತ್ತಿದ್ದರು. ಜಾಗತೀಕರಣದ ನೀತಿಗಳ ಾಗವಾಗಿ ಉದ್ಯೋಗಗಳ ಕಡಿತ (ಡೌನ್ ಸೈಜ್), ್ವಯಂ ನಿವೃತ್ತಿ ಯೋಜನೆ (VRS), ಗೋಲ್ಡನ್ ್ಯಾಂಡ್ ಶೇಕ್, ಇತ್ಯಾದಿ ಹೆಸರಿನಲ್ಲಿ ಜನರನ್ನು ಈ ಸಂಸ್ಥೆಗಳಿಂದ ಆಚೆ ತಳ್ಳಿದ್ದಾರೆ. ಆದರೆ ಉತ್ಪಾದನೆ ಕಮ್ಮಿ ಆಗುತ್ತಿಲ್ಲ. ಹೊರಗುತ್ತಿಗೆಯ ರೂಪಕ್ಕೆ ಉತ್ಪಾದನೆಯ ಸ್ವರೂಪ ಬದಲಾಗಿದೆ.


ಕಿರ್ಲೋಸ್ಕರ್, ಮೈಸೂರು ಲ್ಯಾಂಪ್ಸ್, ೆಕ್ಸ್‌ಟೈಲ್ ಉದ್ದಿಮೆಗಳಾದ ಬಿನ್ನಿಮಿಲ್, ಾಜಾಮಿಲ್, ರಾಮ್ ಕುಮಾರ್ ಮಿಲ್ ಎಲ್ಲಾ ಡೆಗಳಲ್ಲಿಯೂ ಉದ್ಯೋಗ ಕಡಿತಗೊಳಿಸಿ ಮುಚ್ಚಿ ಹೋಗಿವೆ. ಭೂಮಿ ಎಲ್ಲಾ ಭೂ ಮಾಫಿಯಾ ಕೈಗೆ ಹೋದದೆ. 100 ವರ್ಷ ಇತಿಹಾಸವಿರುವ ನ್‌ಜಿಇಎಫ್‌ಗೂ ಅದೇ ಸ್ಥಿತಿ ಬಂತು. ಾರೆ ಈ ಎಲ್ಲಾ ಉದ್ದಿಮೆಗಳಲ್ಲಿ ಯಂ ಕಾರ್ಮಿಕರಾಗಿದ್ದ ಸುಮಾರು 2-3 ಲಕ್ಷ ಘನ ಕೈಗಾರಿಕಾ ಕಾರ್ಮಿಕರು ಕೆಲಸ ಳೆದುಕೊಂಡಿದ್ದಾರೆ. 10 ಸಾವಿರ ಮತ್ತು ಅದಕ್ಕೂ ಹೆಚ್ಚು ವೇತನ ಪಡೆಯುತ್ತಿದ್ದ ಈ ಾರ್ಮಿಕರು ಈ ಸೇವಾ ವಲಯದಲ್ಲಿ ಗುತ್ತಿಗೆ ಆಧಾರದಲ್ಲಿ ಸೆಕ್ಯೂರಿಟಿ ಇತ್ಯಾದಿ ೆಲಸಗಳಲ್ಲಿ 2-3 ಸಾವಿರ ವೇತನ ಪಡೆಯುತ್ತಿದ್ದಾರೆ.

ಐಟಿಐ, ಹೆಚ್‌ಎಎಲ್ ಕಾರ್ಖಾನೆಗಳೊಂದಿಗೆ ಐಟಿಐ ಬಡಾವಣೆ, ಹೆಚ್‌ಎಎಲ್ ಬಡಾವಣೆಗಳಲ್ಲಿ ಕಾರ್ಖಾನೆಯದ್ದೇ ಆದ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು ಇತ್ಯಾದಿಗಳು ಒಂದು ಸಮೂಹವಾಗಿ ಬೆಳೆಯುತ್ತಿದ್ದವು. ಇಂತಹ ಶಿಕ್ಷಣ ಸಂಸ್ಥೆಗಳಲ್ಲಿ ಓದಿದ ಮಕ್ಕಳು ಇಂಜನಿಯರುಗಳು, ಡಾಕ್ಟರು, ಶಿಕ್ಷಕರು ಇತ್ಯಾದಿ ದ್ದಾರೆ. ಈಗ ಸಂಸ್ಥೆಯ ಬಸ್‌ಗಳು ವಿದ್ಯಾರ್ಥಿಗಳನ್ನು ಕರೆದುಕೊಂಡು ಬರುವುದು, ಹೋಗುವುದು ಎಲ್ಲಾ ಹೋಗಿದೆ. ಅಂತಹ ವಾತಾವರಣವೇ ಈಗ ಇಲ್ಲ.

ಹೊಸದಾಗಿ ಸರ್ವಿಸ್ ಇಂಡಸ್ಟ್ರಿ -ಸೇವಾ ವಲಯದಲ್ಲಿ ಉದ್ದಿಮೆಗಳು ಬೆಳೆದಿವೆ. ಮಾಹಿತಿ ತಂತ್ರಜ್ಞಾನ (IT) ಕಮ್ಯುನಿಕೇಷನ್ (ಸಂವಹನ), ITES (ಮಾಹಿತಿ ತಂತ್ರಜ್ಞಾನದಿಂದಾಗಿ ಸಾಧ್ಯವಾಗುತ್ತಿರುವ BPO ಮುಂತಾದ ಉದ್ದಿಮೆಗಳು) ಸಾರಿಗೆ ಹಾಗೂ ಸೆಲ್ ಫೋನ್‌ಗೆ ಸಂಬಂಧಿಸಿದ ಉದ್ದಿಮೆಗಳು ಬೆಳೆಯುತ್ತಿವೆ.

ಜನಶಕ್ತಿ: ಈಗ ಬೆಂಗಳೂರಿನಲ್ಲಿ ಸಾರ್ವಜನಿಕ ವಲಯದಲ್ಲಿ ಮತ್ತು ದೊಡ್ಡ ಕೈಗಾರಿಕೆಗಳಲ್ಲಿ ಎಷ್ಟು ಜನ ಕಾರ್ಮಿಕರಿದ್ದಾರೆ?

ವಿಜೆಕೆ: ಹಳೇ ಕಾಲದ ಬೆಂಗಳೂರಿನಲ್ಲಿ 20 ಲಕ್ಷ ಜನಸಂಖ್ಯೆ ಇದ್ದರೆ 3-4 ಲಕ್ಷ ಜನ ಘನ ಕೈಗಾರಿಕೆಯ ಕಾರ್ಮಿಕರು ಇರುತ್ತಿದ್ದರು. ಬೆಂಗಳೂರಿನ ಜನಸಂಖ್ಯೆ 70 ಲಕ್ಷಕ್ಕೆ ಬೆಳೆದಿದೆ. ಈಗ ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ (ಬಿ.ಬಿ.ಎಂ.ಪಿ.) ಆದ ಮೇಲೆ ಬೆಂಗಳೂರಿನ ಜನಸಂಖ್ಯೆ 1 ಕೋಟಿ ಮುಟ್ಟಿದೆ. ಈ ಒಂದು ಕೋಟಿ ಜನಸಂಖ್ಯೆಯಲ್ಲಿ ಈಗ ಒಂದು ಅಥವಾ ಒಂದೂವರೆ ಲಕ್ಷದಷ್ಟು ಮಾತ್ರ ಘನ ಕೈಗಾರಿಕೆಯ ಕಾರ್ಮಿಕರಿದ್ದಾರೆ. ಮಾಹಿತಿ ತಂತ್ರಜ್ಞಾನ ಮತ್ತು ಕಾಲ್‌ಸೆಂಟರ್ ಎನ್ನಲಾಗುವ ಬಿಪಿಓ ಇತ್ಯಾದಿ ITES ವಲಯದಲ್ಲಿ ಸುಮಾರು 2 ಲಕ್ಷ ಕಾರ್ಮಿಕರು ದುಡಿಯುತ್ತಿದ್ದಾರೆ. ಆದರೆ ಈ ವಿಭಾಗದಲ್ಲಿ ಕಾರ್ಮಿಕ ಸಂಘ, ಕಾರ್ಮಿಕ ಚಳುವಳಿ ಇಲ್ಲ.




ಮುಚ್ಚಿ ಹಾಕಲಾದ NGEF

80 ರ ದಶಕದಲ್ಲಿ ನಡೆದ ಸಾರ್ವಜನಿಕ ಉದಿಮೆಗಳ ಕಾರ್ಮಿಕರ ಮುಷ್ಕರವು ಕೇಂದ್ರ ಸರ್ಕಾರದ ವಿರುದ್ಧವಾಗಿತ್ತು. ಇವತ್ತು ಆ ರೀತಿಯ ಹೋರಾಟಗಳು ನಡೆಯುತ್ತಿಲ್ಲ. 80 ರ ದಶಕದಲ್ಲಿ ಮೈಕೊ ಹೋರಾಟ ನಡೆಯಿತು. 4-5 ಸಾವಿರ ಇದ್ದ ಸಂಬಳ ಈಗ 30 ಸಾವಿರದವರೆಗೆ ಏರಿದೆ. ಬಿಇಎಲ್ ನಂತಹ ಕಾರ್ಖಾನೆಯಲ್ಲಿ 15 ಸಾವಿರ ಜನ ಇದ್ದವರು ಈಗ ಇರುವುದು ನಾಲ್ಕು ಸಾವಿರ ಮಾತ್ರ. ಇರುವವರಿಗೆ ಸಂಬಳ,ಸಾರಿಗೆ ತಕ್ಕಮಟ್ಟಿಗೆ ಉತ್ತಮವಾಗಿದೆ. ಆದರೆ ಇದೇ ಅವಧಿಯಲ್ಲಿ ಉತ್ಪಾದನೆ ಸಂಘಟಿತ ವಲಯದಿಂದ ಅಸಂಘಟಿತ ವಲಯಕ್ಕೆ ವರ್ಗಾವಣೆಯಾಗಿದೆ. ಗುತ್ತಿಗೆ ಆಧಾರದಲ್ಲಿ ಹೊರ ಗುತ್ತಿಗೆ ಆಧಾರದಲ್ಲಿ ಉತ್ಪಾದನೆಯಾಗುವುದು ಹೆಚ್ಚುತ್ತಿದೆ. ಇಲ್ಲಿಂದ ಸಂಘಟಿತ ವಲಯಕ್ಕೆ Semy Finished ಉತ್ಪನ್ನ ಅಂದರೆ ಭಾಗಶ: ಸಿದ್ದಗೊಂಡ ಉತ್ಪನ್ನಗಳು ಪೂರೈಕೆಯಾಗುತ್ತಿವೆ. ಈ ವಿಭಾಗದಲ್ಲಿ ಅಸಂಘಟಿತ ಕಾರ್ಮಿಕರ ಶೋಷಣೆ ತೀವ್ರವಾಗಿ ನಡೆಯುತ್ತಿದೆ.

ಜನಶಕ್ತಿ: ಇತರ ಕಾರ್ಮಿಕರ, ನೌಕರರ ಸ್ಥಿತಿ ಏನು?

ವಿಜೆಕೆ: ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹಿಂದೆ 7-8 ಸಾವಿರ ರೂ. ವೇತನ ಪಡೆಯುತ್ತಿದ್ದ ಪೌರ ಕಾರ್ಮಿಕರ ನೌಕರರು ಇದೀಗ ಗುತ್ತಿಗೆ ಆಧಾರದಲ್ಲಿ ಕೇವಲ 1800 - 2000 ರೂ. ಮಾತ್ರಪಡೆಯುತ್ತಿದ್ದಾರೆ. ಅಗತ್ಯಗಳು ಬೆಳೆದಿವೆ. ಒಂದು ಕೋಟಿ ಜನಸಂಖ್ಯೆಗೆ ಶಾಲೆ, ಆಸ್ಪತ್ರೆ, ಸಾರಿಗೆ ಸೌಲಭ್ಯಗಳು ಬೇಕಿದೆ. ಸಾರಿಗೆ ಮೊದಲು ಸಂಘಟಿತವಾಗಿತ್ತು. ಈ ಸಾರಿಗೆ ಸಂಸ್ಥೆಯನ್ನು ವಿಭಜಿಸಿ, ಅತಿ ಕಡಿಮೆ ಸಂಬಳಕ್ಕೆ ಕಾರ್ಮಿಕರನ್ನು ದುಡಿಸಿಕೊಳ್ಳಲಾಗುತ್ತಿದೆ. ನಿರ್ಮಾಣ- ಅಂದರೆ ಕಟ್ಟಡ ಕಾರ್ಮಿಕ ಸಂಖ್ಯೆ ಬೆಳೆದಿದೆ. ಅವರಿಗೆ ಕಾರ್ಮಿಕ ಸೌಲಭ್ಯ ಸಿಗುತ್ತಿಲ್ಲ. ಹಮಾಲಿಗಳ ಸಂಖ್ಯೆ ಬೆಳೆದಿದೆ. ನೀರು ಸರಬರಾಜು, ಸಾರಿಗೆ, ಇತ್ಯಾದಿ ಇತ್ಯಾದಿಯಾಗಿ ಸರ್ಕಾರಿ ಮುನಿಸಿಪಲ್‌ಗಳನ್ನು ಒಳಗೊಂಡು ಗುತ್ತಿಗೆ, ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವವರ ಸಂಖ್ಯೆ 20-30 ಲಕ್ಷದಷ್ಟಿದೆ.

ಅಂಗಡಿ ಮುಗ್ಗಟ್ಟುಗಳು, ವ್ಯಾಪಾರ, ವಾಣಿಜ್ಯ ಮಳಿಗೆಗಳು, ಅಂಚೆ, ತಂತಿ ಇಲಾಖೆ, ಕೇಬಲ್ ಹಾಕುವವರು.... ಹೀಗೆ ಲಕ್ಷಗಟ್ಟಲೆ ಜನರು ಅಸಂಘಟಿತರಾಗಿ ದುಡಿಯುತ್ತಿದ್ದಾರೆ. ಸಂಘಟಿತ ವಲಯದಲ್ಲಿ ಐದು ಲಕ್ಷ ಕಾರ್ಮಿಕರಾದರೆ ಅದರ ಮೂರು ಪಟ್ಟು, ನಾಲ್ಕು ಪಟ್ಟು ಅಸಂಘಟಿತ ವಲಯದ ಕಾರ್ಮಿಕರಿದ್ದಾರೆ. ಕೂಲಿಯಲ್ಲಿ ಅಸಂಘಟಿತ ವಲಯದ ಕಾರ್ಮಿಕರಿಗೆ ದೊಡ್ಡ ಮೋಸವಾಗುತ್ತಿದೆ. ಅದೇ ಕಾರಣಕ್ಕೆ ಈ ವಲಯ ಬೆಳೆಯುತ್ತಿದೆ. ಬೆಂಗಳೂರಿನ ಎಲ್ಲಾ ಕಾರ್ಮಿಕರನ್ನು ಒಂದುಗೂಡಿಸುವ ಕೆಲಸ ಆಗಬೇಕಿದೆ. ಬೃಹತ್ ಹೋರಾಟಗಳು ಬೆಳೆದುಬರಬೇಕಿದೆ.



ಜ.ಶ.: ಕಾರ್ಮಿಕರ ಪ್ರಶ್ನೆಗಳಲ್ಲಿ ಈ ಹಿಂದಿನ ಸರ್ಕಾರಗಳ ಧೋರಣೆ ಹೇಗಿತ್ತು. ಈಗಿನ ಬಿಜೆಪಿ ಸರ್ಕಾರದ ಧೋರಣೆ ಹೇಗಿದೆ?

ವಿಜೆಕೆ: ಕಾಂಗ್ರೆಸ್ ಎಂದೂ ಕಾರ್ಮಿಕ ವಿರೋಧಿಯೇ. ಮೊದಲಿಗೆ ಜನತಾಪಾರ್ಟಿ-ಜನತಾದಳ ಅಧಿಕಾರಕ್ಕೆ ಬಂದಾಗ ಕಾರ್ಮಿಕರನ್ನು ಎದುರು ಹಾಕಿಕೊಳ್ಳಲಿಲ್ಲ. ಕನಿಷ್ಟ ಕೂಲಿ ಇತ್ಯಾದಿ ಉತ್ತಮಪಡಿಸಲಾಯಿತು. ಮರಳಿ ಮತ್ತೆ ಅಧಿಕಾರಕ್ಕೆ ಬಂದ ಜನತಾದಳ ಆ ಧೋರಣೆ ಬದಲಿಸಿತು. ಆಮೇಲೆ ಜೆ.ಎಚ್.ಪಟೇಲ್ ಸರ್ಕಾರ, ಕಾಂಗ್ರೆಸ್ ಸರ್ಕಾರ, ಜನತಾದಳ ಸರ್ಕಾರ, ಜನತಾದಳ-ಕಾಂಗ್ರೆಸ್ ಸರ್ಕಾರ, ಜನತಾದಳ-ಬಿಜೆಪಿ ಸರ್ಕಾರ ಎಲ್ಲವೂ ಕಾರ್ಮಿಕ ವಿರೋಧಿಯಾಗೇ ವರ್ತಿಸಿದವು. ಈಗ ಅಧಿಕಾರಕ್ಕೆ ಬಂದಿರುವ ಬಿಜೆಪಿಯೂ ಅದೇ ಕಾರ್ಮಿಕ ವಿರೋಧಿ ಧೋರಣೆ ಮುಂದುವರೆಸುತ್ತಿದೆ. ಜೆ.ಎಚ್.ಪಟೇಲ್ ಬಿಪಿಎಲ್ ಮಾಲಿಕರೊಂದಿಗೆ ಸೇರಿ, ಕುಮಾರಸ್ವಾಮಿ ಟಯೋಟ ಮಾಲೀಕ ವರ್ಗದವರೊಂದಿಗೆ ಸೇರಿ ಯಾವ ರೀತಿ ಕಾರ್ಮಿಕ ವಿರೋಧಿಯಾಗಿ ವರ್ತಿಸಿದರೆಂದು ನಾವು ನೋಡಿದ್ದೇವೆ.

ಈಗಿನ ರಾಜ್ಯ ಕಾರ್ಮಿಕ ಮಂತ್ರಿ ಬಚ್ಚೇಗೌಡ ಕಾರ್ಮಿಕರ ಕಲ್ಯಾಣದ ಬಗ್ಗೆ ಬರೀ ಮಾತನಾಡುತ್ತಿದ್ದಾರೆ. ಗುತ್ತಿಗೆ ಕಾರ್ಮಿಕರ ಕಲ್ಯಾಣ ಸಂಬಂಧಿಸಿದಂತೆ ಬೋರ್ಡ್ ಸಭೆಯನ್ನು ಹಿಂದೆ ಅನ್ಸಾರಿ ಮಂತ್ರಿಯಾಗಿದ್ದಾಗ ಕರೆದೇ ಇರಲಿಲ್ಲ. ನಾನು ಬಚ್ಚೇಗೌಡರಿಗೆ ಸವಾಲು ಹಾಕಿದ್ದೆ. ಸಭೆ ಕರೆದಿದ್ದಾರೆ. ಆದರೆ ಈ ಸರ್ಕಾರಗಳನ್ನು ನಂಬಿ ಕೂತರೆ ಸಮಸ್ಯೆಗೆ ಪರಿಹಾರವಿಲ್ಲ. ಹೋರಾಟವೊಂದೇ ಪರಿಹಾರದ ದಾರಿ. ಸಿಐಟಿಯು ಅಂತಹ ಹೋರಾಟ ರೂಪಿಸಲು ಶ್ರಮಿಸುತ್ತದೆ.

JANASHAKTHI KANNADA VARA PATRIKE JULY 12, 2009 Price : Rs. 5/- No. KARKAN /2006/17926 Postal Reg. No. RNP/KA/BGS/2078/2007-09



ಜುಲೈ 22 ರ ಅಪರೂಪದ ಸಂಪೂರ್ಣ ಸೂರ್ಯಗ್ರಹಣ

ನೋಡಲು ಮರೆತು 78 ವರ್ಷ ಕಾಯಬೇಕಾದೀತು ಜೋಕೆ !

ಬರುವ ಜುಲೈ 22ರ ಬುಧವಾರ ಇಡೀ ವಿಶ್ವದ ಮೂಲೆ ಮೂಲೆಯಲ್ಲೂ ಸೂರ್ಯಗ್ರಹಣವನ್ನು ನೋಡಲು ಭಾರೀ ಸಿದ್ಧತೆಗಳು ನಡೆಯುತ್ತಿವೆ. ನಮ್ಮ ದೇಶದಲ್ಲೂ ಕೂಡ ವಿಜ್ಞಾನ ಸಂಸ್ಥೆಗಳು, ವಿಜ್ಞಾನ ಸಂಘಟನೆಗಳು, ಶಾಲಾ ಕಾಲೇಜುಗಳು ಮತ್ತು ಸಂಶೋಧನಾ ಕೇಂದ್ರಗಳು ಕಾತರದಿಂದ ಸೂರ್ಯಗ್ರಹಣವನ್ನು ಸೆರೆಹಿಡಿಯಲು ಸಕಲಸಿದ್ಧತೆ ಮಾಡಿಕೊಳ್ಳುತ್ತಿವೆ. ನಮಗೆಲ್ಲರಿಗೂ ತಿಳಿದಿರುವಂತೆ ಇಡೀ ವಿಶ್ವದಲ್ಲಿರುವ ಎಲ್ಲ ಆಕಾಶ ಕಾಯಗಳು ಸದಾ ಚಲಿಸುತ್ತಿವೆ. ಸೌರವ್ಯೂಹವೆಂದು ಕರೆಯಲಾಗುವ ಸೂರ್ಯನ ಪರಿವಾರದಲ್ಲಿ ಸೂರ್ಯನ ಸುತ್ತಲೂ ನಮ್ಮ ಭೂಮಿಯೂ ಸೇರಿದಂತೆ ಗ್ರಹಗಳು ಸುತ್ತತ್ತಲಿವೆ. ಹೀಗೆ ಭೂಮಿಯು ಸೂರ್ಯನ ಸುತ್ತ ಸುತ್ತುತ್ತಿರುವಾಗಲೇ ಚಂದ್ರನು ಭೂಮಿಯ ಸುತ್ತ ಪ್ರದಕ್ಷಿಣೆ ಹಾಕುತ್ತಿದ್ದಾನೆ. ಸೂರ್ಯ ಮತ್ತು ಭೂಮಿಯ ನಡುವೆ ಚಂದ್ರ ಬಂದಾಗ ಸೂರ್ಯನ ಬೆಳಕು ಭೂಮಿಗೆ ತಲುಪಲಾರದೆ ಆ ಕ್ಷಣ ನಡುಹಗಲಿನಲ್ಲಿ ಚಂದ್ರನ ನೆರಳಿನಿಂದಾಗಿ ಭೂಮಿಯಲ್ಲಿ ಕತ್ತಲೆಯಾವರಿಸಿಕೊಳ್ಳುತ್ತದೆ. ಸೂರ್ಯ ಮತ್ತು ಭೂಮಿಯ ನಡುವಿನ ರೇಖೆಯನ್ನು ಚಂದ್ರನು ಬಿಟ್ಟು ಪಕ್ಕಕ್ಕೆ ಸರಿದಾಗ ಮಾತ್ರವೇ ಸೂರ್ಯನಿಂದ ಮತ್ತೆ ಭೂಮಿಯ ಮೇಲೆ ಬೆಳಕು ಬೀಳಲಾರಂಭಿಸುತ್ತದೆ. ಇದನ್ನೇ ಸೂರ್ಯಗ್ರಹಣವೆಂದು ಕರೆಯುವುದು.




ಈ ಬಾರಿಯ ಗ್ರಹಣದ ಕೇಂದ್ರ ರೇಖೆಯು ಬಿಹಾರದ ಪಾಟ್ನಾದಿಂದ ಸುಮಾರು 35 ಕಿ.ಮೀ ದೂರದಲ್ಲಿರುವ ತರೆಗ್ನ ಎಂಬ ಹಳ್ಳಿಯ ಮೇಲೆ ಹಾದು ಹೋಗುತ್ತದೆಂದು ಅಂದಾಜಿಸಲಾಗಿದೆ. ಆಕಸ್ಮಿಕವೆಂಬಂತೆ, ಈ ಹಳ್ಳಿಯ ತರೆಗ್ನ ಮಠ ಎಂಬ ಸ್ಥಳದಲ್ಲಿಯೇ ಆರ್ಯಭಟನು ಆಕಾಶ ವೀಕ್ಷಣಾ ಚಟುವಟಿಕೆಗಳನ್ನು ನಡೆಸುತ್ತಿದ್ದದ್ದು. ಆರ್ಯಭಟನು ವಿಶ್ವವಿಖ್ಯಾತ ಖಗೋಳಭೌತಶಾಸ್ತ್ರಜ್ಞ ಮತ್ತು ಗಣಿತಶಾಸ್ತ್ರಜ್ಞರಲ್ಲೊಬ್ಬನಾಗಿದ್ದನು.

ಅಪರೂಪದ ಗ್ರಹಣ:

ಚಂದ್ರನು ಸೂರ್ಯನನ್ನು ಸಂಪೂರ್ಣವಾಗಿ ಮರೆಮಾಡುವುದಕ್ಕೆ ಸಂಪೂರ್ಣ ಸೂರ್ಯಗ್ರಹಣ ಎನ್ನಲಾಗುತ್ತದೆ. ಹೀಗೆ ಸೂರ್ಯನನ್ನು ಸಂಪೂರ್ಣವಾಗಿ ಮರೆಮಾಡುವ ಸಂದರ್ಭಗಳು ನಮಗೆ ನೋಡಸಿಗುವುದು ಬಲು ವಿರಳ. ಕಳೆದ 15 ವರ್ಷಗಳಲ್ಲಿ ಸುಮಾರು 3 ಬಾರಿ ನಾವು ಸಂಪೂರ್ಣ ಸೂರ್ಯಗ್ರಹಣ ನೋಡಲು ಸಾಧ್ಯವಾಗಿದೆ. ಆದರೆ, ಮುಂದಿನ ಸಂಪೂರ್ಣ ಸೂರ್ಯಗ್ರಹಣ ನೋಡಬೇಕಾದಲ್ಲಿ ನಾವಿನ್ನೂ 78 ವರ್ಷ ಅಂದರೆ 2087ನೇ ಇಸವಿಯವರೆಗೆ ಕಾಯಬೇಕು. ಶೇ. 95ರಷ್ಟು ಗ್ರಹಣವನ್ನು ಮುಂಬೈನಲ್ಲಿ ನಾವು ನೋಡಬಹುದಾದರೆ, ಶೇ. 80ರಷ್ಟನ್ನು ದೆಹಲಿ, ಬೆಂಗಳೂರು, ಚೆನ್ನೈ ಮತ್ತು ಇತರೆ ನಗರಗಳಲ್ಲಿ ನೋಡಬಹುದು. ಬಿಹಾರದ ಹಳ್ಳಿಯೊಂದರಲ್ಲಿ ಮಾತ್ರವೇ ಅದನ್ನು 4 ನಿಮಿಷ ಕಾಲ ನೋಡಬಹುದು. ನಮ್ಮ ಮುಂಗಾರು ಮಳೆ ರೈತರಿಗೆ ಕೈಕೊಟ್ಟಂತೆ ಹವಾಮಾನ ವೇನಾದರೂ ಕೈಕೊಡದಿದ್ದಲ್ಲಿ ಅಪರೂಪದ ಗ್ರಹಣವನ್ನು ನೋಡಿ ಆನಂದಿಸಬಹುದು.

ವಿಶ್ವದೆಲ್ಲೆಡೆ ಗ್ರಹಣ ದರ್ಶನದ ಜಾತ್ರೆ:

ಅಂತರ್ಜಾಲಕ್ಕೆ ಸದಾ ಅಂಟಿಕೊಂಡು ಕೂರುವ ಮಂದಿಗೋಸ್ಕರ ಅಂತರ್ಜಾಲದ ಹಲವಾರು ತಾಣಗಳಲ್ಲೂ ಕೂಡ ಸೂರ್ಯಗ್ರಹಣದ ನೇರ ಪ್ರಸಾರ ಮಾಡಲಾಗುತ್ತದೆ. ಅಲ್ಲದೆ ವಿಶ್ವದಾದ್ಯಂತ ಇಂಥಹ ಗ್ರಹಣ ಸೆರೆಹಿಡಿಯುವ ಹಲವು ಸಂಘ ಸಂಸ್ಥೆಗಳೇ ಇವೆ. ಗ್ರಹಣ ಸೆರೆಹಿಡಿಯುವ ಅಥೇನಿಯಂ ಎಂಬ ಸರ್ಕಾರೇತರ ಸಂಸ್ಥೆಯು ಜುಲೈ 22ರಂದು ನವದಹಲಿಯಿಂದ ಬಿಹಾರಕ್ಕೆ ಒಂದು ವಿಮಾನಯಾನವನ್ನು ಹಮ್ಮಿಕೊಂಡಿದೆ. ಇದರಲ್ಲಿ



ಸುಮಾರು 100 ಮಂದಿ ಕೂರಬಹುದಿದ್ದು, ಭೂಮಿಯಿಂದ ಸುಮಾರು 41,000 ಅಡಿ ಎತ್ತರದಲ್ಲಿ ಮೂರು ತಾಸು ಗ್ರಹಣದ ಅನುಭವ ನೀಡುವ ಈ ಯಾನದ ಟಿಕೆಟ್ ಬೆಲೆ ರೂ. 80,000/- ದವರೆಗೂ ಇದೆ. ನಮ್ಮ ಭಾರತೀಯ ಜ್ಞಾನ ವಿಜ್ಞಾನ ಸಮಿತಿಯೂ (ಬಿಜಿವಿಎಸ್) ಕೂಡ ರಾಜ್ಯಾದ್ಯಂತ ಸುಮಾರು 500 ಶಾಲಾ ಕೇಂದ್ರಗಳಲ್ಲಿ 'ಸೌರ ಹಬ್ಬ' ಎಂಬ ಹೆಸರಿನಲ್ಲಿ ಗ್ರಹಣ ವೀಕ್ಷಣಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಮೂಢನಂಬಿಕೆಯ ಗ್ರಹಣದರ್ಶನ:

ಅಂತರ್ಜಾಲ, ಟಿವಿ ಮಾಧ್ಯಮ ಮತ್ತು ಇತರೆ ಸುದ್ದಿ ಮಾಧ್ಯಮಗಳ ಶಿಕ್ಷಣದ ಹೊರತಾಗಿಯೂ ಬಹುಸಂಖ್ಯಾತ ಜನರಲ್ಲಿ ಗ್ರಹಣದ ಕುರಿತಂತೆ ಒಂದು ರೀತಿಯ ಭೀತಿ ಇದ್ದೇ ಇದೆ. ಸೂರ್ಯನಿಂದ ಹೊರಸೂಸುವ ಅಲ್ಟ್ರಾ ವಯೋಲೆಟ್ ಕಿರಣಗಳು ಮತ್ತು ತೆಳು ಕ್ಷ-ಕಿರಣಗಳ ಕುರಿತಂತೆ ತಿಳುವಳಿಕೆಗಳನ್ನು ನೀಡುತ್ತಿದ್ದಾಗ್ಯೂ, ಗ್ರಹಣ ಸಂದರ್ಭದಲ್ಲಿ ಸಾಮಾನ್ಯರು ಕೂಡ ಮನೆಯಿಂದ ಹೊರಗೆಬರದಿರುವುದು, ಗರ್ಭಿಣಿಯರು ಮತ್ತು ಮಕ್ಕಳಿಗೆ ತೀವ್ರ ತೊಂದರೆಯುಂಟಾಗುವುದೆಂಬ ಭಯದಿಂದ ಕೊಠಡಿಯಿಂದ ಆಚೆ ಕಳುಹಿಸದಿರುವುದು, ಇತ್ಯಾದಿಯಂಥಹ ಮೂಡನಂಭಿಕೆಗಳು ಇನ್ನೂ ವ್ಯಾಪಕವಾಗಿ ಆಚರಣೆಯಲ್ಲಿವೆ. ಕೆಲವು ಅತಿಹಿಂದುಳಿದ ದೇಶಗಳಲ್ಲಿ ಹಿಂಸೆಗಳು ಕೂಡ ಜರುಗುತ್ತವೆ. ಗ್ರಹಣಗಳುಂಟಾಗುವ ಸಂದರ್ಭದಲ್ಲಿ ಏನೋ ಕೇಡು ಸಂಭವಿಸುತ್ತದೆಂದು ಭಾವಿಸಿ ಅದಕ್ಕೆಲ್ಲಾ ಇಂಥಗೇ ಕುಟುಂಬ ಕಾರಣವೆಂದು ಧಾಳಿಗಳನ್ನು ನಡೆಸಲಾಗುತ್ತದೆ. ನಮ್ಮಲ್ಲೂ ಕೂಡ ವಿದ್ಯಾವಂತ ಮಂದಿಯೂ ಸೇರಿದಂತೆ ಬಹುತೇಕರು ಮನೆಯಿಂದ ಹೊರಗೆ ಕಾಲಿಡುವುದೇ ಇಲ್ಲ, ಗ್ರಹಣಕ್ಕೂ 12 ಘಂಟೆ ಮುಂಚೆಯೇ ಊಟ ಮಾಡಿ ಮುಗಿಸುತ್ತಾರೆ. ಆದರೆ ಬಿಜಿವಿಎಸ್ ವಿತರಿಸುತ್ತಿರುವ ರೂ. 10/- ಬೆಲೆಯ ಸೌರ ಕನ್ನಡಕದ ಮೂಲಕ ಗ್ರಹಣವನ್ನು ಯಾವುದೇ ಆತಂಕವಿಲ್ಲದೆ ವೀಕ್ಷಿಸಬಹುದಾಗಿದೆ. ○



ಭಾರತದ ಸಂಸತ್ತಿನಲ್ಲಿ 300 ಕೋಟ್ಯಾಧೀಶರು

15 ನೇ ಲೋಕಸಭೆಗೆ ಚುನಾಯಿತರಾದ 543 ಸದಸ್ಯರಲ್ಲಿ 300 ಮಂದಿಯು ಅಂದರೆ ಶೇ55.25 ಮಂದಿಯ ಆಸ್ತಿ ಒಂದು ಕೋಟಿ ರೂ.ಗಿಂತಲೂ ಹೆಚ್ಚು. ಕಳೆದ ಲೋಕಸಭೆಯಲ್ಲಿ ಇದ್ದ ಕೋಟ್ಯಧೀಶರ ಸಂಖ್ಯೆ 154. ಅಂದರೆ ಈ ಬಾರಿ ಸುಮಾರು ದುಪ್ಪಟ್ಟು ಆಗಿದೆ.

ಇವರಲ್ಲಿ 141 ಮಂದಿ 'ಆಮ್ ಆದ್ಮಿ' ಲಾಂಛನದ ಕಾಂಗ್ರೆಸ್ ಸದಸ್ಯರು, ಬಿಜೆಪಿ ಸದಸ್ಯರ ಸಂಖ್ಯೆ 58, ಸಮಾಜವಾದಿ ಪಕ್ಷದಿಂದ 14 ಮಂದಿ ಹಾಗೂ ಬಿಎಸ್‌ಪಿ ಯಿಂದ 13 ಮಂದಿ. ಡಿಎಂಕೆಯಿಂದ 12, ಶಿವಸೇನೆಯಿಂದ 9 ಹಾಗೂ ಎನ್‌ಸಿಪಿಯಿಂದ 7 ಸದಸ್ಯರ ಆಸ್ತಿ ಒಂದು ಕೋಟಿ ರೂ.ಗಿಂತಲೂ ಹೆಚ್ಚು.

ಒಟ್ಟು 543 ಲೋಕಸಭಾ ಸದಸ್ಯರ ಘೋಷಿತ ಆಸ್ತಿ ಮೊತ್ತ 280ಕೋಟಿ ರೂ. ಅಂದರೆ ಸರಾಸರಿ 50ಲಕ್ಷ ರೂ. ಇದರಲ್ಲಿ 64 ಕೇಂದ್ರ ಸಚಿವ ಸಂಪುಟದ ಸದಸ್ಯರ ಆಸ್ತಿ ಮೊತ್ತವೇ 50ಕೋಟಿರೂ. ಇವರಲ್ಲಿ 23 ಮಂತ್ರಿಗಳ ಆಸ್ತಿ 5ಕೋಟಿ ರೂ. ದಾಟಿದೆ. ಇನ್ನು 29 ಮಂತ್ರಿಗಳ ಆಸ್ತಿ 50 ಲಕ್ಷದಿಂದ 5ಕೋಟಿ ರೂ. ನಡುವೆ ಇದೆ.

ಇವು ನ್ಯಾಶನಲ್ ಎಲೆಕ್ಷನ್ ವಾಚ್ ಎಂಬ ಸಂಘಟನೆ ಲೋಕಸಭಾ ಸದಸ್ಯರ ಘೋಷಿತ ಆಸ್ತಿ ವಿವರಗಳಿಂದ ಕಲೆ ಹಾಕಿದ ಅಂಕಿ-ಅಂಶಗಳು. 83.6 ಕೋಟಿ ಜನಗಳು ದಿನಕ್ಕೆ ತಲಾ 20ರೂ. ಕೂಡಾ ಖರ್ಚು ಮಾಡಲಾರದ ಪರಿಸ್ಥಿತಿಯಲ್ಲಿರುವ ದೇಶದ ಜನಪ್ರತಿನಿಧಿಗಳು ಇವರು.

ಈ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳ ಈ ಕುತೂಹಲಕಾರಿ ಅಂಕಿ-ಅಂಶಗಳನ್ನು ನೋಡಿ:

- 10ಲಕ್ಷರೂ.ಗಿಂತ ಕಡಿಮೆ ಆಸ್ತಿಯ 3437 ಅಭ್ಯರ್ಥಿಗಳಲ್ಲಿ ಗೆದ್ದವರ ಸಂಖ್ಯೆ ಕೇವಲ 15(ಅಂದರೆ 0.44ಶೇ.)
- 10ಲಕ್ಷದಿಂದ 50ಲಕ್ಷರೂ.ವರೆಗೆನ ಆಸ್ತಿವಂತರಾದ 1785 ಅಭ್ಯರ್ಥಿಗಳಲ್ಲಿ 116 ಮಂದಿ ಗೆದ್ದಿದ್ದಾರೆ(6ಶೇ.)
- 50ಲಕ್ಷದಿಂದ 5ಕೋಟಿ ರೂ. ಆಸ್ತಿವಂತ ಅಭ್ಯರ್ಥಿಗಳಲ್ಲಿ 19 ಶೇ.ಮಂದಿ ಗೆದ್ದಿದ್ದಾರೆ.
- 5ಕೋಟಿ ರೂ. ಮೀರಿದ ಆಸ್ತಿವಂತರಾದ 322 ಅಭ್ಯರ್ಥಿಗಳಲ್ಲಿ 106 ಮಂದಿ ಗೆದ್ದಿದ್ದಾರೆ(33.1ಶೇ.)

ಅಂದರೆ ಆಸ್ತಿ ಪ್ರಮಾಣ ಹೆಚ್ಚಿದಷ್ಟು ಅಭ್ಯರ್ಥಿಗಳು ಗೆಲ್ಲುವ ಸಾಧ್ಯತೆ ಹೆಚ್ಚು! ಏನಿದರ ಅರ್ಥ?

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12, 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor : S.Y.GURUSHANTH

ಸಂಪಾದಕರ ಫೈಲ್.